CC-O. In Public Domain. Digitized by eGangotri

श्री शंकर कृपा

ಶ್ರೀ ಶಂಕರ ಕೃಪಾ

ಮಾಸ ಪತ್ರಿಕೆ

SRINGERI
577139

ಸಂಪುಟ-೨೬]   [ಸಂಚಿಕೆ-೫

ಶ್ರೀ ಪ್ರಮೋದ-ಮಾಘ

FEBRUARY 1991

ವಾರ್ಷಿಕ ಚಂದಾ ರೂ. ೨೪-೦೦   ಬಿಡಿ ಪತ್ರಿಕೆ ರೂ. ೨-೦೦

Sri Vidyabharathi Book Centre, Sringeri

ಶ್ರೀ ಶಾರದಾ ಟ್ರಸ್ಟಿನ ಪ್ರಕಟಣೆಗಳು

CC-0. In Public Domain. Digitized by eGangotri

ಸಂಸ್ಕೃತ :	ರೂ. ಪೈ.
1. ವಿವೇಕಚೂಡಾಮಣಿ : ಜಗದ್ಗುರು ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳ ಭಾಷ್ಯದೊಡನೆ	40 00
2. ಶ್ರೀಮದಭಿನವ ವಿದ್ಯಾತೀರ್ಥ ಯಶೋಭೂಷಣಂ— ಶ್ರೀ ಪಿ. ಸುಬ್ರಹ್ಮಣ್ಯ ಶಾಸ್ತ್ರಿಗಳು	18 00
3. ಕಾಳಿದಾಸ ವಿಶ್ವಮಹಾಕವಿ— ಶ್ರೀ ವಿ. ಎಸ್. ವಿ. ಗುರುಮೂರ್ತಿ ಶಾಸ್ತ್ರಿ	12 00
4. ಭಾಷ್ಯಸಂಗ್ರಹ—ಶ್ರೀ ಜ್ಞಾನಾನಂದ ಭಾರತೀಸ್ವಾಮಿ	3 00
5. ಶ್ರೀ ವಾಸಿಷ್ಠ ಸಂಗ್ರಹ	4 00
6. ಸಂಗ್ರಹಾವಳೀ—ಶ್ರೀ ಜ್ಞಾನಾನಂದ ಭಾರತೀಸ್ವಾಮಿ	1 00
7. ಸಾಮರುದ್ರ ಸಂಹಿತಾಭಾಷ್ಯಂ—ವಿದ್ವಾನ್ ಸುಬ್ರಹ್ಮಣ್ಯ ಶಾಸ್ತ್ರಿ	12 00
8. ಮೂಲಾವಿದ್ಯಾಭಾಷ್ಯವಾರ್ತಿಕ ಸಮ್ಮತಾ— ವಿದ್ವಾನ್ ಕೆ. ಕೃಷ್ಣ ಜೋಯಿಸ್	6 00
9. ಶ್ರೀ ಶೃಂಗಗಿರಿ ಜಗದ್ಗುರು ಚರಿತ್ರ ಸಂಗ್ರಹ— ಶ್ರೀ ಗರಿಕಪಾಟಿ ಲಕ್ಷ್ಮೀಕಾಂತ	10 00
10. ಗುರುವಂಶ ಕಾವ್ಯಮ್	2 00
11. ಪಂಚೀಕರಣ ವಾರ್ತಿಕ—ಶ್ರೀ ಅಭಿನವ ನಾರಾಯಣೇಂದ್ರ ಸರಸ್ವತಿ	2 50
12. ಜ್ಯೋತಿಃಶಾಸ್ತ್ರ ನ್ಯಾಯಮಾಲಾ— ಕೊಳ್ಳೇಗಾಲ ಶ್ರೀ ವೆಂಕಟಸುಬ್ಬಾಶಾಸ್ತ್ರಿ	1 50
13. ವಿದ್ಯಾರಣ್ಯ ಕಥಾತರಂಗಿಣೀ—ವಿದ್ವಾನ್ ಹ. ವೆ. ನಾರಾಯಣಶಾಸ್ತ್ರಿ	5 00
14. ಆಚಾರ್ಯ ಚರಿತಂ	2 00
15. ಭಕ್ತಿಪ್ರಸೂನಾನಿ	3 00
16. ಋಗ್ವೇದೀಯ ಬೋಧಂದ ಲಕ್ಷಣಂ-ಪದರತ್ನಂ— ಶ್ರೀ ಕೆ. ಎಸ್. ವೆಂಕಟರಾಮಾಶಾಸ್ತ್ರೀ	5 00
17. ಸೂರ್ಯನಮಸ್ಕಾರ ಮಂತ್ರಪ್ರಶ್ನಃ	5 00
18. ನೈಷ್ಕರ್ಮ್ಯಸಿದ್ಧಿ—ಸಂ|| ಶ್ರೀ ಕೆ. ವಿ. ಸುಬ್ಬರತ್ನಂ ಐಯ್ಯರ್	10 00
19. ಭಕ್ತಿಸುಧಾತರಂಗಿಣೀ-ಭಾಗ ೧—ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳು ರಚಿಸಿರುವ ಸ್ತೋತ್ರಗಳು	5 00
20. ಪಂಚದಶೀ—ಶ್ರೀ ಜ್ಞಾನಾನಂದಭಾರತೀ ಸ್ವಾಮಿಗಳ ಆಂಗ್ಲ ಅನುವಾದದೊಡನೆ	30 00
21. ಶ್ರೀ ಶಿವಗೀತಾ ಭಾಷ್ಯಂ— ಜಗದ್ಗುರು ಶ್ರೀಮದಭಿನವ ನರಸಿಂಹಭಾರತೀ ಸ್ವಾಮಿಗಳು	25 00
22. ಶ್ರೀ ಗಣೇಶ ತ್ರಿಶತೀ—ಸಹಸ್ರನಾಮಾವಳೀ ಚ	3 50
23. ಶ್ರೀ ಲಲಿತಾಸಹಸ್ರನಾಮಸ್ತೋತ್ರಂ	3 00

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರ ಕೃಪಾ

ಸಂಪುಟ–೨೬]

[ಸಂಚಿಕೆ–೫

ಶ್ರೀ ಪ್ರಮೋದ-ಮಾಘ

ಸಂಪಾದಕರು :

ಎಸ್. ರಾಮಚಂದ್ರಶಾಸ್ತ್ರೀ, ಎಂ.ಎ.,

FEBRUARY 1991

ಪ್ರಕಾಶಕರು :

ಪಿ. ಆರ್. ಹರಿಹರನ್

4581, "ಗೋಮತಿ", ನರಸಿಂಹರಾಜ ಮೊಹಲ್ಲಾ

ಮೈಸೂರು–570 007

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯಾನುಕ್ರಮಣಿಕೆ

ಪ್ರಾರ್ಥನೆ

ಪುಟ

೧. ಗೀತೆಯು ತೋರಿಸುವ ದಾರಿ :
ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳ ಉಪದೇಶಾಮೃತ 1

೨. ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ
ಉಪದೇಶಾಮೃತ ... 9

೩. ದರ್ಶನಾನಿ—ಶೃಂಗಗಿರಿ ಶ್ರೀ ಕವಿ ನರಸಿಂಹಶರ್ಮಾ ... 15

೪. ಅದ್ವೈತದರ್ಶನ—ಡಾ. ಎಂ. ಎಲ್. ನರಸಿಂಹಮೂರ್ತಿ,
ಎಂ.ಎ., ಪಿಹೆಚ್.ಡಿ., ವಿದ್ವಾನ್ ... 21

೫. ಮಧ್ವತಂತ್ರ ಮುಖಮರ್ದನಮ್—(ಮುಂದುವರೆದುದು-೧೬) 25

೬. ಉಪನಿಷತ್ತಿನ ಕಥೆಗಳು—೨. ನಚಿಕೇತ
ವಿದ್ವಾನ್ ಎನ್. ರಂಗನಾಥಶರ್ಮಾ ... 29

೭. ವೈದಿಕ ಸಂಸ್ಕಾರಗಳು—ತ್ಯಾಮಗೊಂಡ್ಲು ಕೃಷ್ಣಭಟ್ಟ ... 33

೮. ಧರ್ಮಜ್ಞ ಶ್ರೀ ರಾಮಚಂದ್ರ—
ಶ್ರೀ ಹರಿಹರಪುರ ಬಿ. ಸುಬ್ರಹ್ಮಣ್ಯಂ ... 37

೯. ಶ್ರೀ ರಾಮಾಯಣ—ಒಂದು ಅಧ್ಯಯನ
ಶ್ರೀಮತಿ ಡಿ. ಶ್ರೀಮತೀ, ಎಂ.ಎ., ಬಿ.ಇಡಿ., ... 43

೧೦. ಕರಾಳ ಶಾಸನದ ವಿರುದ್ಧ ಪ್ರತಿಭಟನೆ—
ಶ್ರೀ ಹರಿಹರಪುರ ಬಿ. ಸುಬ್ರಹ್ಮಣ್ಯಂ ... 47

Sri Vidyabharathi Book Centre, Sringeri

CC-0. In Public Domain. Digitized by eGangotri

ಪ್ರಾರ್ಥನೆ

ಸೂತ್ರಪ್ರಗ್ರಹವೇದವಾಜಿನಿ ಮಹನ್ಮೀಮಾಂಸಕಸ್ಯಂದನೇ
ತಿಷ್ಠನ್ ಭಾಷ್ಯಪಿನಾಕಮುಜ್ಜ್ವಲಗುಣಂ ಕೃತ್ವಾತ್ಮಧೀ-
ಸಾಯಕಮ್ ।
ಆಕೃಷ್ಯಪ್ರದಹನ್ನಶೇಷವಿಪದಾಂ ಮೂಲಂ ಪುರಾಣಾಂ ತ್ರಯಂ
ಭೂಯಾನ್ನೋಽಭಿನವಃ ಪುರಾರಿರಶುಭಸ್ಯೋಚ್ಛಿತ್ತಯೇ
ಶಂಕರಃ ॥

(ರಾಮಾನಂದರ ಋಜು ವಿವರಣ ವ್ಯಾಖ್ಯಾನದಲ್ಲಿ)

ಯದ್ಭಾಷ್ಯಸಾಗರಜಯುಕ್ತಮಣೀನ್ ಪ್ರಕೀರ್ಣಾನ್
ಪ್ರಾಪ್ಯಾಧುನಾ ಕತಿಪಯಾನ್ ಕವಯೋ ಭವಂತಿ ।
ತಸ್ಮೈ ನಮೋ ಜನಮನೋಬ್ಜದಿವಾಕರಾಯ
ಕೃತ್ಸ್ನಾಗಮಾರ್ಥನಿಲಯಾಯ ಯತೀಶ್ವರಾಯ ॥

(ಶ್ರೀಬೋಧನಿಧಿಕೃತ ಉಪದೇಶಪ್ರಕರಣ ವ್ಯಾಖ್ಯಾನದಲ್ಲಿ)

Sri Vidyabharathi Book Centre, Sringeri

CC-O. In Public Domain. Digitized by eGangotri

ಅನೃತ ಚರಿತ್ರೆ

ಆದೌ ಜ್ಯೋತಿಷಿಕಾನ್ ಪ್ರಣಮ್ಯ ಭುಜಯೋರಾಸ್ಫಾಲ್ಯ ಪೌರಾಣಿಕಾನ್
ಹಸ್ತಾಬ್ಜೈಃ ಪರಿಪೀಡ್ಯತಾಂಶ್ಚ ಗಣಕಾನ್ ವೈಶ್ಯಾನ್ ಸಮಾಭಾಷ್ಯ ಚ ।
ವೇಶ್ಯಾನಾಂ ಪರಿರಂಭಣೇನ ಮುದಿತಂ ಕಾಯಸ್ಥಸಂಸರ್ಗತಃ
ಪುಷ್ಟೋಽಥಾಥ ಸುವರ್ಣಕಾರಸದನೇ ಸಾನಂದಮಾಸ್ತೇಽನೃತಮ್ ॥

ಮೊದಲು ಜ್ಯೋತಿಷ್ಕರಿಗೆ ತಲೆಬಾಗಿ, ಅನಂತರ ಪೌರಾಣಿಕರ ತೋಳುತಟ್ಟಿ, ಲೆಕ್ಕಗಾರರನ್ನು ಆಮೇಲೆ ಕೈಹಿಡಿದು, ವೈಶ್ಯರೊಡನೆ ಗುಟ್ಟು ಮಾತನಾಡಿ, ವೇಶ್ಯೆಯರ ಆಲಿಂಗನೆಯಿಂದ ಆನಂದಪಟ್ಟು, ನ್ಯಾಯವಾದಿಗಳ ಸಹವಾಸದಿಂದ ಪುಷ್ಟಿಪೊಂದಿ, ಕಡೆಯಲ್ಲಿ ಸುವರ್ಣಕಾರರ ಮನೆಯಲ್ಲಿ **ಸುಳ್ಳು** ಸಂತೋಷದಿಂದ ನೆಲಸಿರುತ್ತದೆ.

ಜೋತಿಷ್ಕರು, ಪೌರಾಣಿಕರು, ಹರಿಕಥೆ ದಾಸರು, ಉಪನ್ಯಾಸಕರು, ಲೆಕ್ಕ ಬರೆಯುವವರು, ವೈಶ್ಯರು, ವೇಶ್ಯೆಯರು, ನ್ಯಾಯವಾದಿಗಳು, ಸುವರ್ಣ ಕಾರರು, ರಾಜಕಾರಣಿಗಳು–ಇವರು ಮೊದಲಾದವರೇ ವ್ಯಾವಹಾರಿಕ ಪ್ರಪಂಚ ದಲ್ಲಿ ಮುಖಂಡರಾದವರು. ಇವರೆಲ್ಲರೂ ಅನೃತ ಪ್ರಧಾನರಾಗಿಯೇ ವ್ಯವಹಾರ ಪ್ರವೀಣರಾಗಿರುತ್ತಾರಲ್ಲವೇ ?

ಶ್ರೀ ಕಾಳಿದಾಸ ಮಹಾಕವಿಯು ವರ್ಣಿಸಿರುವಂತೆ—

ಪರಾತಿಸಂಧಾನಮಧೀಯತೇ ಯೈರ್ವಿದ್ಯೇತಿ ತೇ ಕಿಲಾಪ್ತವಾಚಃ ।

"ಪರರನ್ನು ವಂಚಿಸುವುದನ್ನೇ ವಿದ್ಯೆಯೆಂದು ಅಭ್ಯಾಸಮಾಡುವ ನಾಗರಿಕ ಕುಶಲರೇ ಲೋಕದಲ್ಲಿ ಪರಮಾಪ್ತರಾಗಿರುವವರು."

ಶೃಂಗಗಿರಿ ಕವಿ ನರಸಿಂಹಶರ್ಮಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳ ಉಪದೇಶಾಮೃತ

ಗೀತೆಯು ತೋರಿಸುವ ದಾರಿ

ವಿಶುದ್ಧ ಜ್ಞಾನದೇಹಾಯ ತ್ರಿವೇದೀ ಜ್ಞಾನ ಚಕ್ಷುಷೇ ।
ಶ್ರೇಯಃ ಪ್ರಾಪ್ತಿ ನಿಮಿತ್ತಾಯ ನಮಃ ಸೋಮಾರ್ಧಧಾರಿಣೇ ॥
ನಮಾಮಿ ಯಾಮಿನೀನಾಥ ಲೇಖಾಲಂಕೃತ ಕುಂತಲಾಮ್ ।
ಭವಾನೀಂ ಭವಸಂತಾಪ ನಿರ್ವಾಪಣ ಸುಧಾನದೀಮ್ ॥

ಭಗವದ್ಗೀತೆಯೆಂಬುದು ಭಗವಂತನು ಅನುಗ್ರಹಿಸಿ ಕೊಟ್ಟಿರುವ ಒಂದು ಗ್ರಂಥ. "ಗೀತೆಯಿಂದ ನಮಗೇನು ಪ್ರಯೋಜನ ? ನಾವು ಅದನ್ನು ಏತಕ್ಕಾಗಿ ಓದಬೇಕು ? ಎಷ್ಟರ ಮಟ್ಟಿನ ಶ್ರದ್ಧೆಯಿಂದ ಓದಬೇಕು ?" ಎಂಬ ಪ್ರಶ್ನೆಗಳಿಗೆ ನಮಗೆ ಉತ್ತರ ದೊರೆತರೆ ನಾವೆಲ್ಲರೂ ಭಗವದ್ಗೀತೆಯನ್ನು ಓದುತ್ತೇವೆ.

ವಿಸೃಜ್ಯ ಸಶರಂ ಚಾಪಂ ಶೋಕ ಸಂವಿಗ್ನಮಾನಸಃ ।

(ಬಿಲ್ಲು ಬಾಣಗಳನ್ನು ಎಸೆದು ಶೋಕದಲ್ಲಿ ಮುಳುಗಿದ ಮನಸ್ಸಿನಿಂದ)—

ಅರ್ಜುನನು ಒಂದು ಮಹಾಯುದ್ಧವನ್ನು ಮಾಡುವುದಕ್ಕಾಗಿ ತಯಾರಾಗಿ ಬಂದನು. ಆ ಯುದ್ಧಕ್ಕೆ ಒಂದು ವೈಶಿಷ್ಟ್ಯವಿದೆ. ಆ ಕಾಲದಲ್ಲಿ ಸಿಕ್ಕಿದವನು ಸಿಕ್ಕಿದವನ ಮೇಲೆ ಸಿಕ್ಕಿದ ಕಡೆಯಲ್ಲಿ ಬಾಣವನ್ನು ಬಿಡುತ್ತಿರಲಿಲ್ಲ. ಯಾರು ಯುದ್ಧ ಮಾಡುವುದಕ್ಕಾಗಿಯೇ ತನ್ನ ಮುಂದೆ ನಿಂತಿರುತ್ತಾನೋ ಅವನನ್ನು ಸೋಲಿಸಬೇಕು ಎಂಬ ಉದ್ದೇಶದಿಂದ ಬಾಣ ಪ್ರಯೋಗ ಮಾಡುತ್ತಿದ್ದನು. ಅಂತಹ ಕಾಲ ಅದು. ಈಗಿನ ಕಾಲದಲ್ಲಿರುವಂತೆ ದಿಢೀರೆಂದು ರಾತ್ರಿಯ ಕಾಲದಲ್ಲಿ ಜನಗಳ ಮೇಲೆ ಅಣು ಬಾಂಬನ್ನು ಹಾಕಿ ಯುದ್ಧದಲ್ಲಿ ಜಯಗಳಿಸಬೇಕೆಂಬ ಭಾವನೆ ಆಗಿನವರಿಗೆ ಇರಲಿಲ್ಲ. ಆದ್ದರಿಂದಲೇ, ಚೆನ್ನಾಗಿ ಯೋಚನೆಮಾಡಿ ತಯಾರಿಮಾಡಿಕೊಂಡು ಯುದ್ಧಕ್ಕಾಗಿ ಅರ್ಜುನನು ರಣರಂಗಕ್ಕೆ ಬಂದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ತಮುವಾಚ ಹೃಷೀಕೇಶಃ ಪ್ರಹಸನ್ನಿವ ಭಾರತ ।

(ಧೃತರಾಷ್ಟ್ರನೇ, ಹೃಷೀಕೇಶನು ಮಂದಹಾಸದಿಂದ ಎರಡು ಸೇನೆಗಳ ನಡುವೆ ಇರುವಂತೆಯೇ ಅರ್ಜುನನಿಗೆ ಹೇಳಿದನು).

ಅರ್ಜುನನು ಶೋಕದಿಂದ ಕಳವಳಗೊಂಡು ಭ್ರಾಂತಿಗೊಂಡವನಾಗುತ್ತಾನೆ. ಮೋಹಗೊಂಡವನಾಗಿ "ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು" –ಎಂಬುದನ್ನು ತಿಳಿಯದವನಾಗಿ ಅರ್ಜುನನು ದಿಗ್ಭ್ರಮೆಗೊಂಡು ನಿಂತ ಸಮಯದಲ್ಲಿ ಭಗವಂತನು ಉಪದೇಶ ಮಾಡಲು ತೊಡಗುತ್ತಾನೆ.

ನಮಗೆ ನಮ್ಮ ಕರ್ತವ್ಯದ ವಿಷಯದಲ್ಲಿ ಏನಾದರೂ ಸಂದೇಹ ಬಂದರೆ, ಆಗ ಸಂಬಂಧಿಸಿದ ಗ್ರಂಥವನ್ನು ತೆಗೆದು ನೋಡುತ್ತೇವೆ. ನಿದ್ದೆ ಮಾಡುವುದು, ತಿನ್ನುವುದು, ಸಿನಿಮಾಕ್ಕೆ ಹೋಗುವುದು ಮುಂತಾದ ಕೆಲಸಗಳು ಸರಿಯಾದವು ಎಂಬ ನಿಶ್ಚಯ ನಮಗಿದ್ದರೆ, ಆಗ ನಾವು ಭಗವದ್ಗೀತೆಯ ದಾರಿಯಲ್ಲಿ ಹೋಗಬೇಕಾಗಿಲ್ಲ. "ನಾವು ಮಾಡುತ್ತಿರುವುದು ಸರಿಯೋ, ತಪ್ಪೋ ಎಂಬ ಸಂದೇಹವುಂಟಾದರೆ, ಆಗ ಅದನ್ನು ಹೋಗಲಾಡಿಸುವುದಕ್ಕಾಗಿ "ಗೀತೆಯನ್ನು ಎಲ್ಲರೂ ಓದಿ" – ಎಂದು ನಾನು ಹೇಳುತ್ತೇನೆ. ಇದನ್ನು ಕೇಳುವವನ ಮನಸ್ಸಿನಲ್ಲಿ ಕಳವಳವಿದೆ. ಉಪದೇಶ ಕೊಡುವವನು ಹೇಗಿದ್ದಾನೆ—

ತಮುವಾಚ ಹೃಷೀಕೇಶಃ ಪ್ರಹಸನ್ನಿವ ಭಾರತ ।

–ಎಂದು ಹೇಳಲಾಗಿರುವಂತೆ, ಮಂದಹಾಸದಿಂದ ಅಲಂಕೃತನಾಗಿದ್ದಾನೆ, ಭಗವಂತ. ಒಬ್ಬನು ತುಂಬ ವ್ಯಸನದಿಂದ ವ್ಯಾಮೋಹಗೊಂಡವನಾಗಿದ್ದರೆ, ಅಂತಹವನಿಗೆ ಉಪದೇಶ ಕೊಡುವವನೂ– "ಅಯ್ಯೋ, ನನ್ನ ಪರಿಸ್ಥಿತಿಯೂ ಹಾಗೆಯೇ ಇದೆ. ನನಗೂ ಏನೂ ತೋರುವುದಿಲ್ಲ "–ಎಂದು ಕೂತುಬಿಟ್ಟರೆ, ಅಂಥವನಿಂದ ಏನು ಪ್ರಯೋಜನ? ಆದರೆ, ಯಾವುದರ ಲೇಪವೂ ಇಲ್ಲದ ಭಗವಂತ ಅರ್ಜುನನನ್ನು ನೋಡಿ–"ಅಯ್ಯೋ ಹುಚ್ಚಪ್ಪ, ನೀನು ಎಷ್ಟು ಚೆನ್ನಾಗಿ ಆಲೋಚನೆ ಮಾಡಿ, ಸರಿಯಾಗಿ ತೀರ್ಮಾನವನ್ನು ತೆಗೆದು ಕೊಂಡು, ರಣರಂಗಕ್ಕೆ ಬಂದು, "ನನ್ನ ಕರ್ತವ್ಯವೇನು ?" ಎಂಬ ವಿಷಯದಲ್ಲಿ ಸಂದೇಹ ಹೊಂದುತ್ತಿದ್ದೀಯಲ್ಲಾ! ಇದು ಹುಚ್ಚುತನವಲ್ಲದೇ ಮತ್ತೇನು?" ಎಂದು ಹೇಳಿ, ಚಿಕ್ಕಮಕ್ಕಳು ಜಗಳವಾಡುವುದನ್ನು ಕಂಡು, ನಾವು ನಕ್ಕು ಅದು ಹುಚ್ಚಾಟ ಎಂದು ಹೇಳುವಂತೆ, ಭಗವಂತನೂ ಅರ್ಜುನನನ್ನು ಕಂಡು ನಕ್ಕು, ಉಪದೇಶ ಮಾಡಿದ್ದಾನೆ. ನಾವು ಗುರುವೆಂದು ಯಾರನ್ನಾದರೂ ಹುಡುಕಬೇಕಾದರೆ ಕೃಷ್ಣನಂತಹ ಗುರುವನ್ನೇ ಹುಡುಕಬೇಕು.

ಮನುಷ್ಯರು ತಮಗಿರುವ ಪ್ರಭಾವಗಳನ್ನು ಉಪಯೋಗಿಸಿಕೊಂಡು, ಹಲವಾರು ಪಾಪಗಳನ್ನು ಮಾಡುತ್ತಾರೆ. ಶರೀರ ಪೋಷಣೆಗಾಗಿಯೇ ಮೂಢರು ಪಾಪವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡುತ್ತಾರೆ–ಎಂದಿದ್ದಾನೆ ಭಗವಂತ. ನಮ್ಮ ಶರೀರವೆಂಬುದು ನಾಶವಾಗಿ ಹೋಗುವಂತಹುದು. ನಾಶವಾಗಿ ಹೋಗುವ ಈ ಶರೀರವನ್ನು ಯಾವಾಗಲೂ ಇಟ್ಟುಕೊಳ್ಳಬೇಕೆಂಬ ಉದ್ದೇಶದಿಂದ ನಾವು ಬಹು ಕಷ್ಟಪಟ್ಟು ಸಾಕುತ್ತೇವೆ. ಯಾವ ವಸ್ತುವಿನಲ್ಲಿ ನಾಶವಾಗುವ ಸ್ವಭಾವವಿರುವುದೋ ಅದು ಯಾವಾಗಲೂ ಇರುವಂತೆ ಮಾಡಲಾಗದು. ಅದರಂತೆಯೇ ಯಾವ ವಸ್ತುವು ಯಾವಾಗಲೂ ಇರಬಲ್ಲುದೋ? ಅದನ್ನು ನಾಶಮಾಡುವುದೂ ಸಾಧ್ಯವಲ್ಲದ ಕೆಲಸ. ಹೀಗಿರುವಾಗ, ಈ ಶರೀರವು ನಾಶವಾಗತಕ್ಕದ್ದು ಎಂದು ತಿಳಿದೂ, ಅದನ್ನು ಯಾವಾಗಲೂ ಇರುವಂತೆ ಮಾಡುವುದಕ್ಕಾಗಿ ನಾವು ಎಷ್ಟೆಷ್ಟೋ ಶ್ರಮ ಪಡುತ್ತೇವೆ. ಇದಕ್ಕೆ ಕಾರಣವೇನೆಂದರೆ, "ನಾಶವಾಗುವ ಈ ದೇಹ ನಮ್ಮದು" – ಎಂಬ ನಮ್ಮ ತಿಳುವಳಿಕೆ. "ನಾನು ಯಾರು? ನನ್ನ ಶರೀರ ಯಾವುದು ?" –ಎಂಬ ವಿಚಾರದಲ್ಲಿ ನಮಗೆ ಸರಿಯಾದ ತಿಳುವಳಿಕೆ ಇಲ್ಲ.

ಅಂತವಂತ ಇಮೇ ದೇಹಾಃ ನಿತ್ಯಸ್ಯೋಕ್ತಾ ಶರೀರಿಣಃ ।
ಅನಾಶಿನೋಽಪ್ರಮೇಯಾತ್ಮಾ ತಸ್ಮಾದ್ಯುಧ್ಯಸ್ವ ಭಾರತ ॥

(ನಮ್ಮ ದೇಹಗಳು ಹೇಗಿದ್ದರೂ ನಾಶವಾಗತಕ್ಕವೇ. ಅವುಗಳೊಳಗೆ ಅವನ್ನು ಧರಿಸಿಕೊಂಡಿರುವ ಚೈತನ್ಯ ಶಕ್ತಿಯಾದರೋ ನಿತ್ಯವಾದದ್ದು, ನಾಶವಿಲ್ಲದ್ದು, ಅಳತೆಗೂ ತೂಕಕ್ಕೂ ಪರೀಕ್ಷೆಗೂ ಸಿಕ್ಕತಕ್ಕದ್ದಲ್ಲ. ನಿನ್ನ ಬಾಣದಿಂದಲೂ, ಕತ್ತಿಯಿಂದಲೂ ಅದಕ್ಕೇನೂ ಬಾಧೆಯಾಗದು. ಆದ್ದರಿಂದ, ಏಳು, ಯುದ್ಧಮಾಡು).

ಇದನ್ನು ಕುರಿತು ಭಗವಂತನು "ಈ ಶರೀರವೆಂಬುದು ನಶಿಸಿ ಹೋಗತಕ್ಕದ್ದು, ಆದರೆ ಆತ್ಮಾ ಎಂಬುದು ಹಾಗೆ ನಾಶಹೊಂದುವುದಿಲ್ಲ. ನೀನು ನಾಶರಹಿತನಾದ ಆತ್ಮಾ. ನಿನ್ನ ಹಿಂದಿನ ಕರ್ಮಗಳ ಕಾರಣದಿಂದ ಈ ಶರೀರವನ್ನು ಪಡೆದಿದ್ದೀಯೆ. ಹಾಗೆ ನಿನಗೆ ಈ ಬಂದಿರುವ ದೇಹ ನಾಶವಾಗುತ್ತದೆಯೇ ಅಥವಾ ಇಲ್ಲವೇ ಎಂದು ನೀನು ಚಿಂತಿಸಬೇಕಾದ ಅಗತ್ಯವೇ ಇಲ್ಲ. ನೀನು ಕ್ಷತ್ರಿಯ ಕುಲದಲ್ಲಿ ಹುಟ್ಟಿ ಯುದ್ಧರಂಗಕ್ಕೆ ಬಂದಿರುವಾಗ ನಿನಗೆ ವಿಧಿಸಲಾಗಿರುವ ಕರ್ತವ್ಯಗಳನ್ನು ಮಾಡಿದರೆ ಮಾತ್ರ ನಿನಗೆ ಶ್ರೇಯಸ್ಸು ಉಂಟಾಗುತ್ತದೆ"– ಎಂದು ಹೇಳುತ್ತಾನೆ. ಹೀಗಿರುವಾಗ ಭಗವಂತನು ಅನುಗ್ರಹಿಸಿರುವ ಗೀತೆಯನ್ನು ನೋಡಿದರೆ, ನಾವು ಎಂತಹ ಕಷ್ಟದಲ್ಲಿ ಸಿಲುಕಿದ್ದರೂ ಸುಖದಲ್ಲೇ ಇದ್ದರೂ ಭಗವತ್ಸ್ವರೂಪವನ್ನು ತಿಳಿಯಲು ಅದು ಸಹಾಯವಾಗುವುದು.

"ಭಗವಂತನೇ ಈ ಲೋಕವನ್ನು ಸೃಷ್ಟಿಸಿದವನು" ಎಂದು ಹೇಳುತ್ತಾರೆ. ಈ ಲೋಕವನ್ನು ಭಗವಂತನು ಸೃಷ್ಟಿಸಿದನು ಎಂಬುದು ನಿಜವೇ, ಸುಳ್ಳೇ, ಎಂಬುದನ್ನು ವಿಚಾರಿಸಿದಾಗ, ಭಗವಂತನೇ ಗೀತೆಯಲ್ಲಿ—

ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್ ॥

Sri Vidyabharathi Book Centre, Sringeri

CC-O. In Public Domain. Digitized by eGangotri

(ಈ ಲೋಕಗಳನ್ನು ನಾನು ಸೃಷ್ಟಿಸಿದ್ದೇನೆ ; ಎಂದು ಬದಲಾಗದವನೆಂದೂ, ಯಾವ ಕ್ರಿಯೆ ಇಲ್ಲದವನೆಂದೂ ತಿಳಿ).

-ಎಂದು ಹೇಳಿದ್ದಾನೆ. "ಇವೆಲ್ಲವನ್ನೂ ಸೃಷ್ಟಿಸಿರುವವನೂ ನಾನೇ. ಇವನ್ನು ಕುರಿತು ಉದಾಸೀನದಿಂದಿರುವವನೂ ನಾನೇ." "ಇವೆರಡೂ ಒಮ್ಮೆಲೇ ಸಾಧ್ಯವೇ"-ಎಂದು ಕೇಳಿದರೆ, ಇವೆರಡೂ ಒಂದೇ ಸ್ಥಳದಲ್ಲಿ ಇರುವುದೆಂದು ತೋರುವುದಾದರೆ, ನಿಜವಾಗಿಯೇ ಹಾಗಿರಬೇಕು ; ಅಥವಾ ವ್ಯವಹಾರಕ್ಕಾಗಿ ನಾವು ಹಾಗೆ ಕಲ್ಪಿಸಿ ಕೊಂಡಿರಬೇಕು. ಭಗವಂತನ ಕರ್ತೃತ್ವ ನಿಜವಾಗಿರುವ ಪಕ್ಷಕ್ಕೆ ಅವನ ಉದಾಸೀನತೆಯನ್ನು ನಾವು ಕಾಣಲಾಗುವುದಿಲ್ಲ.

ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್ ।

ಎಂದು ಭಗವಂತನೇ-"ನಿಜವಾಗಿಯೂ ನಾನು ಕ್ರಿಯಾರಹಿತನು ; ಆದರೆ ವ್ಯಾವಹಾರಿಕ ದೃಷ್ಟಿಯಲ್ಲಿ ನಾನು ಕೆಲಸ ಮಾಡುತ್ತಿರುವಂತೆ ತೋರುತ್ತದೆ" ಎಂದು ಹೇಳಿದ್ದಾನೆ.

ಅರ್ಜುನನು ಕಳವಳಗೊಂಡು ದಿಙ್ಮೂಢನಾಗಿರುವಾಗ ಭಗವಂತನು—

ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮಮೃತಸ್ಯ ಚ ।
ತಸ್ಮಾದಪರಿಹಾರ್ಯೇಽರ್ಥೇ ನತ್ವಂ ಶೋಚಿತುಮರ್ಹಸಿ ॥

(ಹುಟ್ಟಿದವನು ಸಾಯುವುದೂ, ಸತ್ತವನು ಹುಟ್ಟುವುದೂ ನಿಶ್ಚಯ ; ನಮ್ಮಿಂದ ಪರಿಹರಿಸಲಾಗದ ಸಂದರ್ಭಕ್ಕಾಗಿ ನೀನು ಗೋಳಾಡಬೇಡ)

ಎಂದು ಹೇಳುತ್ತಾನೆ. ನೀನು ಏತಕ್ಕಾಗಿ ದುಃಖಿಸುತ್ತೀಯೆ- ಎಂದರೆ, ನೀನು ಅವನನ್ನು ಕೊಂದೆ ಎಂದು ತಿಳಿದು ಅಳುತ್ತೀಯೆ. ಅದೇ ಸಮಯದಲ್ಲಿ ನೀನು ಸತ್ತಿದ್ದರೆ, ನಿನ್ನ ವೈರಿ ತನ್ನ ಕೈಯಿಂದ ನೀನು ಹತನಾದೆ ಎಂದು ತಿಳಿಯುತ್ತಾನೆ. ನಿಮ್ಮಿಬ್ಬರ ಕೈಗಳಿಂದ ಪರಸ್ಪರವಾಗಿ ನೀವಿಬ್ಬರೂ ಸಾಯಬಾರದು ಎಂಬುದಾದರೆ, ಭಗವಂತನು ಏನು ತಾನೆ ಮಾಡಬೇಕು. ಆದ್ದರಿಂದ, ನಾವು ನಮ್ಮ ಕರ್ತವ್ಯವನ್ನು ಮರೆಯದೇ ಇರಬೇಕು.

ಈ ರೀತಿಯಲ್ಲಿ ಅನೇಕ ಸೂಕ್ಷ್ಮ ವಿಷಯಗಳನ್ನು ಭಗವಂತನು ಬಹು ವಿವರವಾಗಿ ತಿಳಿಸಿದ್ದಾನೆ. ಇದಕ್ಕಾಗಿ ನಾವೇನೂ ಕಷ್ಟಪಡಬೇಕಾಗಿಲ್ಲ. ನಾವು ಧರ್ಮವನ್ನು ಅನುಷ್ಠಾನ ಮಾಡುತ್ತಿದ್ದರೆ ಸಾಕು. ಎಲ್ಲಿಯವರೆಗೆ ಧರ್ಮದ ಅನುಷ್ಠಾನ ?

ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥

(ಇದರಲ್ಲಿ ತೊಡಗಿಸುವ ಪ್ರಯತ್ನ ವ್ಯರ್ಥವಾಗುವುದಿಲ್ಲ ; ಕೇಡೂ ಉಂಟಾಗುವುದಿಲ್ಲ. ಸ್ವಲ್ಪ ಧರ್ಮವನ್ನು ಮಾಡಿದರೂ ಮಹತ್ತರವಾದ ಭಯದಿಂದ ಕಾಪಾಡುತ್ತದೆ).

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಯತ್ನ ಮಾಡಿದ್ದು ಎಂದಿಗೂ ಫಲವನ್ನು ಕೊಡದೇ ಹೋಗುವುದಿಲ್ಲ. ಮತ್ತು ಸಾಧ್ಯವಾದಷ್ಟು ಪ್ರಯತ್ನಪಟ್ಟರೆ, ಪಾಪವೂ ಇಲ್ಲ. ಯಥಾಶಕ್ತಿ ಧರ್ಮವನ್ನು ಅನುಷ್ಠಾನ ಮಾಡಿದರೆ, ನಾವು ಒಳಿತನ್ನು ಪಡೆಯಬಹುದು. ಭಗವಂತನು ಗೀತೆಯಲ್ಲಿ ಇಂತಹ ಅಮೂಲ್ಯವಾದ ಉಪದೇಶಗಳನ್ನು ಮಾಡಿದ್ದಾನೆ. ಪರಮಾರ್ಥ ವಸ್ತುವನ್ನು ಕುರಿತಿರುವ ಗ್ರಂಥಗಳಲ್ಲಿ ಗೀತೆಗೆ ಪ್ರಥಮ ಸ್ಥಾನ. ಹಲವು ಆಚಾರ್ಯ ಪುರುಷರು ಗೀತೆಗೆ ಭಾಷ್ಯಗಳನ್ನು ಬರೆದಿರುತ್ತಾರೆ. ತಮ್ಮ ತಮ್ಮ ದೃಷ್ಟಿಕೋನಗಳಿಂದ ಅವರುಗಳು ವ್ಯಾಖ್ಯಾನ ಮಾಡಿದ್ದಾರೆ. ಆದರೆ, ಆಳವಾಗಿ ಅಭ್ಯಾಸ ಮಾಡದೆ ಕೇವಲ ಆಪಾತತಃ ಓದಿದರೆ, ಅಂಥವನಿಗೆ ವಿಪರೀತವಾದ ಫಲವೇ ದೊರಕುತ್ತದೆ. ಆದ್ದರಿಂದ ಭಗವದ್ಗೀತೆಯೆಂಬ ಉತ್ಕೃಷ್ಟವಾದ ಈ ಗ್ರಂಥವನ್ನು– "ಇದು ನಮ್ಮದು. ಇದು ನಮ್ಮ ಹಿತವನ್ನು ಕುರಿತಾಗಿಯೇ ಹೇಳಲಾಗಿದೆ"–ಎಂಬ ಭಾವನೆಯಿಂದ ನೋಡಬೇಕು.

ಗೀತೆಯಲ್ಲಿ ಪ್ರತಿಪಾದಿತವಾಗಿರುವ ತತ್ತ್ವ ಅದ್ವೈತತತ್ತ್ವ. ಅದನ್ನು ಈಗ ಸ್ವಲ್ಪ ನೋಡೋಣ.

ಈ ಲೋಕವನ್ನು ಮರೆಯುವುದೇ ಅದ್ವೈತತತ್ತ್ವ. ಆದ್ದರಿಂದ ನಾವು ಈ ಲೋಕವನ್ನು ಮರೆಯುತ್ತಾ ಬರಬೇಕು. ದೊಂಬರವನೊಬ್ಬನು ನೀರು ತುಂಬಿದ ಕೊಡವೊಂದನ್ನು ತಲೆಯ ಮೇಲಿಟ್ಟುಕೊಂಡು ಆಡುತ್ತಲೇ ಇರುತ್ತಾನೆ. ಹಾಗೆ ಆಡುತ್ತಿರುವಾಗ ನಮ್ಮನ್ನು ನೋಡುತ್ತಲೇ ಇರುತ್ತಾನೆ. ಕೈಕಾಲುಗಳನ್ನು ಆಡಿಸುತ್ತಾ ಕುಣಿಯುತ್ತಲೂ ಇರುತ್ತಾನೆ. ಆದರೆ, ಅವನ ಯೋಚನೆಯೆಲ್ಲ "ಕೊಡ ಎಲ್ಲಿ ಬಿದ್ದುಬಿಡುವುದೋ ? ಅದರಲ್ಲಿರುವ ನೀರು ಎಲ್ಲಿ ಚೆಲ್ಲಿಹೋಗುವುದೋ ?" ಎಂದೇ ಇರುತ್ತದೆ. ಅದರಂತೆಯೇ ನಮ್ಮ ಚಿಂತನೆಯನ್ನೆಲ್ಲ ಪರವಸ್ತುವಿನಲ್ಲಿಟ್ಟು, ಲೋಕದ ಕಾರ್ಯವನ್ನು ಮಾಡುವಾಗ ಉದಾಸೀನವಾಗಿದ್ದು ಅದನ್ನು ಹಚ್ಚಿಕೊಳ್ಳದೆ ಇರಬೇಕು. ನಾವು ಮಾತನಾಡುತ್ತಿರುವಾಗ ಕೈಯನ್ನು ಆಡಿಸುವುದಂಟಲ್ಲವೇ? ಕೈಆಡಿಸಬೇಕಾದುದಕ್ಕೆ ನಾವು ಬೇರೆ ಯೋಚನೆ ಮಾಡಬೇಕಾಗಿಲ್ಲ. ಕೈಗೆ ಅದು ಸಹಜವಾಗಿ ಬರುತ್ತದೆ. ಅದರಂತೆಯೇ, ಈ ಲೋಕ ವ್ಯವಹಾರ ನಡೆಸುವುದು ನಮ್ಮ ಸ್ವಭಾವ. ಅದಕ್ಕಾಗಿ ಬುದ್ಧಿಯನ್ನು, ಹೆಚ್ಚು ಖರ್ಚುಮಾಡಬೇಕಾಗಿಲ್ಲ. ಲೋಕ ವಿಚಾರದಲ್ಲಿ ನಾವು ಉದಾಸೀನವಾದ ಒಂದು ಭಾವನೆಯನ್ನು ಉಂಟುಮಾಡಿಕೊಂಡು ಅದನ್ನು ಹೆಚ್ಚು ಹೆಚ್ಚು ಮಾಡಿಕೊಂಡರೆ, ಅಧ್ಯಾತ್ಮಾನುಭವವು ತಾನಾಗಿಯೇ ಬರುತ್ತದೆ. ಆತ್ಮವು ಸ್ವಯಂ ಪ್ರಕಾಶವಾದದ್ದು. ಅದನ್ನು ಬೆಳಗಿಸಲು ಬೇರೆ ಯಾವ ವಸ್ತುವೂ ಬೇಕಾಗಿಲ್ಲ. ಆದರೆ, ಈಗ ಆಗಿರುವುದೇನು ? ಬೇರೆ ಯಾವುದೋ ವಸ್ತು ಸೇರಿರುವುದರಿಂದ ಆತ್ಮನ ನಿಜಸ್ವರೂಪ ಮರೆಯಾಗಿಹೋಗಿದೆ. ಆತ್ಮನ ವಿಷಯದಲ್ಲಿ ಜ್ಞಾನವಿರಬೇಕು. ಹಾಗೆಯೇ ಲೋಕದ ವಿಷಯದಲ್ಲಿ ಮರೆವೂ ಇರಬೇಕು. ಆಗ ಅದ್ವೈತಾನುಭವವು ತಾನಾಗಿ ಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವೈತವೆಂಬುದು ಎಲ್ಲರಿಗೂ ತಿಳಿದದ್ದೇ. "ನಾನು ಬೇರೆ, ಈ ಪ್ರಪಂಚ ಬೇರೆ, ಭಗವಂತನು ಬೇರೆ" ಎಂಬುದು ಎಲ್ಲರಿಗೂ ತಿಳಿದದ್ದೇ. "ಏನೋ ನಮಗೆ ತಿಳಿಯದೇ ಇದ್ದುದನ್ನು ಹೇಳಿಕೊಟ್ಟರೆ ಪರವಾಗಿಲ್ಲ" ಎಂದು ನಮಗೆ ಆಶೆಯಾಗುತ್ತದೆ. ಇದನ್ನು ಕಂಡ ಶಂಕರರು "ನೀನೇ ಪರವಸ್ತು ಎಂಬುದನ್ನು ತಿಳಿದುಕೊಂಡು ಬಿಡು" ಎಂದು ಹೇಳಿದರು. "ತಿಳಿದು ಕೊಂಡು ಬಿಡು" ಎಂದು ಹೇಳಿರುವುದನ್ನು ಕೇಳಿದಾಗ ತಿಳಿದು ಕೊಂಡು ಬಿಟ್ಟಂತೆಯೇ ಆಗುತ್ತದೆ. ಆದರೆ, ನಮ್ಮ ನಡವಳಿಕೆಯಲ್ಲಿ ಅದು ಬೇರೆ ಎಂದೇ ತೋರುತ್ತದೆಯಲ್ಲಾ ಎಂಬುದು ಕೆಲವರ ಸಂದೇಹ. ಹೌದು. ಹಾಗೆಯೇ ತೋರುತ್ತದೆ. "ಕಾಣುವುದೆಲ್ಲಾ ನಾನೇ" ಎಂದು ತಿಳಿದುಕೊಂಡು ಬಿಡು. ಇದರಿಂದ ಲೋಕಕ್ಕೆ ಯಾವ ವಿಧವಾದ ಕಷ್ಟವೂ ಇಲ್ಲ. ನಮಗೂ ಲೋಕದಿಂದ ಕಷ್ಟವಿಲ್ಲ. ಭಗವಂತನು—

ಹರ್ಷಾಮರ್ಷಭಯೋದ್ವೇಗೈರ್ಮುಕ್ತೋ ಯಃ ಸಚ ಮೇ ಪ್ರಿಯಃ।

(ಯಾರು ಸಂತೋಷ, ಕೋಪ, ಭಯ, ಉದ್ವೇಗ, ಮುಂತಾದ ಮನೋ ವಿಕಾರಗಳು ಇಲ್ಲದಿರುವನೋ ಅವನು ನನಗೆ ಪ್ರಿಯನಾದವನು)

-ಎಂದು ಹೇಳಿದ್ದಾನೆ. ಯಾರಿಂದ ಲೋಕ ಉದ್ವೇಗ ಹೊಂದುವುದಿಲ್ಲವೋ, ಮತ್ತು ಯಾರು ಲೋಕದಿಂದ ಉದ್ವೇಗ ಹೊಂದುವುದಿಲ್ಲವೋ ಅವನೇ ಭಗವದ್ಭಕ್ತನು ಎಂದು ಆ ಶ್ಲೋಕದ ಮೊದಲನೆಯ ಪಂಕ್ತಿಯಲ್ಲಿ ಹೇಳಲಾಗಿದೆ. ಯಾರಾದರೊಬ್ಬನು ಒಂದು ಚಿಕ್ಕ ತಪ್ಪನ್ನು ಮಾಡಿದಾಗ, ಅದನ್ನು ಕಂಡು ಉದ್ವೇಗಕ್ಕೆ ಒಳಗಾಗುವುದು. ಅಥವಾ ಲೋಕಕ್ಕೆ ಉದ್ವೇಗ ತರುವಂತಹ ಕೆಲಸಗಳಲ್ಲಿ ತೊಡಗುವುದು-ಹೀಗೆ ಮಾಡು ವವರು ಭಕ್ತರಲ್ಲ.

ನಾವು ಭಗವದ್ಗೀತೆಯಿಂದ ಪಡೆಯುವ ಜ್ಞಾನ, ಮೇಲೆ ಹೇಳಿದ ಶ್ಲೋಕದಲ್ಲಿದೆ. ಬೇರೇನನ್ನೂ ನಾವು ತಿಳಿದುಕೊಳ್ಳಬೇಕಾಗಿಲ್ಲ. ನಮ್ಮಿಂದ ಯಾರಿಗೂ ಯಾವ ವಿಧವಾದ ತೊಂದರೆಯೂ ಆಗಬಾರದು. ಯಾರಿಂದ ಏನು ನಡೆದರೂ ನಾವು ಉದ್ವೇಗ ಪಡಬಾರದು. ಮತ್ತು ಸಂತೋಷ, ದ್ವೇಷ, ಭಯ, ದುಃಖ, ಇವನ್ನು ನಾವು ಬಿಟ್ಟುಬಿಡಬೇಕು. ಇವೆಲ್ಲ ಲೋಕದಲ್ಲಿ ವ್ಯವಹರಿಸುವವನಿಗೆ ಬೇಕಾದದ್ದೇ ಅಥವಾ ಬ್ರಹ್ಮಜ್ಞಾನಿಗೆ ಬೇಕಾದದ್ದೇ-ಎಂದು ಕೇಳಿದರೆ, ಲೋಕ ವ್ಯವಹಾರ ಮಾಡು ವವನಿಗೆ ಇವು ಮೊದಲು ಬೇಕಾದವು-ಎಂದು ಹೇಳಬೇಕು. ಏಕೆಂದರೆ, ಬ್ರಹ್ಮಜ್ಞಾನಿಗೆ ಇವು ತಾನಾಗಿಯೇ ಬರುತ್ತದೆ. ನಾವು ಹಾಗಿರಲು ಕಲಿತುಕೊಳ್ಳಬೇಕು. ಬ್ರಹ್ಮ ಜ್ಞಾನಿಯ ಗುಣಗಳಾವುವೆಂದರೆ—

ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ ।

(ಯಾವ ಪ್ರಾಣಿಯನ್ನೂ ದ್ವೇಷಮಾಡದವನು, ಎಲ್ಲರಿಗೂ ಸ್ನೇಹಿತ, ದಯಾಶಾಲಿ)

Sri Vidyabharathi Book Centre, Sringeri

CC-O. In Public Domain. Digitized by eGangotri

–ಎಂಬ ಭಗವದ್ವಾಕ್ಯವನ್ನೇ ನಾವು ತೆಗೆದುಕೊಳ್ಳಬೇಕು. "ಯಾರನ್ನೂ ದ್ವೇಷಿಸಬೇಡ, ಎಲ್ಲರಲ್ಲಿಯೂ ಪ್ರೀತಿಯಿಂದ, ಕರುಣೆಯಿಂದ ಇರು" ಎಂಬುದೇ ಭಗವಂತನ ಉಪದೇಶ. ರಾಮಾಶಾಸ್ತ್ರಿಗಳು ನಮಗೆ ಬೇಕಾದವರೆಂದರೆ, ಕೃಷ್ಣಶಾಸ್ತ್ರಿಗಳಿಗೆ ಕೋಪ ಬರುತ್ತದೆ. ಆದ್ದರಿಂದ –"ಬೇಡದವರು ಯಾರೂ ಇಲ್ಲ" ಎಂದು ಹೇಳಿಬಿಟ್ಟರೆ, ಯಾರಿಗೂ ಕೋಪವಿಲ್ಲ.

ಕೋಪ ಬರಬೇಕಾದರೆ ಮೊದಲು ಶರೀರದಲ್ಲಿ 'ಅಹಂಕಾರ' ಇರಬೇಕು. ಜ್ಞಾನಿಗೆ ಅದೂ ಅಲ್ಲ. ಏಕೆಂದರೆ –"ಏನೋ ನಡೆಯುತ್ತಿದೆ. ಅದನ್ನು ನಾನು ನೋಡುತ್ತಿದ್ದೇನೆ. ಅದಕ್ಕೆ ನಾನು ಸಾಕ್ಷಿಯಾಗಿದ್ದೇನೆ" ಎಂದೇ ಅವನು ಭಾವಿಸುತ್ತಾನೆ. ಇಂತಹ ಭಾವನೆಯನ್ನೇ ನಾವೂ ಬೆಳಸಿಕೊಳ್ಳಬೇಕು. ಆಗಲೇ ನಾವೂ ಭಗವಂತನ ಪ್ರೀತಿಗೆ ಪಾತ್ರರಾಗುತ್ತೇವೆ. ಇಂತಹ ಸ್ಥಿತಿ ಯಾರಿಗೆ ಬೇಡ? ಮಂತ್ರಿಗಳಿಗೂ ಬೇಕು; ಲೋಕ ವ್ಯವಹಾರದಲ್ಲಿ ಬಾಳನ್ನು ನಡೆಸುವವರಿಗೂ ಬೇಕು. ಬ್ರಹ್ಮಜ್ಞಾನಿಗಾದರೊ ಇದು ಸಹಜವಾಗಿ ಇರುವ ಸ್ಥಿತಿ. ಬ್ರಹ್ಮಜ್ಞಾನಿಗಳಿಗೆ ಸಹಜವಾಗಿ ಯಾವ ಸ್ಥಿತಿಯಿರುವುದೋ ಅದು ಲೋಕವ್ಯವಹಾರದಲ್ಲಿ ಮುಳುಗಿರುವವರಿಗೆ ಅವಶ್ಯವಾಗಿ ಬೇಕು. ಇಂತಹ ಉಪದೇಶಗಳನ್ನೇ ಭಗವಂತನು ಗೀತೆಯಲ್ಲಿ ಮಾಡಿರುತ್ತಾನೆ.

ಇದರಿಂದ ಗೀತೆಯನ್ನು ಓದುವುದು ತಪ್ಪೋ ಸರಿಯೋ ಎಂಬುದನ್ನು ನಾವು ನಿರ್ಣಯಿಸಿಕೊಳ್ಳಬಹುದು. ಕೆಲವರು ಇದನ್ನು ಓದದೆಯೇ ಬ್ರಹ್ಮಜ್ಞಾನಿಗಳಾಗಿರಬಹುದು; ಅಥವಾ ಬೇರೆ ಮಾರ್ಗದಿಂದ ಬ್ರಹ್ಮಜ್ಞಾನಿಗಳಾಗಿ ಇಂತಹ ಸದ್ಗುಣಗಳನ್ನೆಲ್ಲಾ ಪಡೆದಿರಬಹುದು. ಆದರೆ ನಾವು ಗೀತೆಯನ್ನು ಓದಿಯೇ ಇದನ್ನು ತಿಳಿದುಕೊಳ್ಳಬೇಕು. ಆದ್ದರಿಂದ "ಇವನು, ಅವನು," ಎಂಬ ಭೇದವಿಲ್ಲದೆ ಎಲ್ಲರೂ ಇದನ್ನು ಓದಿ ಶ್ರೇಯಸ್ಸನ್ನು ಪಡೆಯಲಿ.

ಅನು : **ಡಿ. ಆರ್. ವೆಂಕಟರಮಣನ್**

Sri Vidyabharathi Book Centre, Sringeri

CC-O. In Public Domain. Digitized by eGangotri

The Western India Industrial Corporation Limited

Regd. Office :

4581, Narasimharaja Mohalla, Mysore-570007.

Board of Directors :

1. Sri P. R. Hariharan (*Chairman*)
2. Sri P. R. Venkatesan
3. Sri Viswanath Subramanyam
4. Sri H. Ramakrishna
5. Sri A. D. Ramaswamy
6. Smt. Kalpana Ramachandra

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲೋಕಾಮಯಹರ ಕಸ್ತೂರಿ ಮಾತ್ರೆಗಳು

ಕ್ರಿ. ಶ. 1900 ರಿಂದಲೂ ಜಗತ್ಪ್ರಸಿದ್ಧವಾಗಿರುವ ಕಸ್ತೂರಿ ಮಾತ್ರೆಗಳು
ಮಕ್ಕಳು ಮತ್ತು ದೊಡ್ಡವರ ಮಂದ, ಎಳವು (ಪಕ್ಕೆ ಕಚ್ಚಿ ಎಳೆವುದು)
ಶೀತ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮು, ನೆಗಡಿ, ಅಜೀರ್ಣಭೇದಿ,
ಜೀರ್ಣಕಾಲದಲ್ಲಿ ಬರುವ ತಲೆನೋವು, ಆಗಾಗ್ಗೆ ಬರುವ ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನೂ ಗುಣಪಡಿಸುತ್ತದೆ.

ದಂತೋಜ್ವಲ ಹಲ್ಲುಪುಡಿ

ಔಷಧೋಪಯುಕ್ತ, ಸುಗಂಧಭರಿತ, ದಂತರೋಗ ಪರಿಹಾರ ಹಲ್ಲುಪುಡಿ,
ನೀವು ಒಮ್ಮೆ ಉಪಯೋಗಿಸಿ ಇದರ ಗುಣವನ್ನು ಪರೀಕ್ಷಿಸಿ.
ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಉಪದೇಶಾಮೃತ

(ಮುಂದುವರೆದುದು)

ಶ್ರೀ ಶಂಕರಭಗವತ್ಪಾದರ ಸಮಯದಲ್ಲಿ ಸನಾತನ ಧರ್ಮಕ್ಕೆ ವಿರುದ್ಧವಾದ ಅನೇಕ ವಿಚಾರಧಾರೆಗಳು ಪ್ರಚಲಿತವಾಗಿದ್ದವು. ಇತರ ಮತಗಳ ನಿಸ್ಸಾರತೆಯನ್ನು ಅವರು ಪ್ರಕಾಶಪಡಿಸಿ, ವೈದಿಕ ಧರ್ಮವನ್ನು ಪ್ರತಿಷ್ಠಾಪಿಸಿದರು. ಮತ್ತು ಅನೇಕ ಗ್ರಂಥಗಳನ್ನು ರಚನೆಮಾಡಿ ಮಾನವ ಜನಾಂಗಕ್ಕೆ ಅನುಗ್ರಹಮಾಡಿದರು. ವಿವಿಧ ಜನಗಳಲ್ಲಿನ ಅಧಿಕಾರ ಭೇದವನ್ನು ಪರಿಗಣಿಸಿ, ಅವರು ವಿವಿಧ ಗ್ರಂಥಗಳನ್ನು ರಚನೆ ಮಾಡಿದರು. ನ್ಯಾಯಶಾಸ್ತ್ರ, ಮುಂತಾದ ಶಾಸ್ತ್ರಗಳಲ್ಲಿ ಪರಿಣತರಾದ ವಿದ್ವಾಂಸರಿಗೆ ಅವರು ಸೂತ್ರಭಾಷ್ಯವನ್ನು ರಚನೆಮಾಡಿದರು. ಶಾಸ್ತ್ರಗಳ ಅಧ್ಯಯನವಿಲ್ಲದೆ ಕೇವಲ ಸಂಸ್ಕೃತ ಜ್ಞಾನವಿರುವವರಿಗೆ.ಶ್ರೀ ಶಂಕರರು ಪ್ರಕರಣಗ್ರಂಥಗಳನ್ನು ರಚನೆಮಾಡಿದರು. ವಿವೇಕ ಚೂಡಾಮಣಿ, ಸರ್ವವೇದಾಂತ ಸಿದ್ಧಾಂತಸಾರಸಂಗ್ರಹ, ಉಪದೇಶಸಾಹಸ್ರೀ, ಪ್ರಬೋಧಸುಧಾಕರ, ಮುಂತಾದುವು ಕೆಲವು ಪ್ರಕರಣಗ್ರಂಥಗಳು. ಈಗ್ರಂಥಗಳೂ ಸಹ ಸುಮಾರು 500 ರಿಂದ 1200 ಶ್ಲೋಕಗಳನ್ನು ಹೊಂದಿರುತ್ತವೆ. ಸಂಸ್ಕೃತದ ಕೇವಲ ಆಪಾತತಃ ಜ್ಞಾನಹೊಂದಿ, ಈ ಪ್ರಕರಣಗ್ರಂಥಗಳು ಕಷ್ಟವೆನಿಸುವವರಿಗೆ ಕೇವಲ ನೂರು ಶ್ಲೋಕಗಳಿರುವ "**ಶತಶ್ಲೋಕೀ**" ಎಂಬ ಗ್ರಂಥವನ್ನು ಅವರು ರಚನೆ ಮಾಡಿರುತ್ತಾರೆ. ಇದೂ ಸಹ ದೀರ್ಘವಾದುದೆಂದು ಹೇಳುವ ವ್ಯಕ್ತಿಗಾಗಿ ಕೇವಲ ಹತ್ತು ಶ್ಲೋಕಗಳು ಮಾತ್ರ ಇರುವ "**ದಶಶ್ಲೋಕೀ**" ಎಂಬುದನ್ನು ಶ್ರೀ ಶಂಕರರು ರಚಿಸಿರುತ್ತಾರೆ. ಇದೂ ಸಹ ದೀರ್ಘವಾದುದೆಂದು ತಿಳಿಯುವ ವ್ಯಕ್ತಿಯು, ಪರಮಾರ್ಥ ತತ್ತ್ವವನ್ನು ಕೇವಲ ಒಂದೇ ಶ್ಲೋಕದಲ್ಲಿ ತಿಳಿಸುವ "**ಏಕಶ್ಲೋಕೀ**" ಯನ್ನು ಓದ ಬಹುದು. ಅವರಿಗಿದ್ದ ಕಾರುಣ್ಯವನ್ನು ನಾವು ಊಹಿಸಲು ಸಾಧ್ಯವಿಲ್ಲ. ಪ್ರತಿನಿತ್ಯವೂ ನಾವು ಅವರಿಗೆ ನಮಸ್ಕಾರ ಸಲ್ಲಿಸುವುದು ನಮ್ಮ ಕರ್ತವ್ಯ.

ವೇದಾಂತಗ್ರಂಥಗಳನ್ನು ರಚಿಸಿರುವುದು ಮಾತ್ರವಲ್ಲದೆ, ಶ್ರೀ ಶಂಕರರು, ಈಶ್ವರ ನನ್ನು ಸಗುಣರೂಪದಲ್ಲಿ ಆರಾಧನೆ ಮಾಡುವವರಿಗೆ ಉಪಯುಕ್ತವಾಗುವಂತೆ ಅನೇಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ತೋತ್ರಗಳನ್ನು ರಚನೆಮಾಡಿರುತ್ತಾರೆ. ಈ ಸ್ತೋತ್ರಗಳಲ್ಲಿ ಅದ್ಭುತವಾದ ವಿಷಯ ಗಳಿವೆ. ಸ್ತೋತ್ರಗಳು, ಸಾಮಾನ್ಯವಾಗಿ, ಈಶ್ವರನ ರೂಪಗಳ ಮಾಹಾತ್ಮ್ಯವನ್ನು ತಿಳಿಸುತ್ತವೆ. ಶ್ರೀ ಶಂಕರರ ಸ್ತೋತ್ರಗಳು ಈ ವಿಧವಾದ ವಿವರಣೆಗಳನ್ನು ಹೊಂದಿ ರುವುದು ಮಾತ್ರವಲ್ಲದೆ, ಪಾರಮಾರ್ಥಿಕ ಸತ್ಯದ ವಿಷಯವಲ್ಲಿ ಉಪದೇಶವನ್ನೂ ಕೊಡುತ್ತವೆ.

ಶ್ರೀ ಶಂಕರರ ದೃಷ್ಟಿಯಲ್ಲಿ ಪಾರಮಾರ್ಥಿಕ ಸತ್ಯವೆಂದರೆ ಏನೆಂಬುದು ನಮಗೆಲ್ಲಾ ತಿಳಿದ ವಿಷಯವೇ. "ಪರಮಾರ್ಥವು ಸತ್, ಚಿತ್ ಮತ್ತು ಆನಂದ ಸ್ವರೂಪವಾದುದು. ಅದೊಂದೇ ಪಾರಮಾರ್ಥಿಕ ಸತ್ಯ. ನಮ್ಮ ಅವಿದ್ಯೆಯಿಂದಲೇ ಸಂಪೂರ್ಣವಾದ ಈ ವಿಶ್ವವು ಪ್ರತೀತವಾಗುತ್ತದೆ. ಆತ್ಮಜ್ಞಾನದಿಂದ ಅವಿದ್ಯಕವಾದ ಈ ಸಂಸಾರವು ನಿವೃತ್ತವಾಗುತ್ತದೆ. ಆತ್ಮಾನುಭವದ ಫಲವೇ ಮೋಕ್ಷ. ಚಿತ್ ನಿರಾಕಾರವಾಗಿದ್ದರೂ, ಭಕ್ತರಿಗೆ ಅನುಗ್ರಹ ಮಾಡುವುದಕ್ಕಾಗಿ ಶಿವ, ವಿಷ್ಣು ಮುಂತಾದ ಆಕಾರಗಳನ್ನು ತೆಗೆದುಕೊಳ್ಳುತ್ತದೆ." ಶ್ರೀ ಭಗವತ್ಪಾದರ ಈ ಅಭಿಪ್ರಾಯವು ಉಪನಿಷತ್ತುಗಳ ಸಂದೇಶವೇ ಹೊರತು ಬೇರೆ ಅಲ್ಲ. ಇದಕ್ಕೆ ಅನುಗುಣವಾಗಿ ಶಿವ, ವಿಷ್ಣು ಹಾಗೂ ಅವನ ಅಂಶಗಳಾದ ರಾಮ, ಕೃಷ್ಣ, ನರಸಿಂಹ, ಇತ್ಯಾದಿ, ಮತ್ತು ದೇವಿ – ಇವರುಗಳ ಮೇಲೆ ಅನೇಕ ಸ್ತೋತ್ರಗಳನ್ನು ರಚಿಸಿರುತ್ತಾರೆ.

"ಲಕ್ಷ್ಮೀನೃಸಿಂಹ ಪಂಚರತ್ನ ಸ್ತೋತ್ರ"ದಲ್ಲಿ ಶ್ರೀ ಶಂಕರರು ಮನಸ್ಸನ್ನು ಕುರಿತು ಹೇಳುತ್ತಾರೆ.–

ತತ್ಪ್ರಭು ಜೀವ ಪ್ರಿಯಮಿಚ್ಛಸಿ ಚೇನ್ನರಹರಿ ಪೂಜಾಂ ಕುರುಸತತಂ ।
ಪ್ರತಿಬಿಂಬಾಲಂಕೃತಿ ಧೃತಿಕುಶಲೋ ಬಿಂಬಾಲಂಕೃತಿಮಾತನುತೇ ॥

ತನ್ನ ಸ್ವಾಮಿಯಾದ ಜೀವನಿಗೆ ಹಿತವನ್ನುಂಟುಮಾಡುವ ವಿಷಯದಲ್ಲಿ ಮನಸ್ಸು ಯಾವಾಗಲೂ ಸನ್ನದ್ಧವಾಗಿರುತ್ತದೆ. ನಿಷ್ಠನಾದ ಸೇವಕನಿಗೆ ತನ್ನ ಸ್ವಾಮಿಯ ವಿಷಯದಲ್ಲಿ ಬೇರೆ ಯಾವ ಆಸೆ ಇರುತ್ತದೆ ?

ತ್ವತ್ಪ್ರಭು ಜೀವ ಪ್ರಿಯಮಿಚ್ಛಸಿ ಚೇನ್ನರಹರಿಪೂಜಾಂ ಕುರು ಸತತಂ ।

"ನಿನ್ನ ಸ್ವಾಮಿಯ ಶ್ರೇಯಸ್ಸನ್ನು ಬಯಸುವೆಯಾದರೆ, ಈಶ್ವರನನ್ನು ಆರಾಧಿಸು. ಮನಸ್ಸು ತನ್ನ ಸ್ವಾಮಿಯ ಶ್ರೇಯಸ್ಸನ್ನು ಧ್ಯೇಯವಾಗಿ ಹೊಂದಿ ರುವುದಾದರೆ, ಮತ್ತೊಬ್ಬನನ್ನು ಆರಾಧನೆ ಮಾಡುವುದರಿಂದ ಫಲಪ್ರಾಪ್ತಿಯಾದೀತೇ ? ತನ್ನ ಸ್ವಾಮಿಯ ಒಳ್ಳೆಯದನ್ನು ಬಯಸುವ ಸೇವಕನು ಮತ್ತೊಬ್ಬನ ಸೇವೆಮಾಡು

Sri Vidyabharathi Book Centre, Sringeri

CC-O. In Public Domain. Digitized by eGangotri

ವುದನ್ನು ನಾವು ಕೇಳಿದ್ದೇವೆಯೇ ? ಇಲ್ಲಿ ಸೂಚಿತವಾಗಿರುವುದು ಬೇರೇ ಪ್ರಸಂಗದಲ್ಲಿ ಉಚಿತವಾಗದಿದ್ದರೂ, ಪ್ರಕೃತ ಸಂದರ್ಭದಲ್ಲಿ ಯುಕ್ತವಾಗಿದೆ.

ಜೀವ ಮತ್ತು ಈಶ್ವರ–ಇವರಿಬ್ಬರೂ ಕ್ರಮವಾಗಿ ಪ್ರತಿಬಿಂಬ ಮತ್ತು ಬಿಂಬಗಳೆಂದು ಶಾಸ್ತ್ರಗಳು ತಿಳಿಸುತ್ತವೆ. ಕನ್ನಡಿಯ ಮುಂದೆ ನಿಂತು ನಾವು ನೋಡಿದಾಗ ಬಿಂಬವಾದ ನಮ್ಮ ಮುಖದ ಪ್ರತಿಬಿಂಬವನ್ನು ನೋಡುತ್ತೇವೆ. ಪ್ರತಿಫಲನ ಸಾಧನವಾದ ಕನ್ನಡಿಯನ್ನು ಈ ದೃಷ್ಟಾಂತದಲ್ಲಿ, "ಉಪಾಧಿ" ಎಂದು ಶಾಸ್ತ್ರಗಳು ಕರೆಯುತ್ತವೆ. ಬಿಂಬ, ಉಪಾಧಿ, ಮತ್ತು ಉಪಾಧಿಯಲ್ಲಿ ಕಂಡುಬರುವ ಪ್ರತಿಬಿಂಬ–ಎಂಬ ಮೂರು ವಸ್ತುಗಳು ನಮಗೆ ಉಪಲಬ್ಧವಾಗುತ್ತವೆ.

ತನ್ನ ಮುಖದ ಪ್ರತಿಬಿಂಬವನ್ನು ಕಂಡ ವ್ಯಕ್ತಿಯೊರ್ವನು, ವಿಭೂತಿ ಇಲ್ಲದೆ ತನ್ನ ಹಣೆಯು ಬರಿಯದಾಗಿರುವುದನ್ನು ಕಾಣಬಹುದು. ಪ್ರತಿಬಿಂಬಿತವಾದ ಮುಖದ ಹಣೆಯಮೇಲೆ ವಿಭೂತಿ ಹಚ್ಚುವುದರಿಂದ, ವ್ಯಕ್ತಿಯು ಲೋಪವನ್ನು ಸರಿಪಡಿಸಿದ ಹಾಗಾಗುತ್ತದೆಯೇ ? ಇಲ್ಲ. ಇದು ಸಹಾಯ ಮಾಡುವುದಿಲ್ಲ. ಮುಖವನ್ನು ಸ್ವಲ್ಪ ಪಕ್ಕಕ್ಕೆ ತಿರುಗಿಸಿದರೆ, ಪ್ರತಿಬಿಂಬಿತವಾದ ಮುಖದ ಹಣೆಯಮೇಲೆ ವಿಭೂತಿಯಿರುವುದಿಲ್ಲ. ಆದ್ದರಿಂದ ಪ್ರತಿಬಿಂಬದ ಸರಿಯಾದ ಜಾಗದಲ್ಲಿ ವಿಭೂತಿಯಿರುವುದನ್ನು ಕಾಣಲು ಆಪೇಕ್ಷಿಸಿದರೆ, ವ್ಯಕ್ತಿಯು ತನ್ನ ಹಣೆಯಮೇಲೆ ವಿಭೂತಿಯನ್ನಿಡಬೇಕು ! ಪ್ರತಿಬಿಂಬವು ಅಲಂಕೃತವಾಗಬೇಕಾದರೆ, ಬಿಂಬವು ಅವಶ್ಯವಾಗಿ ಅಲಂಕೃತವಾಗಿರಬೇಕು.

ಅವಿದ್ಯೆಯ ಉಪಾಧಿಯಲ್ಲಿ ಪ್ರತಿಬಿಂಬಿತನಾದ ಈಶ್ವರನೇ ಜೀವ. ಅವಿದ್ಯೆ ಮತ್ತು ಮಾಯೆ ಪರ್ಯಾಯಪದಗಳು. ಆ ಕಾರಣದಿಂದಲೇ ಶ್ರೀ ಶಂಕರರು ಮನಸ್ಸಿಗೆ ಹೇಳುತ್ತಾರೆ–"ಪ್ರತಿಬಿಂಬವಾದ ಜೀವನ ಶ್ರೇಯಸ್ಸನ್ನು ಬಯಸುವೆಯಾದರೆ, ಬಿಂಬ ಸ್ವರೂಪನಾದ ಈಶ್ವರನನ್ನು ಆರಾಧಿಸು; ಆ ವಿಧವಾದ ಆರಾಧನೆಯು ಸ್ವತಃ ಜೀವನ ಶ್ರೇಯಸ್ಸನ್ನು ಉಂಟುಮಾಡುತ್ತದೆ." ಈ ಪರಮಾರ್ಥ ಸತ್ಯವನ್ನು ಎಷ್ಟು ಸುಂದರವಾಗಿ ನೃಸಿಂಹ ಸ್ತೋತ್ರದಲ್ಲಿ ಶ್ರೀ ಭಗವತ್ಪಾದರು ಅಳವಡಿಸಿದ್ದಾರೆಂಬುದನ್ನು ನಾವು ನೋಡಬಹುದು.

ನೀಲಕಂಠ ದೀಕ್ಷಿತರು ತಮ್ಮ ಒಂದು ಶ್ಲೋಕದಲ್ಲಿ ತಿಳಿಸುತ್ತಾರೆ–

ಅಯಿಭ್ರಾತಶ್ಚೇತಃ ಪರಮಮುಪದೇಶಂ ಶೃಣುಮಮ ।
ಸ್ಮರಾರೇರ್ಚಾಯಾಂ ಪಟುಷು ಕರಣೇಷು ಸ್ಮರ ಫಲಮ್ ॥

"ಎಲೈ ಮನಸ್ಸೆ, ನನ್ನ ಒಳ್ಳೆಯ ಉಪದೇಶವನ್ನು ಕೇಳು. ಅವಯವಗಳು ಇನ್ನೂ ಚೆನ್ನಾಗಿರುವಾಗಲೇ ಈಶ್ವರನನ್ನು ಆರಾಧಿಸಿ, ಅವನ ಅನುಗ್ರಹವನ್ನು ಸಂಪಾದಿಸು."

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಪ್ಪಿನಿಂದ ಕೂಡಿ, ಶಕ್ತಿಯನ್ನು ಕಳೆದುಕೊಂಡಿರುವ ವ್ಯಕ್ತಿ ದೇವಾಲಯಕ್ಕೆ ಹೋಗಬೇಕೆಂದು ಅಪೇಕ್ಷಿಸಿದರೆ, ಅವನು ತನ್ನ ಆಸೆಯನ್ನು ನೆರವೇರಿಸಿಕೊಳ್ಳಲಾರ. ಅಂತಹ ವ್ಯಕ್ತಿಯು ಶಿವರಾತ್ರಿಯ ದಿನ ರಾತ್ರಿ ಜಾಗರಣೆ ಮಾಡಿ ಶಿವನ ಪೂಜೆಯನ್ನು ಮಾಡಬೇಕೆಂದಾಗಲೀ ಅಥವಾ ಕೃಷ್ಣ ಜನ್ಮಾಷ್ಟಮಿಯಂದು ಮಧ್ಯರಾತ್ರಿಯವರೆಗೆ ಪೂಜೆ ಮಾಡಬೇಕೆಂದಾಗಲೀ ಅಪೇಕ್ಷಿಸಿದರೆ, ಅವನ ಪ್ರಯತ್ನವು ವ್ಯರ್ಥವಾಗುತ್ತದೆ. ಆದ್ದರಿಂದ, ಜೀವನದ ಪರಮಧ್ಯೇಯವನ್ನು ಹೊಂದಬೇಕೆಂದು ಇಚ್ಛಿಸುವ ವ್ಯಕ್ತಿಯು, ಅವಯವಗಳು ಪಟುವಾಗಿದ್ದಾಗಲೇ, ಈಶ್ವರನ ಆರಾಧನೆಯನ್ನು ಮಾಡಬೇಕು. ಜೀವನಿಗೆ ಶ್ರೇಯಸ್ಸನ್ನುಂಟುಮಾಡುವುದಕ್ಕಾಗಿ, ಶ್ರೀ ಭಗವತ್ಪಾದರು ಅಪ್ಪಣೆಕೊಡಿಸಿರುವಂತೆ, ನಾವು ಈಶ್ವರನ ಆರಾಧನೆಯನ್ನು ಮಾಡಬೇಕು.

ನೃಸಿಂಹ ಸ್ತೋತ್ರದಲ್ಲಿಯೇ ಶ್ರೀ ಶಂಕರರು ಸೂಚಿಸುತ್ತಾರೆ–

ತವ ಹಿತಮೇಕಂ ವಚನಂ ವಕ್ಷ್ಯೇ ಶೃಣು ಹಿತಕಾಮೋಃ ಯದಿ ಸತತಂ
ಸ್ವಪ್ನೇದೃಷ್ಟಂ ಸಕಲಂ ಹಿ ಮೃಷಾ ಜಾಗ್ರತಿ ಚ ಸ್ಮರ ತದ್ವದಿತಿ ||

ದುಃಖಮಯವಾದ ಈ ಸಂಸಾರವನ್ನು ನಾವು ಏತಕ್ಕೆ ಅನುಭವಿಸುತ್ತೇವೆ ? ನಾವು ನೋಡುತ್ತಿರುವ ಸಂಸಾರವನ್ನು ಪರಮಾರ್ಥಸತ್ಯ ಎಂದು ತಪ್ಪುತಿಳಿದಿರುವುದೇ ಇದಕ್ಕೆ ಕಾರಣ. ಸ್ವಪ್ನವನ್ನು ಕಾಣುವಾಗ ಎಲ್ಲವೂ ಸತ್ಯವೆಂದು ಭಾಸವಾಗುತ್ತದೆ. ಶ್ರುತಿ ತಿಳಿಸುತ್ತದೆ.

ನ ತತ್ರ ರಥಾಃ ನ ರಥಯೋಗಾ ನ ಪಂಥಾನಃ –

ಸ್ವಪ್ನದಲ್ಲಿ ಒಬ್ಬನು ದೊಡ್ಡದೊಡ್ಡರಥಗಳನ್ನೂ, ಸಾರಥಿಗಳನ್ನೂ, ಮಾರ್ಗಗಳು–ಮುಂತಾದುವನ್ನು ನೋಡುತ್ತಾನೆ. ಮತ್ತೆ ಅವನು ಎಲ್ಲ ಕಡೆಯೂ ಸುತ್ತುತ್ತಾನೆ. ಅವನು ಎಚ್ಚರಗೊಂಡಾಗ ಹೇಳುತ್ತಾನೆ – "ನಾನು ಅನೇಕ ವಸ್ತುಗಳನ್ನು ನೋಡಿದೆ; ವಾಸ್ತವವಾಗಿ ಅವೆಲ್ಲವೂ ದಿಟವಲ್ಲದವು." ಸ್ವಪ್ನ ದೆಸೆಯು ಅಸತ್ಯವಾದಂತೆ, ಜಾಗ್ರತ್ತಿನ ಸ್ಥಿತಿಯೂ ಅಸತ್ಯವಾದುದು. ಆದರೂ, ಜಾಗ್ರದವಸ್ಥೆಯನ್ನು ಅಸತ್ಯವೆಂದು ಅಷ್ಟು ಸುಲಭವಾಗಿ ತಳ್ಳಿಹಾಕಲು ಆಗುವುದಿಲ್ಲ. ಈ ಸಂದರ್ಭದಲ್ಲಿ ಶ್ರೀ ಶಂಕರರು ಹೇಳುತ್ತಾರೆ–

ತವ ಹಿತಮೇಕಂ ವಚನಂ ವಕ್ಷ್ಯೇ........

"ನಿನ್ನ ಶ್ರೇಯಸ್ಸಿಗಾಗಿಯೇ ನಾನು ಹೇಳುವುದನ್ನು ಕೇಳು". ಶ್ರೀ ಶಂಕರರ ಈ ಉಪದೇಶವು ಯಾವಾಗ ಪ್ರಯೋಜನಕಾರಿಯಾದೀತು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಖಕಾಮೋ ಯದಿ ಸತತಮ್ ।

ಶಾಶ್ವತವಾಗಿ ಸುಖಿಯಾಗಿರಬೇಕೆಂದು ಒಬ್ಬನು ಇಚ್ಛಿಸಿದಾಗ, ಈ ಉಪದೇಶವು ಫಲ ಕಾರಿಯಾಗುತ್ತದೆ. ಆ ಉಪದೇಶವಾದರೂ ಯಾವುದು ?

ಸ್ವಪ್ನೇ ದೃಷ್ಟಂ ಸಕಲಂ ಹಿ ಮೃಷಾ ಜಾಗ್ರತಿ ಚ ಸ್ಮರ ತದ್ವದಿತಿ ।

"ಸ್ವಪ್ನದಲ್ಲಿ ಕಾಣಬರುವ ಎಲ್ಲ ವಸ್ತುಗಳೂ ಅಸತ್ಯವೆಂದು ನಿನಗೆ ತಿಳಿದಿದೆ. ಅದರಂತೆ, ಜಾಗ್ರದವಸ್ಥೆಯೂ ಸಹ ಅಸತ್ಯವೆಂದು ನೀನು ವಿಚಾರಮಾಡು."

ಈ ರೀತಿಯಾಗಿ ಭಗವತ್ಪಾದರು ತಮ್ಮ ಸ್ತೋತ್ರಗಳಲ್ಲಿಯೂ ಸಹ ವೇದಾಂತ ತತ್ತ್ವವನ್ನು ಪ್ರತಿಪಾದಿಸಿರುತ್ತಾರೆ. ಆದ್ದರಿಂದ, ಸ್ತೋತ್ರಗಳನ್ನು ಕೇವಲ ಬಾಯಿಪಾಠ ಮಾಡಿ, ಮಂದಿರಗಳಲ್ಲಿ ಹೇಳುವುದಕ್ಕಿಂತ, ಶ್ರೀ ಶಂಕರರ ಸ್ತೋತ್ರಗಳಲ್ಲಿನ ಸಾರದ ವಿಷಯದಲ್ಲಿ ಯೋಚನೆಮಾಡುವುದರಿಂದ ಉತ್ತಮ ಫಲ ನಮಗೆ ದೊರಕುತ್ತದೆ. ಗಾಯತ್ರಿಯೇ ಮೊದಲಾದ ಮಂತ್ರಗಳನ್ನು ಹೇಳುವಾಗ ಅವುಗಳ ಅರ್ಥದ ಕಡೆಗೆ ನಾವು ಗಮನ ಹರಿಸಿದಾಗ, ಅವು ನಮಗೆ ವಿಶಿಷ್ಟ ಫಲಗಳನ್ನು ತಂದುಕೊಡುತ್ತವೆ. ಸ್ತೋತ್ರಗಳ ವಿಷಯದಲ್ಲೂ ಇದು ಸತ್ಯ.

ಅನೇಕ ಗ್ರಂಥಗಳನ್ನು ರಚನೆಮಾಡುವುದರ ಮೂಲಕ ಶ್ರೀ ಭಗವತ್ಪಾದರು ನಮಗೆ ದೊಡ್ಡ ಅನುಗ್ರಹ ಮಾಡಿದ್ದಾರೆಂಬುದನ್ನು ಇಲ್ಲಿಯವರೆಗೆ ನಾವು ನೋಡಿದೆವು. ಆದರೂ ನಾವು ಅವರ ಉಪದೇಶಗಳನ್ನು ಗಮನಿಸದೆ, ಪ್ರಾಪಂಚಿಕ ವ್ಯವಹಾರ ಗಳಲ್ಲಿ ಆಸಕ್ತರಾಗಿದ್ದೇವೆ. ಹೀಗಾಗಬಾರದು. ನಾವು ಅವರ ಸ್ತೋತ್ರಗಳನ್ನು ಸಾಧ್ಯವಾದ ಮಟ್ಟಿಗೂ ಪಠಣಮಾಡಬೇಕು, ಮತ್ತು ಅವುಗಳ ಸಾರದ ಕಡೆಗೆ ನಮ್ಮ ಮನಸ್ಸನ್ನು ಏಕಾಗ್ರಗೊಳಿಸಬೇಕು.

ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ।

ಭಗವಂತನೇ ಈ ರೀತಿಯಾಗಿ ಹೇಳುತ್ತಾನೆ. ನಮ್ಮ ಪ್ರತಿನಿತ್ಯದ ಜೀವನದಲ್ಲಿ ಸ್ವಲ್ಪ ಸಮಯವಾದರೂ ನಾವು ಇದಕ್ಕೆ ವಿನಿಯೋಗಿಸಬೇಕು.

ನಮ್ಮ ಬಹುತೇಕ ಸಮಯವನ್ನು ಎಷ್ಟು ವ್ಯರ್ಥವಾಗಿ ನಾವು ಕಳೆಯುತ್ತೇವೆ ? ಇದಕ್ಕೆ ಬದಲು ಭಗವತ್ಪಾದರ ವಿಷಯವನ್ನು ಕುರಿತು ಓದುತ್ತಾ, ಮತ್ತು ಅವರ ಸ್ತೋತ್ರಗಳನ್ನು ಪಠಣಮಾಡುತ್ತಾ ನಮ್ಮ ಸಮಯವನ್ನು ಸಾರ್ಥಕವಾಗಿ ಕಳೆದರೆ, ಅದರಿಂದ ನಮಗೆ ಶ್ರೇಯಸ್ಸಾಗುತ್ತದೆ.

ಹರನಮಃ ಪಾರ್ವತೀಪತಯೇ । ಹರ ಹರ ಮಹಾದೇವ ॥

ಜಾನಕೀಕಾಂತ ಸ್ಮರಣಂ । ಜಯ ಜಯರಾಮ ॥

Sri Vidyabharathi Book Centre, Sringeri

CC-0. In Public Domain. Digitized by eGangotri

THE SADVAIDYASALA PRIVATE LIMITED
SVL
NANJANGUD

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್

ನಂಜನಗೂಡು, ಮೈಸೂರು ಡಿಸ್ಟ್ರಿಕ್ಟ್.

ನಂಜನಗೂಡು ಟೂತ್ ಪೌಡರ್, ಆಯುರ್ವೇದೀಯ ಔಷಧಿಗಳು ಮತ್ತು
ಸುಗಂಧ ದ್ರವ್ಯಗಳನ್ನು ತಯಾರಿಸುವ ಕಾರ್ಖಾನೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ

ವಿಶೇಷವಾಗಿ ಮಕ್ಕಳ ಕೆಮ್ಮು, ನೆಗಡಿ,
ಶೀನ್ಸು ಮತ್ತು ಅಜೀರ್ಣ ವಿಚಾರಗಳಿಗೆ
ದಿವ್ಯೌಷಧ

ಓಜೋಲ

ರಕ್ತವರ್ಧಕ ಮತ್ತು
ಶಕ್ತಿದಾಯಕ
ಸಿದ್ಧೌಷಧ

ಮಹಾ ಸೌಭಾಗ್ಯ ಶುಂಠಿ

ಬಾಣಂತಿಯರು ಪ್ರಸವಾನಂತರ ಆರೋಗ್ಯ ರಕ್ಷಣೆಗೆ ಸೇವಿಸಲು
ಉತ್ಕೃಷ್ಟವಾದ ಲೇಹ್ಯ

ಓಮಂವಾಟರ್

ವಿಶೇಷವಾಗಿ ಮಕ್ಕಳ ಅಜೀರ್ಣ
ವಿಕಾರಗಳು ಮತ್ತು ಭೇದಿಗೆ
ಉತ್ತಮ ಪ್ರತಿಕ್ರಿಯೆ

ಆಮೋದಿನಿ

ಸ್ವರವರ್ಧಕ
ಮನಮೋಹಕ
ಮಾತ್ರೆ

ಬ್ರಾಂಚುಗಳು : **ಮೈಸೂರು, ಬೆಂಗಳೂರು, ಮಂಗಳೂರು**

Sri Vidyabharathi Book Centre, Sringeri

CC-O. In Public Domain. Digitized by eGangotri

ದರ್ಶನಾನಿ

ಜಗಜ್ಜೀವೇಶ್ವರರ ವಿಷಯವನ್ನು ತಿಳಿಸುವ ಶಾಸ್ತ್ರಗಳಿಗೆ ದರ್ಶನಗಳೆಂದು ಹೆಸರು. ಇವುಗಳನ್ನು ಯಥಾವತ್ತಾಗಿ ತಿಳಿದುಕೊಂಡು, ಅದಕ್ಕೆ ತಕ್ಕಂತೆ ಜೀವಿತ ವನ್ನು ನಡೆಸುವುದು ಮಾನವನ ಉತ್ತರೋತ್ತರ ಶ್ರೇಯಸಿದ್ಧಿಗೆ ಕಾರಣವೆಂದು ಎಲ್ಲಾ ದರ್ಶನಗಳೂ ತಿಳಿಸುತ್ತವೆ.

ಇವುಗಳಲ್ಲಿ ಪಾಶ್ಚಾತ್ಯ ದರ್ಶನಗಳು ಮುಖ್ಯವಾಗಿ ಕ್ರೈಸ್ತ ಮತ್ತು ಮಹ ಮದೀಯಗಳೆಂದು ಎರಡು ವಿಧವಾಗಿವೆ. ಕ್ರೈಸ್ತಮತದಂತೆ – Father in the Heaven – ಸ್ವರ್ಗದಲ್ಲಿರುವ ನಿಖಿಲಜಗದಧಿಪತಿಯಾಗಿರುವ ದೇವನನ್ನು, ಅವನ ಪ್ರಿಯಪುತ್ರನಾದ ಏಸುಕ್ರಿಸ್ತನು ಬೈಬಲ್‌ನಲ್ಲಿ ಉಪದೇಶಿಸಿರುವಂತೆ ನಡೆದುಕೊಳ್ಳು ವುದರಿಂದ ಮಾನವನಿಗೆ ಶ್ರೇಯಸ್ಸು ಲಭಿಸುವುದೆಂದು ಅಭಿಪ್ರೇತವಾಗಿದೆ. ಈ ಮತದಂತೆ, ಜೀವನು ಈಗಲೇ ಜೀವನು ದೇಹಸಹಿತನಾಗಿ ಹುಟ್ಟುವುದಾದರೂ, ಅವನು ನಿತ್ಯನಾಗಿ, ಪರಮೇಶ್ವರನಿಂದ ಸೃಷ್ಟನಾಗುತ್ತಾನೆಂದೂ, ಅವನಿಗೆ ಮತ್ತೆ ಜನ್ಮಾಂತರ ಗಳು ಇಲ್ಲವೆಂದೂ ಬೈಬಲ್ ಶಾಸ್ತ್ರದಲ್ಲಿ ನಿರೂಪಿಸಿರುವ ನಿಯಮಗಳಂತೆ ಜೀವಿತಾ ವಸ್ಥೆಯಲ್ಲಿ ನಡೆದರೆ ಅವನಿಗೆ ಶ್ರೇಯಃಸ್ಥಿತಿಯು ಲಭಿಸುತ್ತದೆಂದೂ, ಹಾಗಿಲ್ಲವಾದರೆ ಮುಂದೆ ಅವನಿಗೆ ನರಕಪ್ರಾಪ್ತಿಯಾಗುವುದೆಂದೂ ನಂಬಲಾಗಿದೆ.

ಮಹಮದೀಯರ ಖುರಾನ್ ಶಾಸ್ತ್ರದಂತೆ, ಈ ಮೇಲಿನ ವಿಷಯಗಳೆಲ್ಲವೂ ಸಾಮಾನ್ಯವಾಗಿ ಸಮ್ಮತವಾಗಿರುತ್ತದೆ. "ಅಲ್ಲಾ" ಎಂಬ ದೇವನನ್ನು ಅವರು ಅಂಗೀಕರಿಸುತ್ತಾರೆ. ಕುರಾನ್ ಶಾಸ್ತ್ರದ ನಿಯಮದಂತೆ ವರ್ತಿಸುವುದು ಶ್ರೇಯಸ್ಕರ ವೆಂದು ಅವರ ಅಭಿಮತವಾಗಿದೆ.

ಭಾರತೀಯ ದರ್ಶನಗಳು ಆಸ್ತಿಕ, ನಾಸ್ತಿಕ, ತಾಂತ್ರಿಕಗಳೆಂದು ಮೂರು ವಿಧಗಳಾಗಿವೆ. ಅಪೌರುಷೇಯವಾಗಿ, ನಿತ್ಯವೂ, ಪರಮ ಪ್ರಮಾಣವೂ ಆಗಿರುವ ಶ್ರುತಿಸ್ಮೃತೀತಿಹಾಸಪುರಾಣಗಳನ್ನು ಪ್ರಮಾಣಗಳೆಂದು ಒಪ್ಪದ ಚಾರ್ವಾಕ, ಬೌದ್ಧರ ನಾಲ್ಕು ಪ್ರಭೇದಗಳು ಮತ್ತು ಜೈನ– ಈ ಆರೂ ನಾಸ್ತಿಕ ಮತಗಳು. ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಮೀಮಾಂಸಾ ಮತ್ತು ವೇದಾಂತ – ಈ ಆರೂ ಮೇಲಿನ ಶ್ರುತ್ಯಾದಿಪ್ರಮಾಣಗಳನ್ನು ಅಂಗೀಕರಿಸಿ ಆಸ್ತಿಕ ಮತಗಳಾಗಿವೆ. ಶೈವ, ವೈಷ್ಣ, ಶಾಕ್ತ, ಬ್ರಾಹ್ಮ, ಗಾಣಾಪತ್ಯ, ಕಾಪಾಲಿಕ – ಎಂಬ ಆರು ಆಯಾಯ

Sri Vidyabharathi Book Centre, Sringeri

CC-O. In Public Domain. Digitized by eGangotri

ತಂತ್ರಗಳನ್ನೇ ಪ್ರಮಾಣವೆಂದು ಸ್ವೀಕರಿಸಿ, ತಾಂತ್ರಿಕದರ್ಶನಗಳಾಗಿವೆ. ಈ ದರ್ಶನ ಗಳು ಒಪ್ಪಿಕೊಂಡಿರುವ ಪ್ರಮಾಣಗಳ ಮತ್ತು ಇವುಗಳ ಅರ್ಥಗಳ ಭೇದದಿಂದ ಇವರ ಸಿದ್ಧಾಂತಗಳಲ್ಲಿ ಭೇದವುಂಟಾಗಿದೆ.

ನಾಸ್ತಿಕ ಚಾರ್ವಾಕ ಮತದಲ್ಲಿ ಚಕ್ಷುಃ ಶ್ರೋತ್ರ ಜಿಹ್ವಾ ಘ್ರಾಣ ಸ್ಪರ್ಶ ಗಳೆಂದು ಐದು ಪ್ರಮಾಣಗಳನ್ನೇ ಒಪ್ಪುವುದರಿಂದ, ಅನುಭವಕ್ಕೆ ಬರುತ್ತಿರುವ ಬಾಹ್ಯ ಪ್ರಪಂಚ ಮತ್ತು ಮನುಷ್ಯ, ಪಶು, ಪಕ್ಷಿ, ಪ್ರಾಣಿ, ಕ್ರಿಮಿ, ಕೀಟ – ಮುಂತಾದ ದೇಹಗಳು – ಇವುಗಳಲ್ಲದೇ ಬೇರೆ ಏನೂ ಇಲ್ಲವೆಂದೂ, ಸ್ತ್ರೀ-ಪುರುಷ ಸಂಯೋಗದಿಂದ ಈ ದೇಹಗಳು ಹುಟ್ಟಿ, ಜೀವಿಸಿದ್ದು, ಕೊನೆಗೊಳ್ಳುವುದೆಂದೂ ಜೀವಿಸುವವರೆಗೆ ಯಥಾನುಗುಣವಾಗಿ ಪರಸ್ಪರವಾಗಿ ವಿರೋಧ ಮಾಡದೇ ಯಥಾ ಶಕ್ತಿ ಸುಖದಿಂದ ಇರಬೇಕೆಂದು ಅಭಿಮತವಾಗಿದೆ. ಆಧುನಿಕ ವೈಜ್ಞಾನಿಕ ನಾಗರಿಕ ವಿಚಾರ ಕುಶಲರ ಅಭಿಪ್ರಾಯವು ಇದಕ್ಕೆ ಸಮಾನವಾಗಿರುತ್ತದೆ.

ಇತರ ಎಲ್ಲಾ ದರ್ಶನಗಳೂ ದೇಹವ್ಯತಿರಿಕ್ತನಾಗಿ, ನಿತ್ಯನಾದ ಜೀವನನ್ನೇ ಅಂಗೀಕರಿಸಿ, ಅವನಿಗೆ ಅವನ ಕರ್ಮಾನುಸಾರವಾಗಿ ಜನ್ಮಾಂತರಗಳು ಲೋಕಾಂತರ ಗಳಲ್ಲಿ ಸಂಭವಿಸುತ್ತವೆಂದು, ಆ ಕರ್ಮಾನುಗುಣವಾಗಿ ಇವನಿಗೆ ಸುಖದುಃಖಾನು ಭವಗಳು ಉಂಟಾಗುತ್ತವೆಂದೂ, ಇದೇ ಜೀವನ ಸಂಸಾರ ಸ್ಥಿತಿಯೆಂದೂ, ಇದು ಕ್ಲೇಶಕರವಾಗಿರುವುದರಿಂದ, ಇದರಿಂದ ಬಿಡುಗಡೆಯ ರೂಪವಾದ ಮೋಕ್ಷವು ಅಪೇಕ್ಷಿತ ವಾಗಿದೆಯೆಂದೂ, ಅವರವರು ಸ್ವೀಕರಿಸುವ ಶಾಸ್ತ್ರಗಳ ನಿಯಮಾನುಸಾರವಾಗಿ ಜೀವಿತವನ್ನು ನಡೆಸುವುದರಿಂದ ಮೋಕ್ಷವು ಸಿದ್ಧಿಸುವುದೆಂದು ಅಂಗೀಕೃತವಾಗಿದೆ. ಜೀವನು ದೇಹ ವ್ಯತಿರಿಕ್ತನಾಗಿ, ಚೇತನನಾಗಿ ಇರುವನೆಂದೂ, ಇವನಿಗೆ ಜನ್ಮಾಂತರ ಗಳೂ, ಲೋಕಾಂತರಗಳೂ ಇರುತ್ತವೆಂದೂ, ಇವುಗಳಿಗೆ ಅವರು ಮಾಡುವ ಧರ್ಮ ಕರ್ಮಗಳೇ ಕಾರಣಗಳೆಂದು, – ಈ ಎಲ್ಲ ಮತಗಳಿಗೂ ಸಮಾನವಾಗಿದೆ. ಇವುಗಳ ವಿವರಗಳನ್ನು ಅವರವರ ಪ್ರಮಾಣಗಳಾದ ಶಾಸ್ತ್ರಗಳಿಂದ ತಿಳಿಯಬಹುದು. ಲೋಕೋ ತ್ತರ ಮಹಿಮಾಶಾಲಿಗಳಾಗಿರುವ ಈ ಶಾಸ್ತ್ರಕಾರರ ಉಪದೇಶಗಳೇ ಪ್ರಾಮಾಣಿಕ ಗಳೆಂದು ನಂಬಲಾಗಿದೆ.

ಆಯಾ ಮತಾನುಯಾಯಿಗಳಿಗೆ ಅವರವರ ಸಿದ್ಧಾಂತಗಳಲ್ಲಿ ಪರಮಪ್ರಾಮಾ ಣ್ಯವು ಇದ್ದು, ಬಲವತ್ತರವಾದ ಅಭಿಮಾನವೂ, ಅಪರಿಹಾರ್ಯವಾದ ಶ್ರದ್ಧೆಯೂ ಇರುವುದು ಸಹಜವೇ ಆಗಿರುತ್ತದೆ. ಇದು ಯುಕ್ತವೆಂಬಲ್ಲಿ ಸಂದೇಹವಿಲ್ಲ. **"ಸ್ವಧರ್ಮೇ ನಿಧನಂ ಶ್ರೇಯಃ"**– ಎಂಬಂತೆ ಅವರವರಿಗೆ ಅವರವರ ಮತಧರ್ಮ ಗಳು ತತ್ತ್ವತಃ ಶಿಕ್ಷಿತವಾಗಿರುವುದು ಅವರವರಿಗೆ ಉತ್ತರೋತ್ತರ ಶ್ರೇಯಃಪ್ರಾಪ್ತಿಗೆ ಸಾಧನವೆಂಬುದು ಪ್ರಾಮಾಣಿಕವೇ ಆಗಿರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೂ ಇದರಲ್ಲಿ ನಿಷ್ಪಕ್ಷಪಾತ ವಿಚಾರಪರರಿಗೆ, ವಿಮರ್ಶನೀಯವಾದ ಅಂಶವೂ ಇರುತ್ತದೆ. ಪರಸ್ಪರ ವಿರುದ್ಧ ಸಿದ್ಧಾಂತಗಳನ್ನು ಶ್ರೇಯಃಪ್ರಾಪ್ತಿಗೆ ಸಾಧನ ಗಳೆಂದು ಪ್ರತಿಪಾದಿಸುವ ಈ ಮತಗಳೆಲ್ಲವನ್ನೂ ಸಮಾನವಾಗಿ ಪ್ರಾಮಾಣಿಕ ಗಳೆಂದು ಹೇಳುವುದು ಹೇಗೆ ?– ಎಂಬುದು ವಿಚಾರ್ಯವಾಗುತ್ತದೆ. ಪರಸ್ಪರ ವಿರುದ್ಧಗಳಾದ ಪಾಠಪ್ರವಚನಗಳಿರುವ ಬೇರೆ ಬೇರೆ ತರಗತಿಗಳಲ್ಲಿ ಆಯಾ ತರಗತಿ ಗಳಲ್ಲಿರುವ ವಿದ್ಯಾರ್ಥಿಗಳಿಗೆ ಆಯಾ ಪಾಠಪ್ರವಚನಗಳೇ ಯುಕ್ತವಾಗುವಂತೆ, ಇದು ಸಮಂಜಸವಾಗುವುದಾದರೂ, ಇವುಗಳಲ್ಲಿ ಪಾರಮಾರ್ಥಿಕ ಪ್ರಾಮಾಣಿಕ ದರ್ಶನವು ಯಾವುದೆಂಬುದು ವಿಚಾರ್ಯವಾಗುತ್ತದೆ. ಏಕೆಂದರೆ–

ಧರ್ಮಂ ಯೋ ಬಾಧತೇ ಧರ್ಮೋ ನ ಸ ಧರ್ಮಃ ಕುಧರ್ಮ ತತ್ |
ಅವಿರೋಧೀತು ಯೋ ಧರ್ಮಃ ಸ ಧರ್ಮ ಇತಿ ಮೇ ಮತಿಃ ||

ಪರಸ್ಪರ ವಿರುದ್ಧ ಧರ್ಮಗಳಲ್ಲಿ ಎಲ್ಲವೂ ಪ್ರಾಮಾಣಿಕಗಳಾಗಿದ್ದರೂ, ಯಾವ ಧರ್ಮಕ್ಕೂ ವಿರುದ್ಧವಾಗದ ಧರ್ಮವೇ ಪರಮ ಪ್ರಾಮಾಣಿಕ ಧರ್ಮವೆಂದು ಒಪ್ಪಬೇಕಾಗಿರುವುದು. ಎಲ್ಲ ತರಗತಿಗಳ ಪಾಠಪ್ರವಚನಗಳೂ ಪರಮೋಚ್ಚ ವಿದ್ಯಾ ಪ್ರಾಪ್ತಿಗೆ ಕ್ರಮವಾಗಿ ಸಾಧಕಗಳಾಗಿ ಪ್ರಮಾಣಗಳಾಗುತ್ತವೆ.

ಪ್ರಕೃತದಲ್ಲಿ, ಎಲ್ಲ ಮತಗಳೂ ದೇಹ ವ್ಯತಿರಿಕ್ತ ಚೇತನ ಜೀವನನ್ನೇ ನಿತ್ಯ ನೆಂದೂ, ಇವನು ಧರ್ಮಕರ್ಮಗಳಿಗಧೀನನಾಗಿರುತ್ತ ಜನ್ಮಾಂತರ ಲೋಕಾಂತರ ಭಾಗಿ ಯಾಗಿರುತ್ತಾನೆಂದೂ ಎಲ್ಲರಿಗೂ ಸಮ್ಮತವಾಗಿರುವುದು ಸರಿಯಷ್ಟೇ. ಆದರೆ ಈ ಜನ್ಮಾಂತರಗಳು, ಲೋಕಾಂತರಗಳು, – ಇವುಗಳ ಪ್ರಾಪ್ತಿಗೆ ಸಾಧನಗಳಾಗಿರುವ ಧರ್ಮಾಧರ್ಮಗಳು, ಇವೆಲ್ಲವೂ ಅತೀಂದ್ರಿಯ ವಿಷಯಗಳಾದುದರಿಂದ, ಈ ಜೀವಿತಕ್ಕೆ ಮಾತ್ರವೇ ಸಂಬಂಧಿಸಿರುವ ಯಾವ ಮೇಧಾವಿಗೂ ಊಹಿಸಲು ಸಾಧ್ಯವಾಗ ಲಾರದು. ಲೋಕೋತ್ತರ ಮಹಿಮಾಶಾಲಿಗಳಾದ ಆಯಾ ಶಾಸ್ತ್ರಕಾರರಿಗೆ ಇಂತಹ ಸಾಮರ್ಥ್ಯವು ಇರಬಹುದೆಂದು ಊಹಿಸಬಹುದಾದರೂ, ಅವರಿಗೆ ಈ ಸಾಮರ್ಥ್ಯವು ಸಂಭವಿಸುವುದು ಹೇಗೆಂಬುದು ವಿಮರ್ಶನೀಯವಾಗುತ್ತದೆ. **"ಮಾನಾಧೀನಾ ಮೇಯ ಸಿದ್ಧಿಃ"**– ಪ್ರಮಾಣವಿಲ್ಲದೆ ಏನೊಂದನ್ನೂ ಇದೆಯೆಂದೂ, ಇಲ್ಲವೆಂದೂ, ಇಂಥ ದ್ದೆಂದೂ ಯಾರೂ ಊಹಿಸಿ ತಿಳಿಯಲಾರರು. ಆದುದರಿಂದ ಪಾರಮಾರ್ಥಿಕ ತತ್ತ್ವ ವನ್ನು ತಿಳಿಯಲು ಅಪೌರುಷೇಯವಾದ ಪ್ರಮಾಣವನ್ನು ಶರಣುಹೊಂದಬೇಕು.

ಕ್ರಿಸ್ತರಿಗೆ ಏಸುಕ್ರಿಸ್ತನು ಉಪದೇಶಿಸಿದ ಬೈಬಲ್ ಪ್ರಮಾಣವಾಗಿದೆ. ಮಹ ಮ್ಮದೀಯರಿಗೆ ಮಹಮ್ಮದನು ಬೋಧಿಸಿದ ಕುರಾನ್ ಪ್ರಮಾಣ. ಚಾರ್ವಾಕರಿಗೆ ಬೃಹಸ್ಪತಿಯ ಚಾರ್ವಾಕ ಸೂತ್ರಗಳು ಪ್ರಮಾಣವು. ಬೌದ್ಧರಿಗೆ ಬುದ್ಧದೇವನ

Sri Vidyabharathi Book Centre, Sringeri

CC-O. In Public Domain. Digitized by eGangotri

ವಚನಗಳೂ, ಜೈನರಿಗೆ ಜಿನನ ಉಪದೇಶಗಳೂ ಪ್ರಮಾಣಗಳಾಗಿವೆ. ನೈಯಾಯಿಕರಿಗೆ ಗೌತಮ ನ್ಯಾಯಸೂತ್ರಗಳೂ, ವೈಶೇಷಿಕರಿಗೆ ಕಣಾದ ಸೂತ್ರಗಳೂ, ಸಾಂಖ್ಯರಿಗೆ ಕಪಿಲ ಸೂತ್ರಗಳೂ, ಯೋಗಿಗಳಿಗೆ ಪಾತಂಜಲ ಸೂತ್ರಗಳೂ, ಪ್ರಮಾಣಗಳಾಗಿವೆ. ಇವೆಲ್ಲವೂ ಆಯಾ ಪುರುಷ ವಿಶೇಷಾದರಿಂದ ಪ್ರಚಾರಿತಗಳಾಗಿ ಪೌರುಷೇಯ ಗ್ರಂಥಗಳೆಂದು ವಿಶದವೇ ಆಗಿದೆ.

ಮೀಮಾಂಸಾ ಮತ್ತು ವೇದಾಂತ ಸಿದ್ಧಾಂತಗಳು ಅಪೌರುಷೇಯಗಳಾಗಿರುವ ಶ್ರುತಿ ಸ್ಮೃತೀತಿಹಾಸ ಪುರಾಣಗಳನ್ನೇ ಪ್ರಮಾಣಗಳೆಂದು ಸ್ವೀಕರಿಸಿರುವುದರಿಂದ ಇವುಗಳು ಪರಮ ಪ್ರಾಮಾಣಿಕ ದರ್ಶನಗಳೆಂದೂ ಸ್ಪಷ್ಟವಾಗುವುದು. ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ ಮತ್ತು ಅನುಪಲಬ್ಧಿಗಳೆಂದು ಪ್ರಸಿದ್ಧವಾಗಿರುವ ಪ್ರಮಾಣಗಳಲ್ಲಿ ಶ್ರುತ್ಯಾದಿಗಳು ಶಬ್ದ ಪ್ರಮಾಣದಲ್ಲಿ ಸೇರಿರುತ್ತಾ ಪ್ರಮಾಣವಾಗಿರುತ್ತವೆ. ಶಬ್ದವು ಲೌಕಿಕ ಮತ್ತು ಅಲೌಕಿಕಗಳೆಂದು ಎರಡು ವಿಧವಾಗಿರುತ್ತಾ, ಶ್ರುತ್ಯಾದಿಗಳು ಅಲೌಕಿಕ ಶಬ್ದ ಪ್ರಮಾಣವಾಗಿರುತ್ತವೆ. ಶ್ರುತ್ಯಾದಿಗಳು ಅಪೌರುಷೇಯಗಳೆಂಬುದರಲ್ಲಿ ಕೆಲವರು ಸಂದೇಹಪಡುವುದುಂಟು. ಇವುಗಳಲ್ಲಿ ಪ್ರತಿಪಾದಿತವಾಗಿರುವ ವಿಷಯಗಳೆಲ್ಲವೂ ಯಾರಿಂದಲೂ ತಿಳಿದು ಹೇಳಿದವಾಗುವುದಿಲ್ಲವಾದ್ದರಿಂದಲೂ, ಮತ್ತು ಇವುಗಳಲ್ಲಿ ಪರಸ್ಪರವಾಗಿ ಯಾವ ವಿರೋಧವೂ ಇಲ್ಲದೆ, ಸಂಪೂರ್ಣವಾಗಿ ಏಕವಾಕ್ಯತೆಯಿರುವುದರಿಂದಲೂ, ಇವು ಯಾರಿಂದಲೂ ರಚಿತವಾಗದ ಅಪೌರುಷೇಯಗಳೆಂದೇ ಅಬಾಧಿತವಾಗಿ ಸಿದ್ಧಿಸುವುದು. ಮತ್ತು ಇವು ಪ್ರಚಾರದಲ್ಲಿರುವ ಕರ್ಮಭೂಮಿಯು ಭರತಖಂಡದ ಯಾವ ಮೂಲೆಯಲ್ಲಿರುವವರಲ್ಲಿಯೂ ಈ ಶಾಸ್ತ್ರಗಳು ಯಾವ ವ್ಯತ್ಯಾಸವೂ ಇಲ್ಲದೆ, ಏಕರೂಪವಾಗಿಯೇ ಪ್ರಚಾರದಲ್ಲಿವೆ. ಪೌರುಷೇಯ ಗ್ರಂಥಗಳಲ್ಲಿ ಈ ಮಹಿಮೆಯು ಸಂಭಾವಿತವಾಗುವುದಿಲ್ಲ. ಸಾಮಾನ್ಯವಾಗಿ ಗ್ರಂಥದಲ್ಲಿ ಶ್ರದ್ಧೆಯು ಅದರ ಕರ್ತೃವಿನ ಪ್ರಸಿದ್ಧಿಯಿಂದಲೇ ಇರುತ್ತದೆ. ಅಜ್ಞಾತಕರ್ತೃಕ ಗ್ರಂಥಗಳ ವಿಷಯದಲ್ಲಿ ಆದರವು ಸಾಮಾನ್ಯವಾಗಿ ಸಂಭಾವಿತವಾಗಿರುವುದಿಲ್ಲ. ಹೀಗಿರುವಾಗ, ಶ್ರುತ್ಯಾದಿಗಳ ವಿಷಯದಲ್ಲಿ ಅದರ ಅನುಯಾಯಿಗಳಿಗೆ ನಿರತಿಶಯಾದರವಿದ್ದರೂ, ಅದರ ಕರ್ತೃವಿನ ಸ್ಮರಣೆಯು ಯಾರಿಗೂ ಇಲ್ಲದಿರುವುದು ಅವುಗಳ ಅಪೌರುಷೇಯತ್ವದಲ್ಲಿ ಅಬಾಧಿತವಾದ ಅಸಾಧಾರಣವಾದ ಪ್ರಮಾಣವಾಗಿರುತ್ತದೆ.

ಹಗಲಿರುಳುಗಳಂತೆ, ಜಗತ್ತಿನ ಸೃಷ್ಟಿ ಪ್ರಳಯಗಳು ಅನಾದ್ಯನಂತವಾಗಿ ನಡೆದು ಬರುತ್ತಿರುವುದಾದರೂ, "ಧಾತಾ ಯಥಾಪೂರ್ವಮಕಲ್ಪಯತ್" – ಎಂಬ ಪ್ರಮಾಣದಂತೆ ಪ್ರತಿಸೃಷ್ಟಿಯೂ ಸಮಾನನಾಮರೂಪವಾಗಿಯೇ ಸ್ಪಷ್ಟವಾಗುವುದರಿಂದ, ಅನಾದಿನಿಧನವಾಗಿ ಅಪೌರುಷೇಯವಾದ ಶ್ರುತ್ಯಾದಿಪ್ರಮಾಣವೂ ಶಬ್ದತಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತು ಅರ್ಥತಃ ಯಾವ ಬದಲಾವಣೆಯೂ ಇಲ್ಲದೆ, ಪ್ರಚಾರವಾಗುತ್ತಾ, ಎಲ್ಲ ದೇಶ ಕಾಲ ವ್ಯಕ್ತಿಗಳಿಗೂ ಸಮಾನವಾಗಿಯೇ ಪರಮ ಪ್ರಮಾಣವಾಗಿರುತ್ತದೆ.

"ಈ ಅರ್ಥದಲ್ಲಿ ಈ ಶ್ರುತ್ಯಾದಿ ಪ್ರಮಾಣವನ್ನೇ ಹೇಳುತ್ತೀರಲ್ಲವೇ"– ಎಂದರೆ ಹೌದು. ಅಪೌರುಷೇಯವಾಗಿರುವ ಶ್ರುತ್ಯಾದಿಗಳ ವಿಷಯಗಳನ್ನು ಅವುಗಳೇ ಅಲ್ಲದೆ ಬೇರೆ ಯಾರು ತಾನೇ ತಿಳಿಸಬಲ್ಲರು ? ನಮ್ಮ ಯೋಗ್ಯತೆಯು ನಮಗಲ್ಲದೆ ಮತ್ತಾರಿಗೆ ತಿಳಿದೀತು ? ಆದ್ದರಿಂದ ಇದರಲ್ಲಿ ಸಂದೇಹಪಡುವ ಕಾರಣವಿಲ್ಲ.

ಹೀಗೆ ಅಪೌರುಷೇಯವಾಗಿ, ಸರ್ವಪುರುಷದೋಷರಹಿತವಾಗಿ, ಪರಮ ಪ್ರಮಾಣವಾಗಿರುವ ಶ್ರುತ್ಯಾದಿಪ್ರಮಾಣವನ್ನೇ ಅಂಗೀಕರಿಸಿರುವ ಮೀಮಾಂಸಾ, ವೇದಾಂತ ಸಿದ್ಧಾಂತಗಳೇ ಪರಮಪ್ರಾಮಾಣಿಕ ವೇದಾಂತ ಸಿದ್ಧಾಂತಗಳೆಂದು ಸರ್ವ ಸಿದ್ಧವಾಗುವುದು. ಹೀಗಿರುವಾಗ –**"ಸ್ವಧರ್ಮೇ ನಿಧನಂ ಶ್ರೇಯಃ"**– ಎಂದು ಅವುಗಳ ಸಿದ್ಧಾಂತದಂತೆ, ಇತರ ಎಲ್ಲ ಮತಗಳಿಗೂ ನಿರಾಬಾಧವಾಗಿ ಪ್ರಾಮಾಣ್ಯವು ಸಿದ್ಧಿಸುವುದು. ಹೀಗಲ್ಲದೆ, ಆ ಮತಗಳಲ್ಲಿ ಯಾವ ಒಂದನ್ನು ಪ್ರಮಾಣವೆಂದು ಅಂಗೀಕರಿಸಿದರೂ ಇತರ ಮತಗಳಿಗೆ ವಿರೋಧವು ಅಪರಿಹಾರ್ಯವಾಗಿ ಯಾವ ಮತವೂ ಪ್ರಾಮಾಣಿಕವೆಂದು ಸಿದ್ಧಿಸದೇ ಹೋಗುವುದು. ಎಲ್ಲವೂ ಆಭರಣವೇ ಆದರೂ ಆಯಾಯ ಅವಯವಗಳಿಗೆ ಅವು ಅಲಂಕಾರವಾಗುವಂತೆಯೂ, ಎಲ್ಲವೂ ಔಷಧಿಯಾದರೂ ಆಯಾಯ ರೋಗಗಳಿಗೆ ವೈದ್ಯನು ವಿಧಿಸುವುದು ಔಷಧವಾಗುವಂತೆಯೂ, ಶ್ರೀ ಪರಮೇಶ್ವರನ ಅನುಗ್ರಹದಿಂದ ಲಭಿಸಿರುವ ಜನ್ಮವು ಆಯಾ ಅಧಿಕಾರಿ ಪುರುಷರಿಗೆ ಆಯಾ ಮತಧರ್ಮಗಳೇ ಶ್ರೇಯಸ್ಕರವೆಂದು ಸರ್ವವೂ ಅಬಾಧಿತವಾಗಿ ಸರ್ವಸಮಂಜಸವಾಗಿ ಸಿದ್ಧಿಸುವುದು.

ಇದರಲ್ಲಿ ಮೀಮಾಂಸಾದರ್ಶನವು ಶ್ರುತ್ಯಾದಿ ಪರಮತಾತ್ಪರ್ಯವಾಗಿರುವ ವೇದಾಂತ ಸಿದ್ಧಾಂತಾರ್ಥಸಿದ್ಧಿಗೆ ಅವಶ್ಯವಾಗಿರುವ ಧರ್ಮಕರ್ಮಗಳನ್ನು ವಿಶದ ಪಡಿಸುತ್ತದೆ. ವೇದಾಂತ ಸಿದ್ಧಾಂತವು ಅದ್ವಿತೀಯ ಬ್ರಹ್ಮತತ್ತ್ವದಲ್ಲಿ ಪ್ರಮಾಣ ವಾಗಿರುತ್ತದೆ. ಇದರ ಅನುಭವ ರೂಪವಾದ ತತ್ತ್ವಜ್ಞಾನವು ಪರಮಪುರುಷಾರ್ಥ ವಾದ ಮೋಕ್ಷಸಿದ್ಧಿಗೆ ಒಂದೇ ಪ್ರಮಾಣವಾಗಿರುತ್ತದೆ.

ಅದ್ವೈತ ಸಿದ್ಧಾಂತದಲ್ಲಿಯೇ ವೇದಾಂತಗಳಿಗೆ ಪರಮ ತಾತ್ಪರ್ಯವಿರುವುದು ಅನಾದಿ ಸಂಪ್ರದಾಯ ಸಿದ್ಧವಿದ್ದರೂ, ದುರಿತ ವಿಶೇಷಗಳಿಂದ ವೇದಾಂತಗಳಿಗೆ ಅಪಾರ್ಥಗಳನ್ನು ಕಲ್ಪಿಸಿ, ದ್ವೈತ–ವಿಶಿಷ್ಟಾದ್ವೈತ–ದ್ವೈತಾದ್ವೈತ–ಮುಂತಾದ ಹಲವು ಪಂಥಗಳು ಇತ್ತೀಚೆಗೆ ಕಲ್ಪಿತಗಳಾಗಿ ಪ್ರಚಾರಕ್ಕೆ ಬಂದಿರುತ್ತವೆ. ಅದ್ವೈತ ಸಿದ್ಧಾಂತವೇ ಶ್ರುತ್ಯಾದಿ ಪ್ರಮಾಣಗಳಂತೆ ಅಪೌರುಷೇಯವಾಗಿ ಅನಾದ್ಯನಂತವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿದ್ಧವಾಗಿರುವುದರಿಂದ, ಅನಾದಿ ಸಂಪ್ರದಾಯ ಶೂನ್ಯವಾಗಿ ಈಚೀಚೆಗೆ ಪ್ರಚಾರವಾಗಿರುವ ಈ ಕಲ್ಪಿತಮತಗಳು ಅಪ್ರಾಮಾಣಿಕಗಳೇ ಸರಿ. ಈ ಮತಗಳಲ್ಲಿ ವೈದಿಕ ಸನಾತನವರ್ಣಾಶ್ರಮಧರ್ಮ-ನಿಯಮಾನುಸರಣೆಗೆ ಪ್ರಾಧಾನ್ಯವಿಲ್ಲದೆ, ಶರಣಾಗತಿ, ಭಕ್ತಿ, ಮುಂತಾದುವುಗಳಿಗೆ ಪ್ರಾಧಾನ್ಯವಿರುವುದರಿಂದ, ಈ ಮತಗಳು ಶುದ್ಧ ಅವೈದಿಕ ಮತಗಳೆಂದು ಸ್ಪಷ್ಟವೇ ಇದೆ. ಇತರರಿಗೆ ಬೇಕಾದುದನ್ನು ಕೊಡುವುದೇ ಧರ್ಮವೆಂದು ಎಲ್ಲರೂ ಬಹು ತಪ್ಪಾಗಿ ತಿಳಿದಿರುತ್ತಾರೆ. ಶಾಸ್ತ್ರವಿಹಿತವಾದ ಕರ್ತವ್ಯವನ್ನೇ ಧರ್ಮವೆಂದು ತಿಳಿಯಬೇಕು. ಆದರೂ ಅವರವರ ದುರಿತ ವಿಶೇಷಗಳನ್ನು ಅನುಸರಿಸಿ ಈ ಮತಗಳಲ್ಲಿ ಈಶ್ವರಾನುಗ್ರಹದಿಂದ ಜನ್ಮವನ್ನು ಪಡೆದವರಿಗೆ ಅವುಗಳೇ ಶ್ರೇಯಸ್ಕರಗಳೆಂದು ತಿಳಿಯಬೇಕು.

ಅದ್ವೈತ ಸಿದ್ಧಾಂತಾನುಯಾಯಿಗಳಲ್ಲಿಯೂ ಸಹ, ಆ ಸಿದ್ಧಾಂತದ ಸಾಧನೆಗಳಲ್ಲಿ ಇರುವ ಕಠಿಣವಾದ ಅನೇಕ ಸಾಧನೆಗಳ ನಿಯಮಗಳಲ್ಲಿ ಅಲಸರಾದ ಕೆಲವು ಮಂದಮತಿಗಳು, ಸುಲಭಮಾರ್ಗಗಳೆಂದು ಅನೇಕ ಅಪ್ರಾಮಾಣಿಕ ಪಂಥಗಳನ್ನು ಪ್ರಚಾರ ಮಾಡುತ್ತಿರುವುದು ಈಗಿನ ಕಾಲದಲ್ಲಿ ಕಾಣುತ್ತವೆ. ಆದರೆ, ಇವು ಕೇವಲ ಅಪ್ರಾಮಾಣಿಕಗಳೇ ಆಗಿರುವುದರಿಂದ, ಇವುಗಳಿಂದ ಶ್ರೇಯಸ್ಸಾದೀತೆಂದು ಭ್ರಾಂತಿ ಪಡಬಾರದು. ವೇದಾಂತ ಸಿದ್ಧಾಂತ ಸಮೇತಗಳಾದ ಕಠಿಣಗಳಾದ ಶೌಚಾಚಾರಾದಿ ನಿಯಮಪೂರ್ವಕಗಳಾದ ಧರ್ಮಾಧರ್ಮ ನಿಯಮಾನುಸರಣೆಯೇ ಶ್ರೇಯೋಮಾರ್ಗವೆಂದು ವಿವೇಕಿಗಳು ತಿಳಿಯಬೇಕು.

ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ । ತಸ್ಮಾದ್ಧರ್ಮಂ ಪರಮಂ ವದಂತಿ॥
ಅಪೌರುಷೇಯಃ ಶ್ರುತ್ಯಾದೇರ್ಮಾನಂ ನಃ ಶ್ರೇಯಸೇ ಪರಂ ।
ಶ್ರುತ್ಯಾದಿ ವಿಹಿತೋ ಧರ್ಮಃ ಸಾಧನಂ ತತ್ರಸಮ್ಮತಮ್ ॥
ಅತಃ ಶ್ರೇಯೋರ್ಥಿಭಿಃ ನಿತ್ಯಂ ಧರ್ಮನಿಷ್ಠೈಃ ಸದಾದರಾತ್ ।
ಭಾವ್ಯಂ ವಿವೇಕಿಭಿರಿತಿ ಸರ್ವಮೇವಸುಮಂಗಳಮ್ ॥

ಶೃಂಗಗಿರಿ ಕವಿ ನರಸಿಂಹ ಶರ್ಮಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಅದ್ವೈತ ದರ್ಶನ

ಮಾಧ್ವ ವ್ಯಾಖ್ಯಾನ ವೈಖರೀ :

"ಕೇನೇಷಿತಂ ಪತತಿ ಪ್ರೇಷಿತಂ ಮನಃ"– ಎಂಬುದಾಗಿ ಆರಂಭವಾಗಿರುವ ಸಾಮವೇದಾಂತರ್ಗತ ತಲವಕಾರ ಶಾಖೀಯ ಕೆನೋಪನಿಷತ್ತಿನ ಈ ಪ್ರಥಮ ಮಂತ್ರವನ್ನು ವ್ಯಾಖ್ಯಾನ ಮಾಡುವಾಗ ಮಾಧ್ವರು "ಕೇನೇಷಿತಂ" ಇತ್ಯಾದಿಯಾಗಿ ಶಿವನು ಪ್ರಶ್ನೆ ಕೇಳುತ್ತಾನೆಂದೂ ವಿಷ್ಣುವು ಉಪದೇಶಿಸುತ್ತಾನೆಂದೂ ಕಥೆಯನ್ನು ಕಲ್ಪನೆ ಮಾಡುತ್ತಾರೆ. ದಶೋಪನಿಷತ್ತುಗಳ ಪರಿಚಯವಿದ್ದವರಿಗೆ ಅಲ್ಲಲ್ಲಿ ಕಥಾ ರೂಪದಲ್ಲಿ ಹೇಳಿರುವುದು ಕಾಣಬರುತ್ತದೆ. ಉದಾಹರಣೆಗೆ– ಕಠೋಪನಿಷತ್ತಿನಲ್ಲಿ ಯಮ ಮತ್ತು ನಚಿಕೇತ ಸಂವಾದ, ಬೃಹದಾರಣ್ಯಕದಲ್ಲಿ ಜನಕನ ಸಭೆಯಲ್ಲಿ ಯಾಜ್ಞವಲ್ಕ್ಯ ಮತ್ತಿತರರ ಸಂವಾದ. ಇಲ್ಲೆಲ್ಲಾ ಸ್ಪಷ್ಟವಾಗಿ ಯಾರು ಯಾರನ್ನು ಯಾವ ವಿಷಯದಲ್ಲಿ ಪ್ರಶ್ನಿಸುತ್ತಾರೆ ಮತ್ತು ಅದಕ್ಕೆ ಉತ್ತರವೇನು ಎಂಬುದು ಸ್ಪಷ್ಟವಾಗಿ ಕಾಣಬರುತ್ತದೆ. ಆದರೆ, ಕೇನೋಪನಿಷತ್ತಿನಲ್ಲಿ ಈ ರೀತಿಯಾಗಿ ಸ್ಪಷ್ಟವಾಗಿ ಯಾವ ಕಥೆಯ ವಿವರವೂ ತಿಳಿದಿರುವುದಿಲ್ಲ. ಹೀಗಿರುವಾಗ ಶಿವನು ಕೇಳುತ್ತಾನೆ ವಿಷ್ಣುವು ಉಪದೇಶಿಸುತ್ತಾನೆ ಎಂದು ಹೇಳಲು ಪ್ರಮಾಣವೇನು ? ಏಕೆಂದರೆ ಹಿಂದೆ ಎಲ್ಲೂ ಯಾವ ಪ್ರಕರಣದಲ್ಲೂ ಶಿವ – ವಿಷ್ಣು ವಿಷಯಕವಾಗಿ ಆರಂಭ ಮಾಡಿಲ್ಲ. ಆದುದರಿಂದ ಇದು ಕೇವಲ ಸ್ವಕಪೋಲಕಲ್ಪಿತವೇ ಸರಿ.

ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ ।
ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್ ॥

ಈ ಮಂತ್ರಕ್ಕೆ ಶಾಂಕರ ಭಾಷ್ಯ ಹೀಗಿದೆ– "ಯಸ್ಮಾತ್ ಶ್ರೋತ್ರಾದೇರಪಿ ಶ್ರೋತ್ರಾದ್ಯಾತ್ಮಭೂತಂ ಬ್ರಹ್ಮ ಅತೋ ನ ತತ್ರ ತಸ್ಮಿನ್ ಬ್ರಹ್ಮಣಿ ಚಕ್ಷುರ್ಗಚ್ಛತಿ, ಸ್ವಾತ್ಮನಿ ಗಮನಾಸಂಭವಾತ್। ತಥಾನ ವಾಗ್ಗಚ್ಛತಿ। ವಾಚಾ ಹಿ ಶಬ್ದ ಉಚ್ಚಾರ್ಯಮಾಣೋಽಭಿಧೇಯಂ ಪ್ರಕಾಶಯತಿ ಯದಾ ತದಾ ಅಭಿಧೇಯಂ ಪ್ರತಿ ವಾಗ್ಗಚ್ಛತೀತ್ಯುಚ್ಯತೇ । ತಸ್ಯ ಚ ಶಬ್ದಸ್ಯ ತನ್ನಿರ್ವರ್ತಕಸ್ಯ ಚ ಕರಣಸ್ಯಾತ್ಮಾ ಬ್ರಹ್ಮ ಅತೋ ನ ವಾಗ್ಗಚ್ಛತಿ.... ನೋಮನೋ ಮನಶ್ಚ ಅನ್ಯಸ್ಯ ಸಂಕಲ್ಪಯಿತೃ ಧ್ಯವಸಾಯಿತೃ ಚ ಸತ್ ನಾತ್ಮಾನಂ ಸಂಕಲ್ಪಯತಿ ಅಧ್ಯವಸ್ಯತಿ ಚ ತಸ್ಯಾಪಿ ಬ್ರಹ್ಮಾತ್ಮೇತಿ । ಇಂದ್ರಿಯ ಮನೋಭ್ಯಾಂ ಹಿ ವಸ್ತುನೋ ವಿಜ್ಞಾನಂ ತದಗೋಚರತ್ವಾನ್ನ ನ ವಿದ್ಮಸ್ತದ್ ಬ್ರಹ್ಮ ಈ ದೃಶಮಿತ್ಯತೋ ನ ವಿಜಾನೀಮ ।" ಎಂದು. ಇಲ್ಲಿ ಬ್ರಹ್ಮವೆಂಬುದು ಜಾತ್ಯಾದಿ ವಿಶೇಷಣಯುಕ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿಲ್ಲದಿರುವುದರಿಂದ ಕರಣಾಗೋಚರ, ಅಂದರೆ ಯಾವ ಇಂದ್ರಿಯ ವೇದ್ಯವೂ ಅಲ್ಲದಿರುವುದರಿಂದ ಉಪದೇಶಮಾತ್ರದಿಂದ ತಿಳಿಯುವುದು ಅಸಾಧ್ಯ. ಅದಕ್ಕಾಗಿ ವಿಶೇಷ ಪ್ರಯಾಸವನ್ನು ಮಾಡಬೇಕೆಂದು ವಿಶದವಾಗಿ ತಿಳಿಸಿದ್ದಾರೆ. ಆದರಿಲ್ಲಿ ಮಾಧ್ವರ ವ್ಯಾಖ್ಯಾನ ಹೀಗಿದೆ–

ಮಂತ್ರದಲ್ಲಿರುವ ಚಕ್ಷು, ವಾಕ್ ಮತ್ತು ಮನಃ ಎಂಬ ಶಬ್ದಗಳಿಗೆ "**ಚಕ್ಷುರಾದಿ ದೇವತಾಃ ಸೂರ್ಯಾದಯಃ ತಂ ನ ವಿದಂತಿ**"– ಅಂದರೆ ಚಕ್ಷುರಾದ್ಯಭಿಮಾನಿ ದೇವತೆಗಳಾದ ಸೂರ್ಯಾದಿಗಳು ಎಂದು ಅರ್ಥೈಸಿ, ಆ ದೇವತೆಗಳೂ ಬ್ರಹ್ಮವನ್ನು ತಿಳಿದಿಲ್ಲ ಎಂದು ವ್ಯಾಖ್ಯಾನ ಮಾಡುತ್ತಾರೆ. ಆದರೆ, ಇಲ್ಲಿ ಆರಂಭದಲ್ಲೆಲ್ಲೂ ಸೂರ್ಯಾದಿ ದೇವತಾ ವಿಷಯವನ್ನು ಹೇಳದೆ, ಅಕಸ್ಮಾತ್ ಇಲ್ಲಿ ಹೇಳಿದರೆಂಬ ಕಲ್ಪನೆಗೆ ಪ್ರಮಾಣ ಸಿಗುವುದಿಲ್ಲ. ಅಷ್ಟೇ ಅಲ್ಲದೆ ಮುಂದೆ, "**ನ ವಿದ್ಮೋ ನ ವಿಜಾನೀಮಃ**"– ಎಂಬುದಾಗಿ ಎಲ್ಲಾ ಜ್ಞಾನಗಳಿಗೂ ಅವಿಷಯವಾಗಿರುವುದು ಬ್ರಹ್ಮ ಎಂದು ಹೇಳಿರುವುದರಿಂದ ಅದರ ವಿವರಣೆಯನ್ನೇ ಚಕ್ಷುರಾದಿಜನ್ಯಜ್ಞಾನಾ ವಿಷಯ ಎಂದು ಹೇಳಿದರೇ ಯುಕ್ತವಾಗುತ್ತದೆ. ಅಲ್ಲದೆ "**ಗಚ್ಛತಿ**" ಎಂಬುದಕ್ಕೆ "**ನಾವಗಚ್ಛತಿ**" ಎಂದು ವ್ಯಾಖ್ಯಾನ ಮಾಡಿರುವುದು ಕ್ಲಿಷ್ಟ ಕಲ್ಪನೆಯೇ ಸರಿ.

ಹೀಗೆಯೇ ಮುಂದೆ– "**ತದೇವ ಬ್ರಹ್ಮತ್ವಂ ವಿದ್ಧಿ ನೇದಂ ಯದಿದಮು ಪಾಸತೇ**" ಎಂಬ ಮಂತ್ರದ ವಿವರಣೆ ಮಾಡುವಾಗ – "**ನೇದಂ ಜೀವರೂಪಂ ಬ್ರಹ್ಮಯತ್ ತವ ಉಪ ಸಮೀಪೇ ಆಸ್ತೇ ನಿಯಾಮಕತಯಾ ವರ್ತತೇ ತದೇವ ಬ್ರಹ್ಮ**"– ಎಂಬುದಾಗಿ ವ್ಯಾಖ್ಯಾನಿಸುತ್ತಾರೆ. "**ಉಪಾಸತೇ**" ಎಂಬುದಕ್ಕೆ "**ಉಪಾಸನೆ**" ಎಂಬುದು ರೂಢ್ಯರ್ಥ. ಇಲ್ಲಿ ರೂಢ್ಯರ್ಥ ಪರಿತ್ಯಾಗ ಮಾಡಿ, ಅವಯವಾರ್ಥ ಮಾಡಿರುತ್ತಾರೆ. ಆಗ – "**ಯೋಗಾದ್ರೂಢಿರ್ಬಲೀಯಸೀ**"– ಎಂಬ ನ್ಯಾಯ ವಿರೋಧ ಬರುತ್ತದೆ. ರೂಢ್ಯರ್ಥಕ್ಕೆ ವಿರೋಧವಿಲ್ಲದಿದ್ದಾಗ ಅದನ್ನು ತ್ಯಾಗ ಮಾಡಿದರೆ ಅದು ದೋಷ. ಆದ್ದರಿಂದ, ಈ ರೀತಿಯ ವಿವರಣೆ ರೂಢಿ ತ್ಯಾಗದೋಷಗ್ರಸ್ತವಾಗಿದೆ. ಅಲ್ಲದೆ, ಜೀವವು ಬ್ರಹ್ಮವಲ್ಲ, ಜೀವನ ಸಮೀಪ ನಿಯಾಮಕನಾಗಿರುವುದು ಬ್ರಹ್ಮ ಎಂಬುದಾಗಿ ಭೇದಪರವಾಗಿ ವ್ಯಾಖ್ಯಾನ ಮಾಡಿ ದರೆ ಅದ್ವೈತ ಶ್ರುತಿಗೆ ವಿರುದ್ಧವಾಗುತ್ತದೆ, ಹಾಗೂ ಅಪ್ರಸಕ್ತ ಪ್ರತಿಷೇಧ ಎಂಬ ದೋಷವೂ ಬರುತ್ತದೆ. ಹೇಗೆಂದರೆ, ಲೋಕದಲ್ಲಿ ಎಲ್ಲೂ ಯಾರಿಗೂ ಜೀವನೇ ಬ್ರಹ್ಮ ಅಥವಾ ನಾನೇ ಬ್ರಹ್ಮ ಎಂಬ ಜ್ಞಾನವಿರುವುದಿಲ್ಲ. ಇದಕ್ಕೆ ವ್ಯತಿರಿಕ್ತ ವಾಗಿ ಎಲ್ಲರಲ್ಲೂ ನಾನು ಬ್ರಹ್ಮನಲ್ಲ ಎಂಬ ಭೇದ ಜ್ಞಾನವೇ ಪಂಡಿತ ಪಾಮರ ಸಾಧಾರಣವಾಗಿ ಇರುತ್ತದೆ. ಹೀಗಿರುವಾಗ (ಯಾರೂ ನಾನು ಬ್ರಹ್ಮ ಎಂದು ತಿಳಿಯದಿರುವಾಗ) ಜೀವವು ಬ್ರಹ್ಮವಲ್ಲ, ತತ್ಸಮೀಪ ನಿಯಾಮಕವಾಗಿರುವವನು

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮ ಎಂಬ ಉಪದೇಶಕ್ಕೆ ಪ್ರಸಕ್ತಿಯೇ ಇಲ್ಲವಲ್ಲ. ಜೀವವು ಬ್ರಹ್ಮವೆಂಬ ಜ್ಞಾನ ಯಾರಲ್ಲಾದರೂ ಇದ್ದಲ್ಲಿ ಅದನ್ನು ಹೋಗಲಾಡಿಸಲು –**"ನೇದಂ ಜೀವರೂಪಂ ಬ್ರಹ್ಮ"**– ಎಂಬುದಾಗಿ ನಿಷೇಧ ಮಾಡಿದರೆ, ಆಗ ಅದು ಸಾರ್ಥಕವಾಗುತ್ತದೆ. ಇಲ್ಲದಿದ್ದರೆ– "ಬೀದಿಯಲ್ಲಿ ತನ್ನ ತಾನು ಹೋಗುತ್ತಿರುವ ಭಿಕ್ಷುಕನನ್ನು ಕುರಿತು "ನಮ್ಮ ಮನೆಗೆ ಬರಬೇಡ. ಮುಂದೆ ಹೋಗು"– ಎಂದು ಅವನ ಆಗಮನ ನಿಷೇಧ ಮಾಡಿದಂತೆ, ಅಪ್ರಸಕ್ತ ಪ್ರತಿಷೇಧವಾಗುತ್ತದೆ. ಆದ್ದರಿಂದ ಇದು ಅವಿಚಾರಿತರಮಣೀಯವೇ ಸರಿ.

ಪ್ರತಿಬೋಧವಿದಿತಂ ಮತಮಮೃತತ್ವಂ ಹಿ ವಿಂದತೇ ।
ಆತ್ಮನಾ ವಿಂದತೇ ವೀರ್ಯಂ ವಿದ್ಯಯಾ ವಿಂದತೇಽಮೃತಮ್ ॥

ಎಂಬ ಮಂತ್ರಕ್ಕೆ ವ್ಯಾಖ್ಯಾನ ಮಾಡುವಾಗ– "ಪ್ರತಿಬೋಧಃ ಸ್ವಸ್ವಯೋಗ್ಯತಾನುಸಾರೇಣ ಬೋಧಃ, ತಥಾ ಪುಂಭಿಃ ಶ್ರುತಂ ಬ್ರಹ್ಮ ಅಮೃತತ್ವಂ ವಿಂದತೇ ಪ್ರಾಪಯತಿ ಇತ್ಯರ್ಥಃ"– ಎಂದು ವಿವರಿಸಿರುತ್ತಾರೆ ಹಾಗೆಯೇ– "ಆತ್ಮನಾ ಜ್ಞಾನೋತ್ತರ ಕಾಲೀನ ಕರ್ಮಣಾ ವೀರ್ಯಂ ಆನಂದಾತಿಶಯಂ"– ಎಂಬುದಾಗಿ ವಿವರಣೆ ನೀಡಿರುವುದೂ ಕೂಡ ಅಪ್ರಸಿದ್ಧಾರ್ಥ ಕಲ್ಪನೆಯಲ್ಲದೆ ಬೇರೇನೂ ಅಲ್ಲ. "ವಿಂದತೆ"– ಎಂಬುದಕ್ಕೆ "ಪ್ರಾಪಯತಿ" ಎಂಬುದಾಗಿ ಅರ್ಥವನ್ನು ಅಧ್ಯಾಹಾರ ಮಾಡಿರುವುದೂ ದೋಷವೇ. ಪ್ರಸಿದ್ಧವಾದ ಅರ್ಥವನ್ನು ಪರಿತ್ಯಾಗ ಮಾಡಬೇಕಾದರೆ ಕಾರಣವೇನೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದುದರಿಂದ ಕೇವಲ ಅದ್ವೈತ ನಿಂದನೆ ಮಾತ್ರವೇ ಮೂಲೋದ್ದೇಶವಾಗಿರುವವರಿಗೆ, ಮತ್ತು ಶ್ರುತಿವಾಕ್ಯಗಳನ್ನೇ ಕಲ್ಪಿಸುವವರಿಗೆ ಈ ರೀತಿ ಪರಸ್ಪರ ವಿರುದ್ಧಾರ್ಥ ವಿವರಣೆ ಮಾಡುವುದು ಭೂಷಣ. ಹೇಗಾದರೂ ಮಾಡಿ ತಮ್ಮ ಸಿದ್ಧಾಂತವು ಉಪನಿಷತ್ತಿನಲ್ಲಿ ಪ್ರತಿಪಾದಿತವಾಗಿದೆ ಎಂದು ತಿಳಿಸಲು ಉಪನಿಷತ್ತುಗಳಲ್ಲಿನ ಮಂತ್ರಗಳ ಮತ್ತು ಪದಗಳ ಅರ್ಥಗಳನ್ನೂ ತಿರುಚುವ ಅವರ ಭಂಡ ಪ್ರಯಾಸವನ್ನು ಎತ್ತಿ ತೋರಿಸಲು ಹೀಗೆ ಇನ್ನೂ ಅನೇಕ ಉದಾಹರಣೆಗಳು ಸಿಗುತ್ತವೆ.

(ಸಶೇಷ)

ಡಾ|| ಎಂ. ಎಲ್. ನರಸಿಂಹಮೂರ್ತಿ
ಎಂ. ಎ. ಪಿಹೆಚ್.ಡಿ. ವಿದ್ವಾನ್

Sri Vidyabharathi Book Centre, Sringeri

CC-O. In Public Domain. Digitized by eGangotri

RAPSRI

ENGINEERING INDUSTRIES PVT. LTD.,

Post Bag No. 4104, Jayanagar
BANGALORE-561 041

Manufacturers of :

Machined and un-machined
NON-FERROUS CASTINGS

Regd. Office and Works :
39 & 40/2, Gowdana Palya
Subramanyapura Post
BANGALORE-560 061

Grams: 'RAPSRI'
Telex : 0845 522

Phone : Office 40243
Works. 41703

THE PORTLAND RUBBER ESTATES LTD.,

Regd. Office :
10, GEN. K. M. CARIAPPA ROAD, B'LORE-25

Board of Directors :

Chairman :

1. Sri P. R. Hariharan
Directors-in-charge
2. Sri K. Korah

Directors :

3. Sri Kurian Joshua
4. Sri K. Thomas
5. Sri Mathew Joshua
6. Sri Lala Kurian Uthup
7. Sri K. Babu
8. Sri John Kurian
9. Mrs. Chechakutty Uthup

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮದಪ್ಪಯ್ಯ ದೀಕ್ಷಿತೇಂದ್ರ ವಿರಚಿತಂ
ಮಧ್ವತಂತ್ರ ಮುಖಮರ್ದನಮ್

ಕನ್ನಡ ಅನುವಾದ ಮತ್ತು ವಿವರಣೆ

ವಿದ್ವಾನ್ ಸೂರಿ ರಾಮಚಂದ್ರಶಾಸ್ತ್ರೀ

(ಮುಂದುವರಿದುದು ೧೬)

ಹೀಗೆ ಶ್ರುತಿಸ್ಮೃತಿ ಸಹಿತವಾದ ಆ ನಿಮ್ಮ ಪೂರ್ವಪಕ್ಷದ ಅನೇಕ ಕರ್ತೃತ್ವ ಅನುಮಾನವನ್ನು ಸಿದ್ಧಾಂತದಲ್ಲಿ ನಿರಾಕರಣೆಮಾಡಲಾರಿರಿ. ಹೀಗೆ ಮೊದಲಿನ ದೃಷ್ಟಾಂತವು ಪ್ರಾಸಾದ ದೃಷ್ಟಾಂತವಿರುವುದರಿಂದ ಪ್ರತ್ಯಕ್ಷಮೂಲವಾಗಿದೆ. 2ನೇ ಮತ್ತು 3ನೇ ಅನುಮಾನಗಳು ಶ್ರುತಿ ಸ್ಮೃತಿಗಳಿಂದ ಬಲಗೊಂಡಿವೆ. **"ಏಕಮೇವಾ ದ್ವಿತೀಯಂ", "ಏಕೋದಾಧಾರ ಪೃಥಿವೀಂ"** – ಮುಂತಾದ ಶ್ರುತಿಗಳು ಒಬ್ಬನೇ ಜಗತ್ಕಾರಣನೆಂದು ಹೇಳುವುವು. ಆದ್ದರಿಂದ ನಿಮ್ಮ ವಿಷ್ಣುವನ್ನು ಬಿಟ್ಟು ಶಿವನೋ, ಚತುರ್ಮುಖನೋ, ಯಾರೋ ಒಬ್ಬನು ಜಗತ್ಕರ್ತೃವೆಂದು ಹೇಳಿದರೂ ಹೊಂದುವುವು.

ಹೀಗಾಗಿ ಜಗತ್ಕಾರಣವಾದ ಒಂದೇ ವಸ್ತುವನ್ನು ನಿರ್ಣಯಿಸಲು ಶ್ರುತಿ ತಾತ್ಪರ್ಯ ನಿರ್ಣಾಯಕವಾಗಿದ್ದು, ಮೇಲಿನ ಅನುಮಾನಗಳು **"ತೇಜಸಾ ಸೌಮ್ಯ ಶುಂಗೇನ"**– ಎಂಬಿವೇ ಮುಂತಾದ ಶ್ರುತಿಗಳು ತೋರಿಸಿದ ಮಾರ್ಗವನ್ನು ಅನುಸರಿಸಿ ಹೊರಟಿರುವಾಗ ಅವುಗಳನ್ನು ಸಿದ್ಧಾಂತದಲ್ಲಿ ನೀನು ಖಂಡಿಸಲಾರೆ.

ಮ॥ಮ॥

|| ೪೩ ||

ಕರ್ಮಬ್ರಹ್ಮೋಭಯಾರ್ಥಂ ಖಲು ಸಕಲಮಪಿ ವ್ಯಾಕರೋಃ
ಕರ್ಮಕಾಂಡಂ
ಬ್ರಹ್ಮಸ್ವಾರ್ಥೋಭಯಾರ್ಥಾನುಪನಿಷದುದಿತಾನಸ್ಯ–
ತದ್ವಾಚಿ ಶಬ್ದಾನ್ ।
ಅನ್ಯಾಂಶ್ಚೋಮಾದಿವಾಗಾದ್ಯುಭಯವಿಧಪರಾನ್ವಾಜ್ಮನಃ
ಪ್ರಾಣಮುಖ್ಯಾ–
ನ್ಯೇನ ಸ್ಯಾದ್ವಾಕ್ಯಮರ್ಥತ್ರಯಮಪರಿಮಿತಾರ್ಥಂ
ಚವಸ್ಯಾದಿಸೂಕ್ತಮ್

ಮ॥ವಿ॥

|| ೪೪ ||

ಮಧ್ವಮತದಲ್ಲಿ ಶ್ರುತಿವಾಕ್ಯಗಳಿಗೆ ಒಂದೇ ಅರ್ಥವೆಂಬ ನಿಯಮವಿಲ್ಲವೆಂಬುದನ್ನು ಅವರೇ ಒಪ್ಪಿರುವ ಶ್ರುತಿವಾಕ್ಯಗಳನ್ನು ಉದಾಹರಿಸಿ ತೋರಿಸುವೆವು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಜ್ಯೋತಿರುಪಕ್ರಮಾತ್ತು ತಥಾಹ್ಯಧೀಯತ ಏಕೇ" (ಬ್ರ.ಸೂ. ೧-೪-೯)

ಎಂಬ ಅಧಿಕರಣದಲ್ಲಿ, ಕರ್ಮಕಾಂಡದ ಎಲ್ಲ ಭಾಗಗಳಿಗೂ ಕರ್ಮ-ಬ್ರಹ್ಮ ಎಂಬ ಎರಡರ್ಥವನ್ನು ಹೇಳುವೆವು ಎಂದು ಭಾಷ್ಯವಿದೆ. ಉದಾಹರಣೆಗಾಗಿ – ಹೇಳಿದ ವಾಕ್ಯಗಳಲ್ಲಿ ಸ್ಥಾಲೀಪುಲಾಕನ್ಯಾಯದಿಂದ ವಸಂತವಾಕ್ಯವನ್ನು ನೋಡಿರಿ –**"ವಸಂತೇ ವಸಂತೇ ಜ್ಯೋತಿಷಾ ಯಜೇತ"** ಎಂಬ ಜ್ಯೋತಿಷ್ಟೋಮ ವಿಧಾಯಕ ವಾಕ್ಯವನ್ನು ಬ್ರಹ್ಮಪರವಾಗಿ ಅರ್ಥೈಸಿರುವ ರೀತಿ ಹೀಗಿದೆ—ವಸತೀತಿ ವಸಃ | ಪಚಾದಿಗಣದಲ್ಲಿ ಸೇರಿದ "ವಸ್"ಧಾತುವಿಗೆ 'ಅಚ್' (ಅಕಾರ) ಬಂದು 'ವಸ' ಎಂದಾಗಿದೆ. "ತನೋತೀತಿ ತಿಃ"| ಉಣಾದಿಗಳೊಳಗಿನ 'ಡಿ' ಪ್ರತ್ಯಯವು ಬಂದು 'ತನ್' ಧಾತುವು 'ತಿ' ಎಂದಾಗಿದೆ. ಹಾಗೂ 'ವಸ' ಪದದ ಮುಂದೆ 'ನ'ಕಾರ ಆಗಮವಾಗಿ ಬರುವುದು. (ಯಾವ ವ್ಯಾಕರಣದಿಂದಲೋ?). ಒಟ್ಟುಗೂಡಿಸಿದರೆ "ವಸಂತಿ" ಎಂದಾಗುತ್ತದೆ. ಸರ್ವ ವ್ಯಾಪಿಯಾದ ಜಗತ್ಕರ್ತಾ ಎಂದು ಅದರ ಅರ್ಥವಾಗುತ್ತದೆ. ಅದು ಸಂಬೋಧನ ದಲ್ಲಿ 'ವಸಂತೇ'. ಆದರಕ್ಕಾಗಿ ಎರಡು ಸಲ "ವಸಂತೇ ವಸಂತೇ"– ಎಂದು ಹೇಳಲಾಗಿದೆ. ಹೇ ವಿಷ್ಣೋ, ವಿಷ್ಣೋ, ಎಂದರ್ಥ. ಮುಂದೆ– "ಜ್ಯೋತಿಷಾ" ಎಂಬ ಪದಕ್ಕೆ 'ಜಿ'– ಧಾತು ಹುಟ್ಟು ಎಂದರ್ಥ. ಅದಕ್ಕೆ ಹಿಂದಿನಂತೆ 'ಡಿ' ಪ್ರತ್ಯಯ. 'ಅ' ಧಾತುವಿಗೆ 'ತ್ರಿ' ಪ್ರತ್ಯಯ ಬಂದಾಗ 'ಓತಿ' ಎಂದಾಗುವುದು. "ಜಿ+ಓತಿ"=ಜ್ಯೋತಿಎಂದಾಯಿತು. ಯಾವ ಜಗತ್ತು ವಿಷ್ಣುವಿನಲ್ಲಿ ಸೇರಿದೆಯೋ ! ಆ ವಿಷ್ಣುವೇ "ಜ್ಯೋತಿ" ಎಂದು ಕರೆ ಯಲ್ಪಡುತ್ತಾನೆ. ಮುಂದೆ 'ಷಃ' ಎಂದರೆ ಪ್ರಾಣ. ಹಾಗೆ ಶ್ರುತಿಯಿದೆ. ಜ್ಯೋತಿ+ಷಃ =ಜ್ಯೋತಿಷ ? ಎಂದು ಸಂಬುದ್ಧಿ. ಹುಟ್ಟಿದ ಜಗತ್ತೆಲ್ಲವೂ ಅ ವಿಷ್ಣು ಸ್ವರೂಪನಾದ ಮಹಾಪ್ರಾಣನಲ್ಲಿರುವುದರಿಂದ, ಹೇ ಮಹಾಪ್ರಾಣನೇ ! ಎಂದರ್ಥವಾಯಿತು. ಆಮೇಲೆ "ಅಯಜೇತ". ಆ=ಸುತ್ತಲೂ ಯಜ=ಯಜ್ಞಮಾಡುವುದರಿಂದ ಇತ=ಹೊಂದಿರುವ ಕೂಡಿಸಿರುವ ಯಾಗ ಕರ್ತೃಗಳಿಂದ ಲಭ್ಯನಾದವನೇ–ಎಂಬ ಅರ್ಥವು ಬರುವುದು.

ಎರಡನೆಯದು– "ಇಂದ್ರ ಆಗಚ್ಛ"– ಇಂದ್ರನನ್ನು ಯಾಗಕ್ಕೆ ಕರೆಯುವ ವಾಕ್ಯವಿದು. ಬ್ರಹ್ಮ ಪರವಾಗಿ– ಇಂದ್ರ, ಆ, ಗಚ್ಛ– ಈ ಮೂರೂ ಪದಗಳೂ ಸಂಬೋಧನಗಳು. ಗಮ್=ಧಾತು. ಛ=ದಾತು. ಗತ ಎಂದರೆ ಹೋಗಿದ್ದ ಛ=ಆಚ್ಛಾದನೇ, ಆಚ್ಛಾದನ, ಕೂಡಿಸಿದರೆ, ಗಚ್ಛ= ಆಚ್ಛಾದನವಿಲ್ಲದವನು ಅಂದರೆ, ಶುದ್ಧ ಎಂದು ಅರ್ಥ. ಆ=ವಿಷ್ಣು, ಒಟ್ಟು ಕೂಡಿಸಿದರೆ ಇಂದ್ರ ಆಗಚ್ಛ= ಶುದ್ಧನಾದ ಜಗದೊಡೆಯನಾದ ವಿಷ್ಣುವೇ ಎಂಬ ಅರ್ಥವು ಬರುತ್ತದೆ.

ಮೂರನೆಯದು— "ಸ್ವಾಹಾ" ಸ್ವಂ= ಯಜ್ಞಾದಿಗಳಲ್ಲಿ ಕೊಟ್ಟ ತನ್ನದಾದ ಹವಿಸ್ಸನ್ನು, ಹರತಿ= ಸ್ವೀಕರಿಸುವನು. ಸ್ವಾಹಃ ; ಆ=ವಿಷ್ಣು ; ಅನೆರಡೂ ಕೂಡಿ ಸಂಬುದ್ಧಿಯಲ್ಲಿ ಸ್ವಾಹಾ ಎಂದಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಲ್ಕನೆಯದು— "ನಮಃ" ಎಂಬ ನಮಸ್ಕಾರ ವಾಚಕವಾದ ಶಬ್ದ. ಬ್ರಹ್ಮ ಪರವಾಗಿ— "ನಮ್" ಧಾತುವಿಗೆ ಅಧಿಕರಣ ಎಂಬರ್ಥದಲ್ಲಿ "ಅಮುನ್" ಎಂಬ ಪ್ರತ್ಯಯವು ಬಂದಿದೆ. ಹಾಗಾಗಿ "ನಮಃ"— ಈತನಲ್ಲಿ ಎಲ್ಲಾ ಕಲ್ಯಾಣ ಗುಣಗಳೂ ಇವೆಯೆಂದು ಅದರ ಅರ್ಥವಾಗುತ್ತದೆ.

ಹೀಗೆ ಇನ್ನೂ ಎಷ್ಟೋ ಇವೆ. ವಿಸ್ತಾರವಾದೀತೆಂದು ಬರೆಯುವುದಿಲ್ಲ. ಮತ್ತು ಉಪನಿಷತ್ತುಗಳಲ್ಲಿಯೂ ಸಹ ಬ್ರಹ್ಮಶಬ್ಧ ವಾಚಿಯಾದ ಪದಗಳು ಬ್ರಹ್ಮನನ್ನೂ ಮುಖ್ಯಪ್ರಾಣನನ್ನೂ ಹೇಳುತ್ತಿವೆ. "ಪ್ರಾಣೋವಾ ಆಶಾಯಾ ಭೂಯಾನ್"— ಎಂಬ ಛಾಂದ್ಯೋಗ್ಯದ ವಾಕ್ಯದಲ್ಲಿನ ಪ್ರಾಣಪದವು ಭೂಮಾಧಿಕರಣದಲ್ಲಿ ಬ್ರಹ್ಮಪರವಾಗಿದೆ ಯೆಂದೂ, ವ್ಯತಿಹಾರಧಿಕರಣದಲ್ಲಿ (ಬ್ರ.ಸೂ. ೩-೩-೩೮) ಮುಖ್ಯಪ್ರಾಣಪರವಾಗಿದೆ ಯೆಂದು ಭಾಷ್ಯಕಾರರು ವ್ಯಾಖ್ಯಾನ ಮಾಡಿದ್ದಾರೆ. ಟೀಕಾಕಾರರು ಅದನ್ನೇ ಪುಷ್ಟೀಕರಿಸಿ ಆಧಾರಕೊಟ್ಟಿದ್ದಾರೆ. "ಇಂದ್ರಿಯೇಭ್ಯಃ ಪರಾಹ್ಯರ್ಥಾಃ" ಎಂಬ ಕಠೋಪನಿಷದ್ವಾಕ್ಯದಲ್ಲಿಯ "ಇಂದ್ರಿಯ ಪದವು ಪ್ರಾಕೃತ ಇಂದ್ರಿಯ ಪರವೂ, ಅದ ರಲ್ಲಿಯ ಇಂದ್ರಿಯತ್ವವು ಬ್ರಹ್ಮಾಧೀನವಾದ್ದರಿಂದ ಬ್ರಹ್ಮಪರವೂ ಆಗಿದೆಯೆಂದು ಹೇಳಿದ್ದಾರೆ. ಆ ಪದದ "ಭ್ಯಃ" ಎಂಬ ಪಂಚಮಿಾ ವಿಭಕ್ತಿಯೂ ಬ್ರಹ್ಮಾಧೀನವಾದ್ದ ರಿಂದ ಬ್ರಹ್ಮಪರವೆಂದೂ ಬರೆದಿದ್ದಾರೆ.

"ವಾಙ್ಮನಸಿ ಸಂಪದ್ಯತೇ"—ಎಂಬ ಛಾಂದೋಗ್ಯವಾಕ್ಯದಲ್ಲಿಯು, ವಾಙ್, ಮನ, ಪ್ರಾಣ — ಪದಗಳು ಕ್ರಮವಾಗಿ ಉಮಾ, ರುದ್ರ, ಹಿರಣ್ಯಗರ್ಭ ಎಂಬ ಅರ್ಥ ವುಳ್ಳವು. ಅವು ಉತ್ತರೋತ್ತರವಾಗಿ ಲಯವಾಗುವವು. ಅಂದರೆ, ಉಮೆಯು ರುದ್ರನಲ್ಲೂ, ರುದ್ರನು ಹಿರಣ್ಯಗರ್ಭದಲ್ಲೂ ಲಯವನ್ನು ಹೊಂದುವರು. ಹಾಗೂ ಸಾಯುತ್ತಿರುವ ಪುರುಷನ ವಾಕ್ಕು ಮನಸ್ಸಿನಲ್ಲೂ, ಮನಸ್ಸು ಪ್ರಾಣನಲ್ಲೂ ಲಯ ವಾಗುವುನೆಂಬ ಅರ್ಥವನ್ನು ಬರೆದಿರುವರು.

"ಕೇನ ಸ್ಯಾತ್ ಯೇನಸ್ಯಾತ್ ತೇನೇದೃಶ ಏವ" ಎಂಬ ಬೃಹದಾರಣ್ಯಕ ವಾಕ್ಯವನ್ನು ಜ್ಞಾನಿಗೆ ವಿಹಿತವಾದ ಹಾಗೂ ನಿಷಿದ್ಧವಾದ ಆಚರಣೆಗಳನ್ನು ಯಥೇಷ್ಟ ವಾಗಿ ಆಚರಿಸುವುದೆಂಬ ವಿಧಿ ಪರವಾಗಿ ಅರ್ಥಮಾಡಿದ್ದಾರೆ. ಮತ್ತು ವಿಹಿತವಾದ ಧರ್ಮದಲ್ಲಿ ಕೆಲವು ಆಚಾರಗಳನ್ನು ಮಾಡಬಹುದು, ಕೆಲವನ್ನು ಬಿಡಬಹುದು ಎಂಬರ್ಥವನ್ನೂ ಮಾಡಿರುತ್ತಾರೆ. ಹಾಗೂ ಎಲ್ಲ ವಿಹಿತ ಕರ್ಮಗಳನ್ನೂ ಕರ್ಮವಿಧಿ ನಿಬಂಧನವಿಲ್ಲದೆ ಸ್ವೇಚ್ಛೆಯಾಗಿ ಮಾಡಬಹುದೆಂಬ ಅರ್ಥವನ್ನೂ ಮಾಡಿರುವರು. ಹೀಗೆ ಒಂದೇ ವಾಕ್ಯಕ್ಕೆ ಮೂರು ಅರ್ಥವನ್ನು ಮಾಡಿದ್ದಾರೆ. ಈ ಮೂರೂ ಅರ್ಥ ವನ್ನು ಕ್ರಮವಾಗಿ ಹಿರಣ್ಯಗರ್ಭ, ಉಳಿದ ದೇವತೆಗಳು ಹಾಗೂ ಮಾನವರು ಅನುಸರಿ ಸಿದಾಗ, ವಿರೋಧವಿಲ್ಲವೆಂದೂ ಬರೆದಿರುತ್ತಾರೆ. ಇದು **"ಸ್ತುತಯೇಽನು ಮಿತಿರ್ವಾ"** ಎಂಬ ಅಧಿಕರಣದಲ್ಲಿ ನಿರೂಪಿತವಾಗಿದೆ.

"ಅಂಗಾವಬದ್ಧಾ"ಧಿಕರಣದಲ್ಲಿ ವನ್ಹಿ ಮೊದಲಾದ ದೇವತಾ ಪ್ರತಿಪಾದಕವಾದ ಪದಗಳನ್ನು ಹಾಗೂ ಸೂಕ್ತಮಂತ್ರಗಳನ್ನು ಸಕಲದೇವತಾ ಪ್ರತಿಪಾದಕಗಳಾಗಿವೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯೆಂದೂ ಬರೆದಿರುವುದರಿಂದ, ಅದರಂತೆ, ಎಲ್ಲ ಶ್ರುತಿವಾಕ್ಯಗಳನ್ನೂ ಅರ್ಥೈಸುವ ನಿನ್ನ ಮತದಲ್ಲಿ ಸೃಷ್ಟಿವಾಕ್ಯಗಳೂ ಅನೇಕ ಜಗತ್ಕಾರಣವನ್ನು ಹೇಳಬಹುದಾಗಿವೆ. || ೪೪ ||

ಸೃಷ್ಟಿವಾಕ್ಯಗಳಿಗೆ ಅದ್ವೈತಿಯ ಮತದಲ್ಲಿ ಅನೇಕಾರ್ಥತ್ವವಿಲ್ಲ. ದ್ವೈತಿಗಳಾದ ಶೈವ ವೈಷ್ಣವಾದಿಗಳಲ್ಲಿ ಹಾಗಿದೆ. ಒಬ್ಬೊಬ್ಬರು ಒಂದೊಂದು ಅರ್ಥವನ್ನು ಹೇಳಿ ಪರಸ್ಪರವಾಗಿ ಕಲಹ ಮಾಡುತ್ತಿದ್ದಾರೆ. ಆದರೆ, ವ್ಯಾಸರು "ಅಥಾತೋ ವಿಷ್ಣುಜಿಜ್ಞಾಸಾ, ಶಿವಾಜಿಜ್ಞಾಸಾ, ಗಣಪತಿಜಿಜ್ಞಾಸಾ" ಎಂದು ಬರೆಯದೆ, ಬ್ರಹ್ಮಜಿಜ್ಞಾಸಾ,ಎಂದು ಬರೆದಿರುವುದೇ, ಶಾಸ್ತ್ರವು ಶಿವ-ವಿಷ್ಣ್ವಾದಿ ಪರವಲ್ಲ ಎಂಬುದನ್ನು ಸೂಚಿಸುತ್ತದೆ. ಇದೇ ವ್ಯಾಸ ಭಗವಾನರ ಅಭಿಪ್ರಾಯವೆಂದು ಸ್ಪಷ್ಟವಾಗಿರುವಾಗ ಈ ದ್ವೈತಿಗಳು ಸೂರ್ಯ ಚಂದ್ರರಿರುವವರೆಗೂ ಜಗಳವಾಡುತ್ತಿರಬೇಕಾದ ಸಂಗತಿಯು ಅತ್ಯಂತ ಹಾಸ್ಯಾಸ್ಪದವಾಗಿದೆ. ಅವರೆಲ್ಲರೂ ಶ್ರೀಶಂಕರ ಭಗವತ್ಪಾದರ ಅದ್ವೈತವನ್ನೇ ಅಂಗೀಕರಿಸಿದರೆ ಜಗಳವಾದರೂ ನಿಂತೀತು.

ಮೂ||ಮೂ||

ಶ್ಲೇಷಪ್ರಾಯೇ ಕವಿತ್ವೇ ಪ್ರಮಿತಪರತಯಾ ಶ್ಲಾಘನೀಯೇ ಚ ಸೂತ್ರೇ
ನಾನಾಕರ್ಮೋಪಯೋಗ ಶ್ರುತಿಸಮಧಿಗತಾನೇಕಬೋಧೇ ಚ ಮಂತ್ರೇ ।
ಏಕಾರ್ಥತ್ವವ್ಯವಸ್ಥಾತ್ಯಜನಮನುಮತಂ ಸರ್ವಮೀಮಾಂಸಕಾನಾಂ
ಅನ್ಯತ್ರಾಪೀಚ್ಛಯಾ ತದ್ಯದಿ ಭವತಿ ತವ ಬ್ರಹ್ಮವಾಕ್ಯೇಷ್ವಪಿ ಸ್ಯಾತ್

ಮೂ||ಮೂ|| || ೪೫ ||

ಶ್ಲೇಷಾರ್ಥವಿರುವ ಕವಿತ್ವದಲ್ಲಿ ಕವಿಯ ಅಭಿಪ್ರಾಯದಂತೆ ಅನೇಕಾರ್ಥವನ್ನು ಮಾಡುವುದು, ಸೂತ್ರನಿಬಂಧನೆಗಳಲ್ಲಿ ಸೂತ್ರಕಾರರಿಗೆ ಅಭಿಮತವಾದ ಅನೇಕಾರ್ಥವನ್ನು ಮಾಡುವುದು, ನಾನಾ ಕರ್ಮಗಳಿಗೆ ವಿನಿಯೋಗಿಸುವ ಮಂತ್ರಗಳಿಗೆ ನಾನಾರ್ಥವನ್ನು ಮಾಡುವುದು, ಇವೆಲ್ಲವೂ ಮೀಮಾಂಸಕರಿಗೂ ಒಪ್ಪಿತವಾದದ್ದು. ಕವಿಗಳಿಗೂ ಸೂತ್ರಕಾರರಿಗೂ ಒಪ್ಪುವುದು.

ಆದರೆ, ನೀನು ಆ ಮರ್ಯಾದೆಯನ್ನು ಉಲ್ಲಂಘಿಸಿರುವೆ. ಶ್ರುತಿ ಶಬ್ದಗಳಿಗೆ ಯೋಗ, ರೂಢಿ, ಪ್ರಕರಣ- ಮುಂತಾದವುಗಳಿಂದ ಎಷ್ಟೆಷ್ಟು ಅರ್ಥಗಳು ಸಂಭವಿಸುವವೋ ಅವೆಲ್ಲಾ ಅರ್ಥಗಳನ್ನು ಸ್ವಾಭಾವಿಕವಾಗಿ ಹೇಳಲೇಬೇಕು. ಪೌರುಷೇಯ ಶಬ್ದಗಳಿಗೆ ಅವರವರ ವಿವಕ್ಷೆಯ ಅನುಗುಣವಾಗಿ ಅರ್ಥಹೇಳಬೇಕೆಂಬುದು ಅಪವಾದ- ಎಂದು ನಿನ್ನಮತ. ಹಾಗೆಯೇ ಶ್ರುತಿಗಳಿಗೆ ಬೇರೆ ಬೇರೆ ವಿಧವಾಗಿ ಪದಗಳನ್ನು ವಿಭಾಗಿಸಿ ಯೋಗ, ರೂಢಿ ಮುಂತಾದ ಸಾಧನೆಗಳಿಂದ ಅರ್ಥಮಾಡಿದ್ದೀಯೆ. ಹೀಗಿರುವಾಗ, ಸೃಷ್ಟಿವಾಕ್ಯಗಳಿಗೂ ನಿನ್ನ ಪೂರ್ವ ಪಕ್ಷಿಯು ಹೇಳಿದಂತೆ ಅನೇಕಾರ್ಥವನ್ನು ಮಾಡಿ ಬ್ರಹ್ಮ, ಶಿವ, ವಿಷ್ಣು ಮೊದಲಾದವರೆಲ್ಲರೂ ಸೃಷ್ಟಿಕರ್ತರೆಂದು ನೀನೇಕೆ ಹೇಳಬಾರದು. ಯಾವ ಬಾಧಕವೂ (ನಿನ್ನ ಮತದಂತೆ) ಇಲ್ಲದಿರುವುದರಿಂದ ಹಾಗೇ ಸಿದ್ಧವಾಗುವುದು. || ೪೬ ||

(ಸಕೇಷ)

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪನಿಷತ್ತಿನ ಕಥೆಗಳು-೨
(ಕಠೋಪನಿಷತ್ತು)

ನಚಿಕೇತ

ಗೌತಮ ಗೋತ್ರಕ್ಕೆ ಸೇರಿದ ವಾಜಶ್ರವಸನೆಂಬ ಋಷಿಯ ಮಗ ನಚಿಕೇತ. ಅವನು ಬಾಲಕನಾಗಿದ್ದರೂ ತುಂಬ ಮೇಧಾವಿ; ವಿಚಾರಶೀಲ. ಅವನ ತಂದೆ ವಾಜಶ್ರವಸನು ಕರ್ಮಠನಾಗಿದ್ದು ಯಜ್ಞಯಾಗಾದಿಕರ್ಮಕಾಂಡದಲ್ಲಿ ನಿರತನಾಗಿದ್ದನು. ಒಂದ ಸಲ ಆ ಋಷಿ ವಿಶ್ವಜಿತ್ ಎಂಬ ಒಂದು ಯಾಗವನ್ನು ನಡೆಸಿದ. ಆ ಯಾಗದಲ್ಲಿ ತನ್ನಲ್ಲಿರುವ ಸರ್ವಸ್ವವನ್ನೂ ದಾನಮಾಡಬೇಕಾಗುತ್ತದೆ. ಆಗ ವಾಜಶ್ರವಸನು ಮಾಡಿದ ದಾನಗಳಲ್ಲಿ ಕೆಲವು ಮುದಿ ಹಸುಗಳು ಇದ್ದವು. ಅವುಗಳಿಗೆ ಸರಿಯಾಗಿ ತಿರುಗಾಡುವ ಶಕ್ತಿ ಸಹ ಇರಲಿಲ್ಲ. ಅವನ್ನು ನೋಡಿದರೆ ಹುಲ್ಲುನೀರಿನ ಋಣ ಆ ಹಸುಗಳಿಗೆ ಮುಗಿದುಹೋದಂತೆ ಕಾಣುತ್ತಿತ್ತು! ಇನ್ನು ಅಷ್ಟು ವಯಸ್ಸಾದ ಹಸುಗಳು ಹಾಲನ್ನು ಕೊಡುತ್ತವೆಯೋ?

ಅದನ್ನು ನೋಡಿದ ನಚಿಕೇತನ ಮನಸ್ಸಿನಲ್ಲಿ– "ಅಯ್ಯೋ ಇಂಥ ಗೋವುಗಳನ್ನು ದಾನಮಾಡಿದರೆ ಯಾವ ಫಲ ದೊರಕೀತು? ದಾನಮಾಡತಕ್ಕವನಿಗೆ ಅನಂದ ಎಂಬ ದುಃಖಪ್ರಾಯವಾದ ಲೋಕವೇ ಪ್ರಾಪ್ತವಾಗುತ್ತದೆ," ಎಂಬ ಚಿಂತೆ ಹುಟ್ಟುತ್ತದೆ. "ನಾನು ತಂದೆಯ ಆಸ್ತಿಯಾಗಿದ್ದೇನೆ. ನನ್ನನ್ನಾದರೂ ದಾನಮಾಡಿ ತಂದೆಯು ಪುಣ್ಯವನ್ನುಗಳಿಸಲಿ" ಎಂಬ ಶ್ರದ್ಧಾಭಾವವು ಮೂಡುತ್ತದೆ. ಅವನು ತಂದೆಯ ಬಳಿಗೆ ಹೋಗಿ– "ಅಪ್ಪ ನನ್ನನ್ನೂ ದಾನಮಾಡು. ನನ್ನನ್ನು ಯಾರಿಗೆ ಕೊಡುತ್ತೀಯೆ?" ಎಂದು ಕೇಳುತ್ತಾನೆ. ಆ ಮುಗ್ಧ ಬಾಲಕನ ಪ್ರಶ್ನೆಗೆ ವಾಜಶ್ರವನು ಯಾವ ಉತ್ತರವನ್ನೂ ಕೊಡುವುದಿಲ್ಲ. ನಚಿಕೇತನು ಮತ್ತೆ ಮತ್ತೆ ಹೀಗೆಯೇ ಕೇಳಲಾಗಿ, ವಾಜಶ್ರವನಿಗೆ ಸಿಟ್ಟುಬಂದು– "ನಿನ್ನನ್ನು ಮೃತ್ಯುವಿಗೆ ಕೊಡುತ್ತೇನೆ" ಎಂದು ಹೇಳಿಬಿಡುತ್ತಾನೆ! ಅವನು ಸುಲಭವಾಗಿ ಕೋಪಗೊಳ್ಳುವ ದುಡುಕಿನ ಸ್ವಭಾವದವನೆಂದು ಕಾಣುತ್ತದೆ.

ಆಗ ನಚಿಕೇತನು "ನನ್ನ ತಂದೆ ನನ್ನನ್ನು ಯಮನಿಗೆ ಕೊಡುತ್ತಾನೆ. ತಂದೆಯ ಮಾತು ಸುಳ್ಳಾಗದು. ಆದರೆ, ಯಮನಿಗೆ ನನ್ನಿಂದ ಯಾವ ಪ್ರಯೋಜನವುಂಟು? ಪ್ರತಿದಿನವೂ ಜನರು ಸತ್ತು ಯಮನ ಬಳಿಗೆ ಹೋಗುತ್ತಲೇ ಇದ್ದಾರೆ! ಮುಂದೆ ಹೋಗಲಿರುವ ಬಹು ಜನರಲ್ಲಿ ಈಗ ನಾನು ಮೊದಲನೆಯವನಾದೇನು. ಹಿಂದೆ ಹೋಗಿರ

Sri Vidyabharathi Book Centre, Sringeri

CC-O. In Public Domain. Digitized by eGangotri

ತಕ್ಕವರನ್ನು ಗಣಿಸಿದಾಗ ನಾನು ಮಧ್ಯಮನಾಗುತ್ತೇನೆ. ನನ್ನನ್ನು ದಾನಮಾಡಿದ್ದ ರಿಂದ ಯಮನಿಗೆ ಆಗುವ ಉಪಕಾರವೇನು?"– ಎಂದು ಆಲೋಚಿಸುತ್ತಾನೆ. ಅಷ್ಟರಲ್ಲಿ ವಾಜಶ್ರವಸನಿಗೆ ತಾನು ಆಡಿದ ಮಾತಿಗಾಗಿ ಬಹಳ ಪಶ್ಚಾತ್ತಾಪವಾಗುತ್ತದೆ. ಮಗ ನನ್ನು ಮೃತ್ಯುವಿಗೆ ಕೊಡುತ್ತೇನೆ ಎಂದುಬಿಟ್ಟೆನಲ್ಲ–ಎಂದು ಅತೀವ ವಿಷಣ್ಣನಾಗು ತ್ತಾನೆ. ಆಗ ನಚಿಕೇತನು ತಂದೆಗೆ ಹೇಳುವ ಸಾಂತ್ವನ ವಾಕ್ಯವಿದು – "ಅಪ್ಪ, ಇದ ಕ್ಕಾಗಿ ವ್ಯಥೆಪಡಬೇಡ. ಒಂದಲ್ಲ ಒಂದು ದಿನ ಎಲ್ಲರೂ ಮೃತ್ಯುವಶರಾಗಲೇಬೇಕು. ನಿನ್ನ ತಂದೆ–ಅಜ್ಜ ಮೊದಲಾದವರು ಹೀಗೆಯೇ ಹೋದರೆಂಬುದನ್ನೂ, ಮುಂದಿನವರೂ ಹಾಗೆಯೇ ಹೋಗುತ್ತಾರೆಂಬುದನ್ನೂ ಗಮನಿಸು. ಸಸ್ಯದಂತೆ ಮನುಷ್ಯನು ಜೀರ್ಣನಾಗಿ ಸಾಯುತ್ತಾನೆ. ಕಾಲಬಂದಾಗ ಮತ್ತೆ ಸಸ್ಯದಂತೆ ಹುಟ್ಟಿ ಬರುತ್ತಾನೆ." ನಚಿಕೇತನು ಎಷ್ಟು ವಿಚಾರ ಪರನೆಂಬುದು ಇದರಿಂದ ಗೊತ್ತಾಗುತ್ತದೆ.

ಅನಂತರ ನಚಿಕೇತನು ತಂದೆಯ ಮಾತಿನಂತೆ ಯಮಲೋಕಕ್ಕೆ ಹೋಗುತ್ತಾನೆ. ಅವನು ಹೋದದ್ದು ಹೇಗೆ ಎಂಬುದು ನಮಗೆ ಸರಿಯಾಗಿ ತಿಳಿಯುವುದಿಲ್ಲ. ಬಹುಶ ವಾಜಶ್ರವಸ ಋಷಿಯು ತನ್ನ ತಪೋಬಲದಿಂದ ಕಳುಹಿಸಿರಬಹುದು. ಅವನು ಸಶರೀರನಾಗಿಯೇ ಹೋದದ್ದರಿಂದ ಅದೊಂದು ವಿಶೇಷ ಘಟನೆಯಾಗಿರಬೇಕು. ಅವನು ಮೃತನಾಗಿ ಹೋಗದ ಪ್ರಯುಕ್ತ ಯಮದೂತರ ಕಟ್ಟಿಗೆ ಸಿಕ್ಕದೆ ನೇರವಾಗಿ ಯಮನ ಅರಮನೆಗೆ ಹೋಗುತ್ತಾನೆ. ಯಮನು ಮನೆಯಲ್ಲಿರುವುದಿಲ್ಲ. ಅತಿಥಿಯಾಗಿ ಬ್ರಾಹ್ಮಣನು ಬಂದನೆಂದು ಯಮನ ಪರಿಚಾರಕರು ಅವನನ್ನು ಉಪಚರಿಸಲು ಬರುತ್ತಾರೆ. ನಚಿಕೇತನು ಅನ್ನಪಾನಾದಿಗಳನ್ನು ಸ್ವೀಕರಿಸದೆ ಉಪವಾಸವಿರುತ್ತಾನೆ. ಮೂರು ರಾತ್ರಿಗಳು ಹೀಗೆ ಕಳೆದ ಮೇಲೆ ಯಮನು ಮನೆಗೆ ಹಿಂದಿರುತ್ತಾನೆ.

ಅವನ ಅಮಾತ್ಯರು ಯಮನನ್ನು ಕುರಿತು– "ಹೇವೈವಸ್ವತ,ಒಬ್ಬ ಬ್ರಾಹ್ಮಣನು ಅತಿಥಿಯಾಗಿ ನಿನ್ನ ಮನೆಗೆ ಬಂದಿದ್ದಾನೆ. ಅತಿಥಿಯೆಂದರೆ ಸಾಕ್ಷಾತ್ ವೈಶ್ವಾನರಾಗ್ನಿ ಯಿದ್ದಂತೆ, ಮೂರು ರಾತ್ರಿಗಳು ಉಪವಾಸವಿದ್ದಾನೆ. ಅವನಿಗೆ ಪಾದ್ಯಾದಿಗಳನ್ನಿತ್ತು ಉಪಚರಿಸು" ಎಂದು ಹೇಳಿದರು. ಒಡನೆಯೆ ಯಮನು ಅರ್ಘ್ಯಪಾದ್ಯಾದಿಗಳನ್ನು ತೆಗೆದುಕೊಂಡು ಹೋಗಿ ನಚಿಕೇತನನ್ನು ಉಪಚರಿಸಿದನು. ಅನಂತರ, "ಹೇ ಬ್ರಾಹ್ಮಣ, ನಮಸ್ಕಾರ ಯೋಗ್ಯನಾದ ಅತಿಥಿ ನೀನು. ಇದೋ ನಿನಗೆ ನಮಸ್ಕರಿಸುತ್ತೇನೆ. ನನಗೆ ಒಳ್ಳೆಯದಾಗಲೆಂದು ನೀನು ಹರಸು. ನನ್ನ ಮನೆಯಲ್ಲಿ ಮೂರು ದಿನಗಳವರೆಗೆ ನೀನು ಉಪವಾಸವಿರುವಂತಾಯಿತಲ್ಲವೇ? ಅದಕ್ಕಾಗಿ ವ್ಯಥೆಪಡುತ್ತೇನೆ. ಅದರ ಪರಿಹಾರಕ್ಕಾಗಿ ಮೂರು ವರಗಳನ್ನು ನಿನಗೆ ಕೊಡುತ್ತೇನೆ. ಇಷ್ಟ ಬಂದ ವರಗಳನ್ನು ಕೇಳಿಕೋ" ಎಂದು ನುಡಿದನು.

ಯಮನನ್ನು ಮೃತ್ಯುದೇವತೆ ಎನ್ನುತ್ತಾರೆ. ಅವನು ಕ್ರೂರಿಯೆಂದು ಜನರು ತಿಳಿದು ಕೊಂಡಿರುವುದು ಸರಿಯಲ್ಲ. ಅವನು ಧರ್ಮರಕ್ಷಣೆಯ ಅಧಿಕಾರಿ. ಪಾಪ

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ಮಗಳನ್ನು ದಂಡಿಸುವುದು ಅವನ ಕರ್ತವ್ಯ. ಯಮನಿಗೆ ಧರ್ಮರಾಜನೆಂಬ ಹೆಸರಿದೆ. ಪಾಪಕರ್ಮಗಳಿಗೆ ಶಿಕ್ಷೆಯನ್ನಿತ್ತು ಧರ್ಮವನ್ನು ಸಂರಕ್ಷಿಸತಕ್ಕವನು ಧರ್ಮ ರಾಜ. ಅಲ್ಲದೆ ಆತನು ಬ್ರಹ್ಮಜ್ಞಾನಿ. ಅವನನ್ನು ಬ್ರಹ್ಮವಿದ್ಯಾಚಾರ್ಯನೆಂದು ಶ್ರೀ ಶಂಕರಾಚಾರ್ಯರು ಗೌರವಿಸಿದ್ದಾರೆ. ಆತ್ಮಜ್ಞಾನಿಯಾದರೂ ವಸಿಷ್ಠನಾರದಾದಿ ಗಳಂತೆ ಆಧಿಕಾರಿಕ ಪುರುಷನಾಗಿ, ಈಶ್ವರನ ಆಜ್ಞೆಯಂತೆ, ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾನೆಂದುತಿಳಿಯಬೇಕು.

ಆಗ ನಚಿಕೇತನು ಕೇಳಿಕೊಂಡ ಮೊದಲನೆಯ ವರ ಇದು– "ಯಮರಾಜ, ನನ್ನ ತಂದೆಯು ಚಿಂತಾಕ್ರಾಂತನಾಗಿ ನನ್ನ ಪುತ್ರನ ಗತಿ ಏನಾಗಿರಬಹುದೆಂದು ಪರಿತಪಿಸುತ್ತಿದ್ದಾನೆ. ಅವನ ಮನಸ್ಸಿಗೆ ಶಾಂತಿಯೊದಗಿ, ಚಿತ್ತವು ಪ್ರಸನ್ನವಾಗಿರಲಿ. ನೀನು ಒಂದು ವೇಳೆ ಭೂಲೋಕಕ್ಕೆ ಹಿಂದಿರುಗುವಂತೆ ನನ್ನನ್ನು ಕಳುಹಿಸಿದ ಪಕ್ಷದಲ್ಲಿ, ಆತನು ನನ್ನನ್ನು ಗುರುತಿಸಿ ಸ್ವಾಗತಿಸಿ ಪ್ರೀತಿಯಿಂದ ಮಾತಾಡುವಂತಾಗಲಿ, ನನ್ನ ತಂದೆಯ ಕೋಪ ಸ್ವಭಾವವು ಹೋಗಬೇಕು. ಇದು ನಾನು ಕೇಳತಕ್ಕ ಮೊದಲನೆಯ ವರ–" ಎಂದನು. ಅದಕ್ಕೆ ಯಮನು – "ಆಗಬಹುದು ನಚಿಕೇತ. ನಿನ್ನ ತಂದೆ ವಾಜಶ್ರವಸನು ಚಿತ್ತಶಾಂತಿಯನ್ನು ಪಡೆದು ರಾತ್ರಿಯಲ್ಲಿ ಸುಖವಾಗಿ ನಿದ್ರಿಸುವನು. ಅವನ ಕೋಪ ಸ್ವಭಾವ ತೊಲಗುವುದು. ನಿನ್ನನ್ನು ನಿನ್ನ ತಂದೆಯ ಮನೆಗೆ ವಾಪಸು ಕಳಿಸುವುದು ನನ್ನ ಉದ್ದೇಶವಾಗಿದೆ. ನಿನ್ನನ್ನು ಅವನು ಗುರುತಿಸಿ ಸ್ವಾಗತಿಸುತ್ತಾನಲ್ಲದೆ, ಪ್ರೀತಿಯಿಂದ ನಿನ್ನೊಡನೆ ಮಾತಾಡುವನು. ಈ ವರವನ್ನು ಸಲ್ಲಿಸಿದ್ದೇನೆ. ಇನ್ನು ಎರಡನೆಯ ವರವನ್ನು ಕೇಳಿಕೋ" ಎಂದನು. ತಂದೆಯು ಪ್ರಸನ್ನ ಚಿತ್ತನಾದನೆಂಬು ದನ್ನು ತಿಳಿದ ನಚಿಕೇತನು ಸಂತುಷ್ಟನಾಗಿ "ಹೇ ಮೃತ್ಯುದೇವ, ಸ್ವರ್ಗಲೋಕದಲ್ಲಿ ರೋಗಾದಿ ಭಯ ಯಾವುದೂ ಇಲ್ಲವೆಂದು ಕೇಳಿದ್ದೇನೆ. ಅಲ್ಲಿರತಕ್ಕವರಿಗೆ ಮುಪ್ಪು ಬರುವುದಿಲ್ಲ. ಅಲ್ಲಿ ನಿನ್ನಿಂದ ಮರಣಭಯವೂ ಇಲ್ಲ. ಹಸಿವು–ಬಾಯಾರಿಕೆಗಳು ಅಲ್ಲಿ ಪೀಡಿಸುವುದಿಲ್ಲವಂತೆ. ಸ್ವರ್ಗಕ್ಕೆ ಹೋದವರು ಶೋಕರಹಿತರಾಗಿ ಆನಂದದಲ್ಲಿ ರುತ್ತಾರೆಂದು ಹೇಳುತ್ತಾರೆ. ಯಮದೇವ ಸ್ವರ್ಗಪ್ರಾಪ್ತಿಕರವಾದ ಯಾಪ ಹೋಮ ವನ್ನು ಯಾವ ಅಗ್ನಿಯಲ್ಲಿ ಮಾಡಬೇಕೆಂಬುದನ್ನು ನೀನು ಬಲ್ಲೆ. ಸ್ವರ್ಗಲೋಕಕ್ಕೆ ಹೋಗಿ ದೇವತೆಗಳಾಗುವ ವಿಧಾನವಾವುದೆಂದು ನಿನಗೆ ಗೊತ್ತಿದೆ. ಆ ವಿಧಿಯನ್ನು ತಿಳಿಯಬೇಕೆಂಬ ಆಸಕ್ತಿ ನನಗೆ ಹುಟ್ಟಿದೆ. ಅದನ್ನು ಕೃಪೆಯಿಂದ ನನಗೆ ತಿಳಿಸಿಕೊಡು. ಇದು ನನ್ನ ಎರಡನೆಯ ವರ" ಎಂದನು.

ಯಮನು ಇಂತೆಂದನು–ನಚಿಕೇತ ಈ ವಿಧಾನವನ್ನು ಹೇಳುವೆನು. ಗಮನ ವಿಟ್ಟು ಕೇಳು. ಸ್ವರ್ಗಪ್ರಾಪ್ತಿಕರವಾದ ಈ ಅಗ್ನಿಯು ಜಗದಾದಿಯಾದ ವಿರಾಟ್ ಸ್ವರೂಪನೆಂದು ತಿಳಿ. ಪ್ರಥಮ ಶರೀರಿಯಾದ ವಿರಾಟ್ ಪುರುಷನು ಅಗ್ನಿ, ವಾಯು, ಆದಿತ್ಯರೂಪಗಳಿಂದ ವ್ಯವಸ್ಥಿತನಾಗಿದ್ದಾನೆ." ಹೀಗೆ ನುಡಿದು ಹೋಮಾರ್ಥವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಕಾದ ಇಷ್ಟಕಗಳು, ಹೋಮಕುಂಡದ ರಚನೆ, ಅಗ್ನಿ ಚಯನ, ಆಹುತಿಗಳ ಪ್ರಕಾರ- ಇವೆಲ್ಲವನ್ನೂ ಆಯಾ ಮಂತ್ರಗಳನ್ನು ಹೇಳಿಕೊಟ್ಟನು. ಅದೆಲ್ಲವನ್ನೂ ತಾನು ಚೆನ್ನಾಗಿ ಗ್ರಹಿಸಿದ್ದೇನೆಂದು ತೋರಿಸುವುದಕ್ಕಾಗಿ ನಚಿಕೇತನು, ಯಮನು ಬೋಧಿಸಿದ ಎಲ್ಲ ವಿವರಗಳನ್ನೂ ತಾನು ಪುನರುಚ್ಚರಿಸಿ ಪಾಠ ಒಪ್ಪಿಸಿದನು. ಮಹಾತ್ಮನಾದ ಯಮನಿಗೆ ಅದರಿಂದ ಬಹಳ ಸಂತೋಷವಾಯಿತು. ಅವನು "ನಚಿಕೇತ, ನಾಲ್ಕನೆಯದಾಗಿ ಇನ್ನೊಂದು ವರವನ್ನು ನಾನಾಗಿ ಕೊಟ್ಟು ಬಿಡುತ್ತೇನೆ. ಈ ಅಗ್ನಿಯು ನಿನ್ನ ಹೆಸರಿನಿಂದಲೇ ಲೋಕದಲ್ಲಿ ನಾಚಿಕೇತಾಗ್ನಿಯೆಂದು ಪ್ರಸಿದ್ಧವಾಗಲಿ ! ಈ ಅಗ್ನಿ ಚಯನವನ್ನು ಶಾಸ್ತ್ರೋಕ್ತವಾಗಿ ಮೂರು ಸಲ ಮೂರು ಪ್ರಕಾರಗಳಿಂದೊಡಗೂಡಿ ಯಾವನು ನಡೆಸುತ್ತಾನೋ ಅವನು "ತ್ರಿಣಾಚಿಕೇತ" ಎನಿಸಿಕೊಳ್ಳುತ್ತಾನೆ. ಅವನಿಗೆ ಮೃತ್ಯು ಭಯವಿಲ್ಲ. ಚಿರಶಾಂತಿಯು ದೊರೆಯುವುದು. ಅವನು ವಿರಾಟ್‌ಸ್ವರೂಪವನ್ನರಿತು ಸರ್ವಜ್ಞನೆನಿಸಿ ವೈರಾಜ ಲೋಕದಲ್ಲಿ ಆನಂದದಿಂದ ನೆಲಸುವನು. ನಚಿಕೇತ ಪಾರಿತೋಷಕವಾಗಿ ಈ ರತ್ನಹಾರವನ್ನು ಸ್ವೀಕರಿಸು. ಇದು ನಾನಾಗಿ ಕೊಟ್ಟ ವರವಾಯಿತು. ಇನ್ನು ನಿನ್ನ ಮೂರನೆಯ ವರವನ್ನು ಕೇಳಿಕೋ" ಎಂದನು.

ವಿದ್ವಾನ್ ಎನ್. ರಂಗನಾಥಶರ್ಮಾ

(ಸಶೇಷ)

Perimeter Protection + Trap Protection × Total Protection

Get your property and men protected by highly talented security experts. We give our people result oriented tough training like Defence forces. Let your property be small or big. We will shoulder the entire responsibility to protect your property once if you are in touch with us.

Contact :

K. T. R. SECURIPLANS
(Security Consultants & Agents)
F-734, Uttaradi Mutt Street,
Mysore - 570 004

K. Thiagarajan
Director
Phone : 26711 & 32739

Sri Vidyabharathi Book Centre, Sringeri

CC-O. In Public Domain. Digitized by eGangotri

ವೈದಿಕ ಸಂಸ್ಕಾರಗಳು

(ಮೊದಲಿನ ಆರು)

ಪ್ರಪಂಚದ ಎಲ್ಲ ದೈವವಾದೀ ಮತಗಳಲ್ಲೂ ಮನುಷ್ಯರಿಗೆ ಸಂಸ್ಕಾರಗಳುಂಟು. ಸಂಸ್ಕಾರವೆಂದರೆ ಉತ್ತಮಪಡಿಸುವುದು, ಶುದ್ಧಿಗೊಳಿಸುವುದು ಎಂದರ್ಥ. (ವಸ್ತುಗಳಿಗೂ ಸಹ ಸಂಸ್ಕಾರವುಂಟು. ಆಯಾವಸ್ತುಗಳಲ್ಲಿರುವ ದೋಷಗಳನ್ನು ಹೋಗಲಾಡಿಸುವುದು ವಸ್ತುಸಂಸ್ಕಾರ. ಕೃಷ್ಣಾಜಿನ, ವ್ಯಾಘ್ರಾಜಿನಗಳನ್ನು ಸಂಸ್ಕರಿಸುವುದರಿಂದ ಮೃದುವಾಗುತ್ತವೆ. ವಜ್ರವನ್ನು ಕತ್ತರಿಸಿ ಸಾಣೆಮಾಡುವ ಸಂಸ್ಕಾರದಿಂದ ಅದು ಪ್ರಕಾಶಮಾನವಾಗುತ್ತದೆ. ಇತ್ಯಾದಿ).

ಮನುಷ್ಯನಲ್ಲಿ ದೇಹೇಂದ್ರಿಯಗಳಿಗೆ ಸಂಬಂಧಿಸಿದ ದೋಷಗಳೂ, ಅಂತಃಕರಣಕ್ಕೆ ಸಂಬಂಧಿಸಿದ ದೋಷಗಳೂ, ಗರ್ಭ ಮತ್ತು ಬೀಜಗಳಿಗೆ ಸಂಬಂಧಿಸಿದ ದೋಷಗಳೂ ಇರುತ್ತವೆ. ಈ ದೋಷಗಳನ್ನು ಹೊಗಲಾಡಿಸುವುದಕ್ಕಾಗಿ ಮಂತ್ರಪೂರ್ವಕವಾದ ಸಂಸ್ಕಾರಗಳಿವೆ. ಇಂದಿಗೂ ವೈದಿಕರು ಈ ಸಂಸ್ಕಾರಗಳನ್ನು ಸಕಾಲದಲ್ಲಿ ಬಹು ಶ್ರದ್ಧೆಯಿಂದ ಮಾಡುತ್ತಾರೆ.

ಶರೀರ ಧರ್ಮಾಚರಣೆಗೆ ಸಾಧನ –"ಶರೀರಮಾದ್ಯಂ ಖಲು ಧರ್ಮ ಸಾಧನಮ್". ಆದ್ದರಿಂದ ಮನುಷ್ಯನ ದೇಹೇಂದ್ರಿಯಾದಿಗಳು ಪರಿಶುದ್ಧವಾಗಿರಬೇಕಾದುದು ಅವಶ್ಯ. ಮತ್ತು ಜೀವಿಗೆ ಮನಸ್ಸೇ ಬಂಧ – ಮೋಕ್ಷಗಳಿಗೆ ಕಾರಣ–"ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ". ಮನಸ್ಸು ಆಹಾರದ ಪರಿಣಾಮ. ಆಹಾರ ಶರೀರದಲ್ಲಿ ಪರಿಣಮಿಸಿ ಮನಸ್ಸಾಗುವುದರಿಂದ ಶುದ್ಧವಾದ ಆಹಾರವನ್ನೇ ಸೇವಿಸಬೇಕು. ಆದರಿಂದ ಮನಶುದ್ಧಿಯುಂಟಾಗಿ ಕಾಮ ಕ್ರೋಧಗಳ ಉದ್ರೇಕ ಕಡಿಮೆಯಾಗುತ್ತದೆ. ಆದ್ದರಿಂದ ಸಾತ್ತ್ವಿಕ ಆಹಾರವನ್ನೇ ಸೇವಿಸಬೇಕು. ಹಾಗೂ ಮೇಲೆ ಹೇಳಿದ ದೋಷಗಳ ಪರಿಹಾರಕ್ಕಾಗಿ ಕಾಲಕಾಲಕ್ಕೆ ಉಚಿತ ಸಂಸ್ಕಾರಗಳನ್ನು ಹೊಂದಿ ಪರಿಶುದ್ಧರಾಗಬೇಕು. ಐಹಿಕಾಮುಷ್ಮಿಕ ಸಾಧನಗಳಾದ ವೈದಿಕ ಸಂಸ್ಕಾರಗಳನ್ನು ಕುರಿತು ಮಹರ್ಷಿ ಆಂಗೀರಸರು ಹೇಳಿರುತ್ತಾರೆ – ಹೇಗೆ ಅನೇಕ ಅಂಗೋಪಾಂಗಗಳಿಂದ ಕೂಡಿದ ಚಿತ್ರಕರ್ಮವು ಸಾವಕಾಶವಾಗಿ ಅರಳುವುದೋ, ಹಾಗೆಯೇ ವಿಧಿಪೂರ್ವಕವಾದ ಅನೇಕ ಸಂಸ್ಕಾರಗಳ ಮೂಲಕ ಬ್ರಾಹ್ಮಣ್ಯವು ಉಂಟಾಗುತ್ತದೆ.[1] ಮಹತ್ವಾಕಾಂಕ್ಷೆಯು

1 ಚಿತ್ರಂಕರ್ಮಯಥಾನೇಕೈರಂಗೈರುನ್ಮೀಲ್ಯತೇ ಶನೈಃ ।
ಬ್ರಾಹ್ಮಣ್ಯಮಪಿ ತದ್ವತ್ಸ್ಯಾತ್ಸಂಸ್ಕಾರೈರ್ವಿಧಿಪೂರ್ವಕೈಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಗೃಹ್ಯೋಕ್ತರೀತಿಯಿಂದಲೇ ಎಲ್ಲ ಸಂಸ್ಕಾರಗಳನ್ನು ಹೊಂದಿದ್ದಲ್ಲದೆ ಸ್ವರ್ಗಾಪವರ್ಗ ಸಾಧನವಾದ ಅನ್ಯಮಾರ್ಗವಿಲ್ಲ.[1]

ಇಂತಹ ಸಂಸ್ಕಾರಗಳನ್ನು ಹೊಂದಿದ ವಿಪ್ರರು ಮಾತ್ರ ನಿತ್ಯ, ನೈಮಿತ್ತಿಕ ಮತ್ತು ಕಾಮ್ಯಕರ್ಮಗಳೆಂಬ ಕರ್ಮಗಳನ್ನು ಮಾಡಲು ಅರ್ಹರಾಗುತ್ತಾರೆ.

ಕಾಮ್ಯಕರ್ಮಗಳು ಜನನ-ಮರಣರೂಪವಾದ ಸಂಸಾರ ಚಕ್ರಕ್ಕೆ ಕಾರಣವಾಗುತ್ತುವುದರಿಂದ, ಜ್ಞಾನಿಗಳು ಕಾಮ್ಯಕರ್ಮಗಳನ್ನು ತಿರಸ್ಕರಿಸುತ್ತಾರೆ. ನಿಷ್ಕಾಮರಾಗಿ ನಿತ್ಯ ನೈಮಿತ್ತಿಕ ಕರ್ಮಗಳನ್ನು ಮಾತ್ರ ಆಚರಿಸುತ್ತಾ ಚಿತ್ತಶುದ್ಧಿಯನ್ನು ಹೊಂದುತ್ತಾರೆ. ಆಚಾರ್ಯರು "ಚಿತ್ತಸ್ಯ ಶುದ್ಧಯೇ ಕರ್ಮ" ಎಂದು ಅಪ್ಪಣೆಕೊಡಿಸಿದ್ದಾರೆ. ಚಿತ್ತಶುದ್ಧಿಯಿಂದ ಏಕಾಗ್ರತೆಯನ್ನು ಹೊಂದಿದ ಮುಮುಕ್ಷುವು ಸಾಧನ ಚತುಷ್ಟಯ ಸಂಪನ್ನನಾಗಿ ಸದ್ಗುರುವಿನ ಉಪದೇಶದಿಂದ ಮುಕ್ತನಾಗುತ್ತಾನೆ. ಹೀಗೆ ಸ್ವರ್ಗ ಕಾಮನಸಿಗೂ ಮೋಕ್ಷಾಪೇಕ್ಷಿಗೂ ಸಂಸ್ಕಾರಗಳು ಅನಿವಾರ್ಯವಾಗಿವೆ. ಮುಂದೊಂದು ದಿನ ಮುಮುಕ್ಷುವಿಗೆ ನಾಮಗೋತ್ರಗಳೂ, ಜಾತ್ಯನ್ವಯ ಸಂಸ್ಕಾರಗಳೂ ಶಾಸ್ತ್ರಾಧ್ಯಯನವೂ ವ್ಯರ್ಥವಾಗುವ ವಿಷಯ ಬೇರೆ.[2]

ಅಂತಹ ಸಂಸ್ಕಾರಗಳು 48 ಇವೆ.[3] ಅವುಗಳಲ್ಲಿ 25 ನಿತ್ಯ,[4] ಮತ್ತು 16 ನೈಮಿತ್ತಿಕ ಸಂಸ್ಕಾರಗಳಾಗಿವೆ. ನಿತ್ಯವಾದ ಪಂಚವಿಂಶತಿ ಸಂಸ್ಕಾರಗಳಿಂದ ಸಂಸ್ಕೃತರಾದ ಬ್ರಾಹ್ಮಣೋತ್ತಮರೇ ಶ್ರಾದ್ಧಯಜ್ಞಾದಿಗಳಲ್ಲಿ ವರಿಸಲು ಯೋಗ್ಯರಾಗಿರುತ್ತಾರೆ. ಷೋಡಶ ನೈಮಿತ್ತಿಕ ಸಂಸ್ಕಾರಗಳು ಕ್ರಮವಾಗಿ – ಗರ್ಭದಾನ, ಪುಂಸವನ, ಸೀಮಂತೋನ್ನಯನ, ವಿಷ್ಣುಬಲಿ, ಜಾತಕರ್ಮ, ನಾಮಕರಣ, ನಿಷ್ಕ್ರಮಣ, ಅನ್ನಪ್ರಾಶನ, ಚೌಲ, ಉಪನಯನ, ಮಹಾನಾಮ್ನೀ, ಮಹಾವ್ರತ, ಉಪನಿಷದ್ವ್ರತ, ಗೌದಾನಿಕ, ಸಮಾವರ್ತನ ಮತ್ತು ವಿವಾಹ.[5]

---

1 ಸ್ವೇ ಸ್ವೇ ಗೃಹ್ಯೇ ಯಥಾ ಪ್ರೋಕ್ತಾಸ್ತಥಾ ಸಂಸ್ಕೃತಯೋಽಖಿಲಾಃ ।
ಕರ್ತವ್ಯಾ ಭೂತಿಕಾಮೇನ ನಾನ್ಯಥಾಸಿದ್ಧಿಮೃಚ್ಛತಿ ॥

2 ಅವಿಜ್ಞಾತೇ ಪರೇ ತತ್ತ್ವೇ ಶಾಸ್ತ್ರಾಧೀತಿಸ್ತು ನಿಷ್ಫಲಾ ।
ವಿಜ್ಞಾತೇಽಪಿ ಪರೇ ತತ್ತ್ವೇ ಶಾಸ್ತ್ರಾಧೀತಿಸ್ತು ನಿಷ್ಫಲಾ ॥
ವಾಗ್ವೈಖರೀ ಶಬ್ದಝರೀ ಶಾಸ್ತ್ರವ್ಯಾಖ್ಯಾನಕೌಶಲಂ ।
ವೈದುಷ್ಯಂ ವಿದುಷಾಂ ತದ್ವತ್ ಭುಕ್ತಯೇನತು ಮುಕ್ತಯೇ ॥
ವಿವೇಕ ಚೂಡಾಮಣಿ

3 ಸಂಸ್ಕಾರಾಃ – ತೇ ಚ ಅಷ್ಟಾಚತ್ವಾರಿಂಶತ್ ॥ ಗೌತಮ.

4 ಪಂಚವಿಂಶತಿ ಸಂಸ್ಕಾರೈಃ ಸಂಸ್ಕೃತಾಯೇ ದ್ವಿಜಾತಯಃ ।
ತೇ ಪವಿತ್ರಾಶ್ಚ ಯೋಗ್ಯಾಸ್ಯುಃ ಶ್ರಾದ್ಧಾದಿಷು ಸುಯಂತ್ರಿಕಾಃ ॥

5 ನೈಮಿತ್ತಿಕಾಃ ಷೋಡಶೋಕ್ತಾಃ ಸಮುದ್ವಾಹಾವಸಾನಕಾಃ ॥ ಆಶ್ವಲಾಯನ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬಹು ಜನ್ಮಾರ್ಜಿತವಾದ ಪುಣ್ಯವಂಶದಿಂದ ಬಾಲ್ಯದಲ್ಲಿಯೇ ವೈರಾಗ್ಯ ಹೊಂದಿದ ಸುಕೃತಿಯು ಬ್ರಹ್ಮಚರ್ಯಾಶ್ರಮದಿಂದಲೇ ತುರೀಯಾಶ್ರಮವನ್ನು ಹೊಂದ ಬಹುದಾದ್ದರಿಂದ ಆತನಿಗೆ ಮೊದಲಿನ ಹದಿನಾಲ್ಕು ಸಂಸ್ಕಾರಗಳು ಮಾತ್ರ ಅನಿವಾರ್ಯ. ಈಗ ಹದಿನಾರು ಸಂಸ್ಕಾರಗಳಲ್ಲಿ ಮೊದಲಿನ ಆರು ಸಂಸ್ಕಾರಗಳನ್ನು ಕುರಿತು ವಿಚಾರ ಮಾಡೋಣ.

ತನ್ನ ಧರ್ಮಪತ್ನಿಯ ಗರ್ಭದಲ್ಲಿ ಸಂಭವಿಸುವ ಪ್ರತಿಗರ್ಭಸಂಸ್ಕಾರಾರ್ಥ ವಾಗಿಯೂ, ಶಿಶುಗಳ ಅತಿಶಯ ಜನನಾರ್ಥವಾಗಿಯೂ ಪ್ರತಿಯೊಂದು ನಿಷೇಕದಲ್ಲಿಯೂ (ಬೀಜವು ವ್ಯರ್ಥವಾಗದಂತೆ) ಪಿಂಡೋತ್ಪತ್ತಿಯಾಗುವುದಕ್ಕೂ ಗರ್ಭಸಂಬಂಧವಾದ ಮತ್ತು ಬೀಜ ಸಂಬಂಧವಾದ ದೋಷಪರಿಹಾರಾರ್ಥವಾಗಿಯೂ ಗರ್ಭಾಧಾನ ಸಂಸ್ಕಾರ ವನ್ನು ಹೇಳಿದೆ.

ಶಿಶುವಿಗೆ ಪುಂರೂಪವುಂಟಾಗುವುದಕ್ಕೂ ಮತ್ತು ಜ್ಞಾನೋತ್ಪತ್ತಿ ಪ್ರತಿರೋಧ ಪರಿಹಾರಕ್ಕೂ, ಪುಂಸವನ ಸಂಸ್ಕಾರವನ್ನು ಹೇಳಲಾಗಿದೆ.

ಗರ್ಭಪೀಡಾಕರ ದುಷ್ಟರಾಕ್ಷಸೀಗಣ ದೂರ ನಿರಾಸದ್ವಾರಾ ಕ್ಷೇಮ ಉಂಟಾಗು ವುದಕ್ಕೂ, ಸಕಲ ಸೌಭಾಗ್ಯನಿದಾನಭೂತ ಮಹಾಲಕ್ಷ್ಮೀನಿವೇಶನಕ್ಕೂ ಸ್ತ್ರೀ ಸಂಸ್ಕಾರ ರೂಪವಾದ ಸೀಮಂತೋನ್ನಯನ ಸಂಸ್ಕಾರವಿದೆ.

ಗುರ್ವಿಣೀ ಪತಿಯು ಗರ್ಭನಿರ್ಬಾಧಾ ಪರಿಪೋಷಣ ಪೂರ್ವಕ ಸುಖಪ್ರಸೂತಿ ಯುಂಟಾಗುವುದಕ್ಕೆ ಮತ್ತು ಗರ್ಭಾಧಿದೇವತೆಯಾದ ಶ್ರೀ ಮಹಾವಿಷ್ಣು ಪ್ರೀತ್ಯರ್ಥವಾಗಿ "ವಿಷ್ಣುಬಲಿ" ಎಂಬ ಕರ್ಮವನ್ನು ಆಚರಿಸುತ್ತಾನೆ.

ಶಿಶುವಿನ ಜನನಾನಂತರ ನಾಭೀ ಛೇದಕ್ಕೆ ಮೊದಲೇ ನಡೆಯುತ್ತಿದ್ದ ಸಂಸ್ಕಾರ ಜಾತಕರ್ಮ. ವಿಷಮಮಾನದಿಂದ ಮಧುಘೃತಗಳನ್ನು ಸ್ವರ್ಣರಜದ(ಕಣ) ಪ್ರಾಶನ ಮೂಲಕ ಶಿಶುವಿಗೆ ಗರ್ಭಾಂಬುಪಾನದೋಷ ಪರಿಹಾರಕವಾಗಿಯೂ, ಸವಿತೃ, ಸರಸ್ವತಿ, ಮತ್ತು ಅಶ್ವಿನೀ ದೇವತೆಗಳ ಪ್ರಸಾದದಿಂದ ಶಿಶುವಿನ ಸವ್ಯ ದಕ್ಷಿಣ ಕರ್ಣಗಳಿಗೆ ಸ್ವರ್ಣಸ್ಪರ್ಶಮಾಡಿಸುವ ಮೂಲಕ ಆಯುರ್ಮೇಧಾಭಿವೃದ್ಧಿ ಹಾಗೂ ವೇದಶ್ರವಣಾಧಿಕಾರವನ್ನುಂಟುಮಾಡುವುದಕ್ಕೂ ನಡೆಸುವ ಸಂಸ್ಕಾರಜಾತಕರ್ಮ.

ಷೋಡಶ ಸಂಸ್ಕಾರಗಳಲ್ಲಿ ನಾಮಕರಣವೂ ಒಂದು ಮುಖ್ಯ ಸಂಸ್ಕಾರ. ಶಿಶುವಿಗೆ ಆಯುಷ್ಯಾಭಿವೃದ್ಧಿಗಾಗಿಯೂ ಲೋಕವ್ಯವಹಾರ ಸಿದ್ಧಿಗಾಗಿಯೂ ನಾಮ ಕರಣ ಅನಿವಾರ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವಾಲಯ, ಗಜಾಶ್ವಗಳು, ವೃಕ್ಷಗಳು, ಕೆರೆ, ಭಾವಿ, ಅಂಗಡಿಗಳು, ಸ್ತ್ರೀ ಪುರುಷರು, ಕವಿಗಳು, ಕಾವ್ಯಗಳು, ಅರಮನೆಗಳು, ಇತರ ಕಟ್ಟಡಗಳು– ಎಲ್ಲಕ್ಕೂ ನಾಮಕರಣ ಮಾಡಬೇಕು.

ದೇವಾಲಯ ಗಜಾಶ್ವಾನಾಂ ವೃಕ್ಷಾಣಾಂ ವಾಪಿಕೂಪಯೋಃ ।
ಸರ್ವಾಪಣಾನಾಂ ಪಣ್ಯಾನಾಂ ಚಿಹ್ನಾರ್ಥಂ ಯೋಷಿತಾಂ ನೃಣಾಮ್ ॥
ಕಾವ್ಯಾನಾಂ ಚಕವೀನಾಂ ಚ ಪಶ್ವಾದೀನಾಂ ಚ ಸರ್ವಶಃ ।
ರಾಜ ಪ್ರಾಸಾದ ವಾಸ್ತೂನಾಂ ನಾಮಕರ್ಮ ವಿಶಿಷ್ಯತೇ ॥

ನಿರ್ಣಯಸಿಂಧು.

ವೈದಿಕರು ಶಿಶುವಿಗೆ ಮಾಸನಾಮ, ನಕ್ಷತ್ರನಾಮ ಮತ್ತು ವ್ಯವಹಾರನಾಮ ಎಂದು ಮೂರು ಬಗೆಯ ನಾಮಗಳಿಂದ ನಾಮಕರಣಮಾಡಿರುತ್ತಾರೆ. ಮುಂದಿನ ಎಲ್ಲ ಸಂಸ್ಕಾರಗಳಲ್ಲೂ ಅಭಿವಾದನೀಯ ನಾಮಕ್ಕೇ ಪ್ರಾಶಸ್ತ್ಯ. ಎಲ್ಲ ನಾಮಗಳೂ ಸಾಮಾನ್ಯವಾಗಿ ದೇವತಾನಾಮಗಳಾಗಿಯೇ ಆಗಿರುತ್ತವೆ. ವ್ಯವಹಾರಕ್ಕಾಗಿ ಅಮಂಗಳಕರವಾದ ನಾಮವನ್ನು ಉಚ್ಚರಿಸುವುದರಿಂದ,– ಅನಿಚ್ಛಯಾಽಪಿ **ಸಂಸ್ಪೃಷ್ಟೋ ದಹತ್ಯೇವ ಹಿಪಾವಕಃ**" – ಎಂಬಂತೆ ಪುಣ್ಯಪ್ರದವೇ ಆಗುತ್ತದೆ.

—ತ್ಯಾಮಗೊಂಡ್ಲು ಕೃಷ್ಣಭಟ್ಟ

With best compliments from :

RITZ GROUP OF HOTELS

When you visit Mysore, please stay at

HOTEL METROPOLE or HOTEL KRISHNARAJA SAGAR

RITZ HOTEL (Mysore) Limited,
Jhansi Laxmibai Road,
MYSORE – 570 005
Telephone No. 20681

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮಜ್ಞ ಶ್ರೀರಾಮಚಂದ್ರ

"ರಾಮೋ ವಿಗ್ರಹವಾನ್ ಧರ್ಮಃ"- ಶ್ರೀರಾಮನೆಂದರೆ ಧರ್ಮದ ಮೂರ್ತ ಸ್ವರೂಪ ಎಂಬ ಮಾತು ಬಹುಕಾಲದಿಂದ ಬಳಕೆಯಲ್ಲಿದೆ. ಆದಿಕವಿ ಎಂದು ಹೆಸರಾಂತ ಮಹರ್ಷಿ ವಾಲ್ಮೀಕಿಗಳು ಶ್ರೀರಾಮಾಯಣ ಮಹಾಕಾವ್ಯವನ್ನು ರಚಿಸಲು ಆಕಸ್ಮಿಕ ಘಟನೆಯೊಂದರಿಂದ ಪ್ರೇರಿತರಾದಾಗ, ಅವರಿಗೆ ತ್ರಿಲೋಕ ಸಂಚಾರಿ ಶ್ರೀ ನಾರದ ಮುನಿಗಳ ದರ್ಶನ ಲಭಿಸುತ್ತದೆ. "ತತ್ಕಾಲಕ್ಕೆ ಜಗತ್ತಿನಲ್ಲಿರುವ ಆದರ್ಶ ವ್ಯಕ್ತಿ ಯಾರು ?- ಎಂಬ ಪ್ರಶ್ನೆಯನ್ನು ವಾಲ್ಮೀಕಿಗಳು ನಾರದರ ಮುಂದೆ ಇಡುತ್ತಾರೆ. (ಬಾ. ಕಾಂ. ೧ ನೆಸರ್ಗ- ಶ್ಲೋಕಗಳು ೧ ರಿಂದ ೫). ಈ ಪ್ರಶ್ನೆಯಲ್ಲಿ **"ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ"**- ಧರ್ಮದ ಅರಿವು-ಉಪಕಾರಸ್ಮರಣೆ - ಸತ್ಯವಚನ - ನಿಷ್ಠಾವಂತಿಕೆಗಳನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿ ಯಾರು ? ಎಂಬ ಮಾತು ಇದೆ. ಈ ಪ್ರಶ್ನೆಗೆ ನಾರದರು ವಿಸ್ತಾರವಾದ ಉತ್ತರ ನೀಡಿ (ಸರ್ಗ-೧ ; ಶ್ಲೋಕಗಳು ೬ ರಿಂದ ೯೯) ಶ್ರೀರಾಮನ ವ್ಯಕ್ತಿತ್ವದ ವೈಶಿಷ್ಟ್ಯದೊಡನೆ ಆತನ ಸಂಕ್ಷಿಪ್ತ ಚರಿತ್ರೆಯನ್ನು ತಿಳಿಸುತ್ತಾರೆ. **"ಧರ್ಮಜ್ಞಃ ಸತ್ಯಸಂಧಶ್ಚ ಪ್ರಜಾನಾಂ ಚ ಹಿತೇ ರತಃ"** (ಶ್ಲೋಕ- ೧೨). ಧರ್ಮ ಸೂಕ್ಷ್ಮವನ್ನರಿತು ಸತ್ಯನಿಷ್ಠನಾಗಿ - ಪ್ರಜಾವರ್ಗದ ಹಿತಸಾಧನೆಯಲ್ಲಿ ನಿರತನಾಗಿರುವವನು ಶ್ರೀರಾಮಚಂದ್ರ ಎಂಬ ವಿವರಣೆ ನಾರದರ ಉತ್ತರದಲ್ಲಿ ಅಡಕವಾಗಿದೆ. ನಂತರ ಪರಬ್ರಹ್ಮನೇ ವಾಲ್ಮೀಕಿಗಳಿಗೆ ದರ್ಶನ ನೀಡಿ ಶ್ರೀರಾಮನ ಜೀವನವನ್ನು ಕುರಿತು ಕಾವ್ಯ-ಕಥಾನಕ ರಚಿಸುವಂತೆ ಅನುಗ್ರಹಿಸಿದ ಸಂದರ್ಭದಲ್ಲಿ (ಸರ್ಗ ೨ ; ಶ್ಲೋಕ ೩೧ ರಿಂದ ೩೮) **"ಧರ್ಮಾತ್ಮನೋ ಗುಣವತಃ"**- ಶ್ರೀರಾಮನನ್ನು **"ಧರ್ಮಾತ್ಮಾ - ಗುಣಶಾಲಿ"** ಎಂಬಿತ್ಯಾಗಿ ಸ್ಪಷ್ಟವಾಗಿ ಹೇಳಿದ್ದುಂಟು. ಹೀಗೆ ಶ್ರೀರಾಮನು ಧರ್ಮಾವತಾರನೆಂಬ ಉಲ್ಲೇಖ ಅನೇಕ ಕಡೆಗಳಲ್ಲಿ ಕಾಣಸಿಗುತ್ತದೆ.

ಇಷ್ಟಿದ್ದರೂ, ಬರಬರುತ್ತಾ ಶ್ರೀರಾಮಾಯಣದ ಕೆಲವು ಪ್ರಸಂಗಗಳನ್ನು ಎತ್ತಿಕೊಂಡು ಶ್ರೀರಾಮನನ್ನು "ಅಧರ್ಮ-ಸ್ವಾರ್ಥಸಾಧಕ"- ಎಂದು ಮುಂತಾಗಿ ಚಿತ್ರಿಸುವ ಹವ್ಯಾಸ ಹುಟ್ಟಿಕೊಂಡಿತು. ಉದಾಹರಣೆಗೆ- ಶಂಬೂಕವಧೆ, ವಾಲಿವಧೆ, ಸೀತಾಪರಿತ್ಯಾಗ - ಇತ್ಯಾದಿಗಳು. ಈಚೆಗಿನ ದಿನಗಳಲ್ಲಿ ಶ್ರೀರಾಮ - ಭಗವಾನ್ ಶ್ರೀಕೃಷ್ಣ ಮುಂತಾದ ಮಹನೀಯರ ಬದುಕಿನ ಕೆಲವು ಸನ್ನಿವೇಶಗಳ ಅಂತರಾರ್ಥವನ್ನು ಅರಿತುಕೊಳ್ಳಲಾಗದೆ ಅವು ಇಂದಿನ ಸಾಮಾಜಿಕ ವ್ಯವಸ್ಥೆಗೆ ಕುಠಾರಪ್ರಾಯವಾಗಿವೆಯೆಂಬ - ಅದಕ್ಕೂ ಮಿಗಿಲಾಗಿ - ಅವರ ವ್ಯಕ್ತಿತ್ವವೇ ಕಾಲ್ಪನಿಕವೆಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ತೀರ್ಮಾನಕ್ಕೆ ಬರಲಾಗುತ್ತಿದೆ. ಶ್ರೀರಾಮನ ವಿಷಯವಂತೂ ಈ ಕಾಲದಲ್ಲಿ ತುಂಬಾ ವಿವಾದಾತ್ಮಕವೆನಿಸಿಬಿಟ್ಟಿದೆ. ವೇದ-ಧರ್ಮ-ಶಾಸ್ತ್ರ-ಪುರಾಣ, ಮುಂತಾದ ಪರಂಪರಾಗತ ವಿಚಾರಧಾರೆಯ ಮೌಲ್ಯಗಳು ಟೀಕೆಗಳಿಗೆ ಗುರಿಯಾಗುತ್ತ- "ಶೇಷಂ ಕೋಪೇನ ಪೂರ್ಯತೇ"- ಎಂಬಂತೆ ಅತ್ಯಂತ ಕಟುವಾದ ಕೀಳುದರ್ಜೆಯ ಮಾತುಗಳ ಬಳಕೆಯಿಂದ ಪರ್ಯವಸಾನಗೊಳಿಸಲ್ಪಡುವುದೂ ಇದೆ. ತಪ್ಪು ಕಲ್ಪನೆಯ ಟೀಕೆಗಳು ಹುಟ್ಟಿಕೊಂಡಾಗ ಅವುಗಳಿಗೆ ಸಮಾಧಾನಕರ ಉತ್ತರಗಳೂ ಬರಬಹುದು. ಆದರೆ ಈ ಉತ್ತರಗಳು ಟೀಕಾಕಾರರಿಗೆ ಸಮರ್ಪಕ ಎನಿಸಿಬಿಡುತ್ತವೆ ಎಂದೇನೂ ಇಲ್ಲ. ಹೀಗಾಗಿ ಈ ಬಗೆಯ ವಾದ-ಪ್ರತಿವಾದಗಳು ಹಾಗೆಯೇ ಉಳಿದುಕೊಂಡು ಮತ್ತೆ ಯಾವಾಗಲಾದರೂ ತಲೆ ಎತ್ತುತ್ತಿರುತ್ತವೆ. ಹೇಗೂ ಇರಲಿ. ಶ್ರೀವಾಲ್ಮೀಕಿ ರಾಮಾಯಣದಲ್ಲಿ ಬರುವ "ಶಂಬೂಕ ವಧೆ" ದೃಷ್ಟಿಯಿಂದ ಶ್ರೀರಾಮನ ಧರ್ಮಜ್ಞತೆಯನ್ನು ವಿವೇಚಿಸುವುದು ಪ್ರಸ್ತುತ ಕಿರು ಲೇಖನದ ಉದ್ದೇಶ.

ಮಾನವ ಜನಾಂಗದ ಸಾಹಿತ್ಯದಲ್ಲಿಯೇ ಮೊಟ್ಟಮೊದಲ ಸಾಹಿತ್ಯಗಳೆಂದರೆ ವೇದಗಳು. ಈ ವೇದಗಳು ಮನುಷ್ಯರ ಇಹ-ಪರಗಳೆರಡರ ಸುಖ-ಸಾಧನೆಯ ರೀತಿ-ನೀತಿಗಳನ್ನು ನಿರ್ದೇಶಿಸಲೆಂದೇ ಹೊರಟಿವೆ. ಆ ಎಲ್ಲ ರೀತಿ-ನೀತಿಗಳೇ "ಧರ್ಮ" ಎನಿಸಿಕೊಂಡಿವೆ. ಕೇವಲ ಎರಡೇ ಅಕ್ಷರಗಳ ಈ "ಧರ್ಮ" ಎಂಬ ಪದದ ವ್ಯಾಪ್ತಿ ಮಾತ್ರ ಬ್ರಹ್ಮಾಂಡದಷ್ಟೇ ದೊಡ್ಡದು. ಆದ್ದರಿಂದಲೇ **"ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ"**- ಈ ಜಗತ್ತಿಗೆ ಧರ್ಮವೇ ತಳಹದಿ ಎನ್ನುತ್ತದೆ ವೇದ. ವೇದಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಅವುಗಳ ಅಂತರಾರ್ಥವನ್ನು ಅರಿತುಕೊಳ್ಳುವುದು ತೀರಾ ಕಷ್ಟಸಾಧ್ಯವಾಗಿದ್ದು, ಅವುಗಳ ಬೋಧನೆಗಳು ಸಾಮಾನ್ಯ ಜನರಿಗೆ ಸರಳ ರೀತಿಯಲ್ಲಿ ಲಭ್ಯವಾಗಬೇಕೆಂಬ ಉದ್ದೇಶದಿಂದಲೇ ಶಾಸ್ತ್ರಗಳು ನಂತರ ಪುರಾಣ-ಕಾವ್ಯ-ಇತಿಹಾಸಗಳು ಹುಟ್ಟಿಕೊಂಡವು. ಮನುಷ್ಯನ ನಡೆ-ನುಡಿ-ಕೃತಿಗಳು ತನ್ನ ಬದುಕು ಒಳ್ಳೆಯದಾಗುವಂತೆ ಇದ್ದು ರಾಷ್ಟ್ರದ ಸಮಷ್ಟಿ ಜೀವನಕ್ಕೆ ಪೋಷಕವಾಗಿರಬೇಕೇ ಹೊರತು ಸಮಾಜಕ್ಕೆ ಕಂಟಕಪ್ರಾಯವಾಗಿ ಇರಬಾರದು ಎಂಬುದೇ ಧರ್ಮ. ಅದನ್ನೇ ಈ ಎಲ್ಲ ಗ್ರಂಥಗಳೂ ಸಾರಿ ಹೇಳುತ್ತವೆ. ಆಧ್ಯಾತ್ಮಿಕ ಸಂಬಂಧವಾದ ಕರ್ಮಾನುಷ್ಠಾನ-ಮಡಿವಂತಿಕೆಗಳಷ್ಟೇ "ಧರ್ಮ" ಎಂದು ಸಂಪ್ರದಾಯವಾದಿಗಳು ತಿಳಿಯುವುದು ; ಧರ್ಮವೆಂಬುದು ಕೇವಲ ಮತೀಯವಾದ ಗೊಡ್ಡುನಂಬಿಕೆಯಾಗಿದ್ದು, ನಮಗೂ ಅದಕ್ಕೂ ಸಂಬಂಧವೇ ಇಲ್ಲ ಎಂದು ಪ್ರಗತಿಶೀಲರೆನಿಸಿಕೊಂಡವರು ತಿಳಿಯುವುದು ; ಈ ಎರಡೂ ತೀರ ಸಂಕುಚಿತ ಭಾವನೆಗಳೇ ಸರಿ. ಇವು ಸಮಷ್ಟಿಜೀವನ-ರಾಷ್ಟ್ರದ ಪ್ರಗತಿಯ ಮೇಲೆ ಮಾಡುತ್ತಿರುವ ಪ್ರಬಲ ಆಘಾತವನ್ನು ನಾವೀಗ ಅನುಭವಿಸುತ್ತಿದ್ದೇವೆ. "ಅರ್ಥ-ಎಂದರೆ ಸುಖ-ಸಾಧನೆಗಳ ಗಳಿಕೆ, ಕಾಮ - ಎಂದರೆ ಮನಸ್ಸಿನ ಆಸೆಗಳ ಪೂರೈಕೆ, ಇವು ಧರ್ಮಮೂಲವುಳ್ಳವುಗಳಾಗಿರಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ನಾನು ಕೈಗಳನ್ನೆತ್ತಿ ಕೂಗಿ-ಕೂಗಿ ಹೇಳುತ್ತಿದ್ದರೂ ಇತ್ತಕಡೆಗೆ ಯಾರೊಬ್ಬರೂ ಗಮನ ಹರಿಸುತ್ತಲೇ ಇಲ್ಲ"- "ಊರ್ಧ್ವಬಾಹುರ್ವಿರೋಮ್ಯೇಷ ನ ಹಿ ಕಶ್ಚಿತ್ ಶೃಣೋತಿ ಮಾಮ್ | ಧರ್ಮಾದರ್ಥಶ್ಚ ಕಾಮಶ್ಚ ನ ತತ್ಕಿಂ ಸೇವ್ಯತೇ ಬುಧೈಃ ||). ಮಹರ್ಷಿ ವೇದವ್ಯಾಸರೇ ಹೀಗೆ ಪರಿತಪಿಸಿದ್ದುಂಟು. ಯಾವಾಗ ಪ್ರಜಾಧರ್ಮ, ರಾಜಧರ್ಮ, ರಾಷ್ಟ್ರಧರ್ಮ, ಯುಗಧರ್ಮ, ವೃತ್ತಿಧರ್ಮ, ವ್ಯಾಪಾರ ಧರ್ಮ, ವ್ಯವಹಾರ ಧರ್ಮ, ಮುಂತಾದುವು ಧರ್ಮರಹಿತವಾಗುತ್ತವೆಯೋ ಆಗ ರಾಷ್ಟ್ರ-ಸಮಾಜಗಳಿಗೆ ಕೇಡು ಕಟ್ಟಿಟ್ಟದ್ದು, ಶ್ರೀರಾಮಾಯಣದ ಶಂಬೂಕ ವಧೆ ಪ್ರಸಂಗವನ್ನು ರಾಜಧರ್ಮ-ಯುಗಧರ್ಮಗಳ ಹಿನ್ನೆಲೆಯಲ್ಲಿ ವಿಚಾರಮಾಡಿ ಶ್ರೀರಾಮನ ಧರ್ಮ ಪ್ರಜ್ಞೆಯನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಶಂಬೂಕ ವಧೆಯ ವಿಷಯವು ರಾಮಾಯಣದ ಉತ್ತರಕಾಂಡದಲ್ಲಿದೆ (ಸರ್ಗ-೭೩ ರಿಂದ ೭೬ ಪೂರ್ತಿ- ಶ್ಲೋಕ- ೧೫ರಿಂದ ಪೂರ್ತಿ). ಅದರ ಸಾರಾಂಶ ಇಷ್ಟು - ಶ್ರೀರಾಮನ ಆಳ್ವಿಕೆಯ ಕಾಲದಲ್ಲಿ ಬ್ರಾಹ್ಮಣನೊಬ್ಬನ 14 ವರ್ಷದ ಮಗ ಅಕಾಲ ಮರಣಕ್ಕೆ ತುತ್ತಾಗುತ್ತಾನೆ. ಬಾಲಕನ ಶವದೊಂದಿಗೆ ರಾಜದ್ವಾರಕ್ಕೆ ಬಂದ ಬ್ರಾಹ್ಮಣನು "ನಾನು ಇದುವರೆಗೆ ಯಾವ ಅಧರ್ಮ ಕಾರ್ಯವನ್ನೂ ಮಾಡಲಿಲ್ಲ. ಆದರೂ ಈ ಪುತ್ರಶೋಕ ನನಗೆ ಒದಗಿದೆ. ಅದರಿಂದ ಇದಕ್ಕೆ ರಾಜಾರಾಮಚಂದ್ರನ ಯಾವುದೋ ಪ್ರಬಲ ಅಧರ್ಮದ ಕೃತಿಯೇ ಕಾರಣವಾಗಿರಬೇಕು. ರಾಜನೇ ! ನನ್ನ ಒಬ್ಬನೇ ಮಗನನ್ನು ಬದುಕಿಸಿಕೊಡು. ಇಲ್ಲದಿದ್ದರೆ ಪತ್ನಿಯೊಡನೆ ಇಲ್ಲಿಯೇ ಪ್ರಾಣ ಬಿಡುತ್ತೇನೆ"- ಎಂದು ಪ್ರಲಪಿಸುತ್ತಾನೆ. ಅಷ್ಟೇ ಅಲ್ಲದೆ ಬ್ರಾಹ್ಮಣನು ಹೇಳಿದ ಈ ಮುಂದಿನ ಮಾತುಗಳೂ ಗಮನಾರ್ಹವಾಗಿವೆ-

ರಾಜದೋಷೈರ್ವಿಪದ್ಯಂತೇ ಪ್ರಜಾಹ್ಯವಿಧಿಪಾಲಿತಾಃ ।
ಅಸದ್ವೃತ್ತೇ ತು ನೃಪತಾವಕಾಲೇ ಮ್ರಿಯತೇ ಜನಃ ॥

(ಸರ್ಗ- ೭೩ ; ಶ್ಲೋಕ- ೧೬)

ರಾಜನು ವಿಧಿಪೂರ್ವಕವಾಗಿ ಪ್ರಜಾಪಾಲನೆ ಮಾಡದಿದ್ದರೆ, ಪ್ರಜೆಗಳು ಕಷ್ಟಕ್ಕೆ ಸಿಕ್ಕಿ ತೊಳಲಬೇಕಾಗುತ್ತದೆ ; ಆಳುವವನು ಕೆಟ್ಟ ದಾರಿ ಹಿಡಿದಾಗ ಜನರು ಅಕಾಲ ಮೃತ್ಯುವಿಗೆ ತುತ್ತಾಗುತ್ತಾರೆ.

ಯದ್ವಾಪುರೇಷ್ವಯುಕ್ತಾನಿ ಜನಾ ಜನಪದೇಷು ಚ ।
ಕುರ್ವತೇ ನ ಚ ರಕ್ಷಾಸ್ತಿ ತದಾಕಾಲಕೃತಂ ಭಯಮ್ ॥ (ಶ್ಲೋ-೧೭)

ಅಥವಾ ರಾಜಧಾನಿಯಲ್ಲಿಯೋ, ರಾಜ್ಯದ ಯಾವುದೇ ಸ್ಥಳದಲ್ಲಿಯೋ ಯಾರೋ ಮಾಡುವ ಕೆಟ್ಟಕೆಲಸಕ್ಕೆ ತಡೆಯಿಲ್ಲದಾದಾಗಲೂ, ಈ ರೀತಿ ಅಕಾಲ ಮರಣದ ಭಯವುಂಟು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಾಹ್ಮಣ ಪ್ರಲಾಪ ಶ್ರೀರಾಮನ ಗಮನಕ್ಕೂ ಬಂದಿತು. ದುಃಖಿತನಾದ ರಾಮನು ವಸಿಷ್ಠರೇ ಮೊದಲಾದ ಧರ್ಮಜ್ಞರನ್ನೂ - ಪುರಪ್ರಮುಖರನ್ನೂ ಬರಮಾಡಿಕೊಂಡು ಅವರ ಮುಂದೆ ಈ ವಿಷಯ ಮಂಡಿಸಿ ಸಲಹೆ ಕೇಳುತ್ತಾನೆ. ವಸಿಷ್ಠರೊಡನೆ ನಾರದಮಹರ್ಷಿಗಳೂ ಬಂದಿದ್ದು, ಅವರು ಆ ಸಭೆಯಲ್ಲಿ-"ಯುಗಧರ್ಮ ರಾಜಧರ್ಮ, ಪ್ರಜಾಧರ್ಮ, ವರ್ಣಾಶ್ರಮ ವ್ಯವಸ್ಥೆ"ಗಳ ಅಂತರಾರ್ಥವನ್ನು ವಿವರಿಸಿ, "ನಿನ್ನ ರಾಜ್ಯದಲ್ಲಿ ಎಲ್ಲಿಯೋ ವಿಹಿತವಲ್ಲದ ಕಾರ್ಯ ನಡೆದಿದೆ. ಅದನ್ನು ಪತ್ತೆಮಾಡಿ ಪ್ರತಿಬಂಧಿಸುವುದೇ ನಿನ್ನ ಕರ್ತವ್ಯ. ಆಗ ಧರ್ಮವು ವೃದ್ಧಿಯಾಗುತ್ತದೆ. ಪ್ರಜೆಗಳ ಆಯುಸ್ಸು ಹೆಚ್ಚುತ್ತದೆ. ಈ ಹುಡುಗನೂ ಜೀವಂತನಾಗುತ್ತಾನೆ"- ಎಂದು ಸಲಹೆ ನೀಡುತ್ತಾರೆ. (ಸರ್ಗ- ೭೩ ; ಶ್ಲೋಕ ೮ ರಿಂದ ೩೩). ನಾರದರು ಹೇಳಿದ ಒಂದು ಮಾತನ್ನಂತೂ ಇಂದು ಸಂಪ್ರದಾಯವಾದಿಗಳೂ ಹಾಗೂ ಪ್ರಗತಿಶೀಲರು ಗಮನಿಸುವುದು ಅತ್ಯಗತ್ಯ-

ಹೀನವರ್ಣೋ ನೃಪಶ್ರೇಷ್ಠ ತಪ್ಯತೇ ಸುಮಹತ್ತಪಃ ।
ಭವಿಷ್ಯತ್ ಶೂದ್ರಯೋನ್ಯಾಂ ವೈ ತಪಶ್ಚರ್ಯಾಕಲೌಯುಗೇ ॥

ಶ್ಲೋಕ-೨೭

ಶೂದ್ರನೊಬ್ಬ ಈಗ ಎಲ್ಲಿಯೋ ಮಹತ್ತರ ತಪೋನಿರತನಾಗಿದ್ದಾನೆ. ಕಲಿಯುಗದಲ್ಲಿ ಮಾತ್ರ ಶೂದ್ರರೂ ತಪಸ್ಸು ಮಾಡುವುದು ಧರ್ಮಸಮ್ಮತ. ಅಂದರೆ, ಈ ಯುಗದಲ್ಲಿ (ತ್ರೇತಾಯುಗದಲ್ಲಿ) ಅದು ಅಧರ್ಮ. (ಈ ಮಾತು ಹಿಂದೆಯೇ ಬಂದಿದೆ.)

ಇಷ್ಟಾದ ಮೇಲೆ ಶ್ರೀರಾಮನು ಬಾಲಕನ ಮೃತದೇಹವನ್ನು ಕೆಡದಂತೆ ರಕ್ಷಿಸಿಡಲು ಲಕ್ಷ್ಮಣನಿಗೆ ಸೂಚನೆ ನೀಡಿ, ಪುಷ್ಪಕ ವಿಮಾನವೇರಿ ಹೊರಟು ಶೂದ್ರ ತಪಸ್ವಿಯನ್ನು (ಶಂಬೂಕನನ್ನು) ಪತ್ತೆಮಾಡಿ, ಅವನನ್ನು ವಧಿಸುತ್ತಾನೆ. ಆ ಕ್ಷಣದಲ್ಲಿ ಈ ಮೃತ ಬಾಲಕನು ಪುನಃ ಜೀವಂತನಾಗುತ್ತಾನೆ. ಇದು ಮುಂದಿನ ಕಥೆ.

"ಒಳ್ಳೆಯ ಕೆಲಸದಲ್ಲಿ (ತಪಸ್ಸು) ನಿರತನಾದವನೊಬ್ಬನನ್ನು ಸಂಹರಿಸಿದ ರಾಮನು ದೇವರ ಅವತಾರವೆನ್ನುವುದು ಶುದ್ಧ ಮೂರ್ಖತನ. ಜಾತೀಯತೆ-ಭೇದ ಭಾವನೆ ನೆಲೆಗೊಳ್ಳಲು ಅಧಿಕಾರ ಶಕ್ತಿಯನ್ನು ಬಳಸಿದ ಅವನು ಅನ್ಯಾಯಗಾರ. ಇಂತಹ ಪ್ರತಿಗಾಮಿ ಘೋರಣೆಗಳನ್ನು ಬೋಧಿಸುವ ಪುರಾಣ ಮುಂತಾದ ಗ್ರಂಥಗಳು ಜನಸಾಮಾನ್ಯರ ಪ್ರಗತಿಯನ್ನೇ ಕುಂಠಿತಗೊಳಿಸಿವೆ- ಮುಂತಾದ ಟೀಕೆಗಳನ್ನು ನಾವಿಂದು ಕೇಳುತ್ತಿದ್ದೇವೆ. ಆದರೆ, ಶ್ರೀರಾಮನು ಯುಗಧರ್ಮ- ರಾಜಧರ್ಮಗಳಿಗೆ ಅನುಗುಣವಾಗಿ, ಮತ್ತು ಆ ಕಾಲದಲ್ಲಿ ಪ್ರಜೆಗಳು ಸ್ವೀಕರಿಸಿದ್ದ ವ್ಯವಸ್ಥೆಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತಕ್ಕಂತೆ ಧರ್ಮಸೂಕ್ಷ್ಮವನ್ನು ಅರಿತು ಕರ್ತವ್ಯ ನಿರ್ವಹಿಸಿದ್ದಾನೆಯೇ ಹೊರತು ಬೇರೆಯಲ್ಲ. ಇಲ್ಲಿ ಕರ್ತವ್ಯವೆಂದರೆ, ಮಾನವ ಕೋಟಿಯು "ಸಂವಿಧಾನ"ವಾದ ವೇದದ ಧರ್ಮರಕ್ಷಣೆ. ಇಂದಿನ ಪ್ರಜಾಪ್ರಭುತ್ವದಲ್ಲಿ ಕೂಡ ಪ್ರಜೆಗಳು ಒಪ್ಪಿರುವ "ಸಂವಿಧಾನ"ಕ್ಕೆ ಚ್ಯುತಿಯುಂಟಾಗದಂತೆ ನೋಡಿಕೊಳ್ಳುವುದು ಆಳುವವರ ಹೊಣೆಯೇ ಆಗಿದೆಯಷ್ಟೇ. ಅಂದಮೇಲೆ ಶ್ರೀರಾಮನನ್ನು ಅಧರ್ಮಿ ಎಂದು ತೆಗಳುವುದು ವಿವೇಚನಾ ಶೂನ್ಯತೆಯನ್ನಷ್ಟೇ ತೋರಿಸುತ್ತದೆ. ಇನ್ನು- "ರಾಮಾಯಣಾದಿ ಗ್ರಂಥಗಳು ಜಾತೀಯತೆ, ಮೇಲು-ಕೀಳು ಭಾವನೆಯನ್ನು ಪ್ರಚೋದಿಸುತ್ತಿವೆ" ಎಂಬ ಅಪವಾದ. ಇಂತಹ ಟೀಕೆಗಳನ್ನು ಬಲವಾಗಿ ಪ್ರತಿಪಾದಿಸುವವರು- "ಮುಂದೆ ಕಲಿಯುಗದಲ್ಲಿ ಶೂದ್ರರಿಗೂ ತಪಸ್ಸಿನ ಅಧಿಕಾರವಿದೆ"- ಎಂಬ ನಾರದ ಮಹರ್ಷಿಗಳ ಸ್ಪಷ್ಟವಾದ ವಾಕ್ಯವನ್ನು ನೋಡಿಯೇ ಇಲ್ಲವೇ ? ಅಥವಾ ನೋಡಿಯೂ ತಮ್ಮ ಪ್ರತಿಪಾದನೆ ಅಸಂಗತವೆನಿಸುತ್ತದೆಯೆಂಬ ಭಯದಿಂದ ಆ ವಾಕ್ಯವನ್ನು ಮರೆಮಾಚುತ್ತಿದ್ದಾರೆಯೇ ?

ಧರ್ಮ ಸೂಕ್ಷ್ಮದ ವಿಷಯ ಬರೆಯಲು ಬೇಕಾದಷ್ಟಿದೆ. ಶ್ರೀರಾಮನ ಮನೋಭಾವನೆಯ ವಿಷಯದಲ್ಲಿ ಭವಭೂತಿಯ "ಉತ್ತರರಾಮ ಚರಿತೆ"ಯ ಸ್ವಾರಸ್ಯಕರ ಶ್ಲೋಕವೊಂದರ ಉಲ್ಲೇಖದೊಂದಿಗೆ "ಧರ್ಮಜ್ಞ ಶ್ರೀರಾಮಚಂದ್ರ" ಕಿರುಲೇಖನವನ್ನು ಸಂಪನ್ನಗೊಳಿಸುತ್ತಿದ್ದೇನೆ.

ಹೇ ! ಹಸ್ತ ದಕ್ಷಿಣ ಮೃತಸ್ಯ ಶಿಶೋರ್ದ್ವಿಜಸ್ಯ
ಜೀವಾತವೇ ವಿಸೃಜ ಶೂದ್ರಮುನೌ ಕೃಪಾಣಮ್ |
ರಾಮಸ್ಯ ಬಾಹುರಸಿ ನಿರ್ಭರಗರ್ಭಖಿನ್ನ
ಸೀತಾ ವಿವಾಸನ ಪಟೋಃ ಕರುಣಾ ಕುತಸ್ತೇ ||

ಎಲೈ ಬಲಹಸ್ತವೇ ! ಸತ್ತುಹೋದ ಬ್ರಾಹ್ಮಣ ಬಾಲಕನನ್ನು ಮರಳಿ ಬದುಕಿಸಲು ಈ ಶೂದ್ರ ತಾಪಸನನ್ನು ಕತ್ತಿಯಿಂದ ಕತ್ತರಿಸಿಹಾಕು. ಗರ್ಭಭಾರದಿಂದ ಬಳಲಿದ ಸೀತೆಯನ್ನೇ ಕಾಡಿಗೆ ಅಟ್ಟಿದ ನಿಷ್ಕರುಣೆಯಾದ ಈ ರಾಮನ ಬಾಹುವಲ್ಲವೇ ನೀನು ? ನಿನಗೆಲ್ಲಿಯ ಕರುಣೆ ?

ಇಂತಹ ಮನಸ್ಥಿತಿಯಲ್ಲಿಯೂ ಶಾಸ್ತ್ರದ - ಪ್ರಜೆಗಳ ಒಳಿತಿಗಾಗಿ ವಿಹಿತ ಕರ್ತವ್ಯ ನೆರವೇರಿಸಬೇಕೆಂಬುದೇ ಧರ್ಮಜ್ಞತೆಯಲ್ಲವೇ ?

ಹರಿಹರಪುರ ಬಿ. ಸುಬ್ರಹ್ಮಣ್ಯಂ

Sri Vidyabharathi Book Centre, Sringeri

CC-0. In Public Domain. Digitized by eGangotri

With the best compliments from :

ANNAPURNA ENTERPRISES

17. Usmaniya Building
33, N. R. Road, BANGALORE-2

Agents for :—

DANDEKAR RICE MILL PLANTS of Half, One, Two and Four tonne capacity Rice Mills of Schule Economy and Emery Type Shellers and Parboiling and drying Equipments. Also Modernisation Kits.

With best compliments from :

Messers N. S. Padaki

HANUMANTHA RAO STREET
MYSORE-570001

Distributors :

Advani Orelikon Ltd., Bombay
Asiatic Oxygen, Ltd., Calcutta

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ರಾಮಾಯಣ - ಒಂದು ಅಧ್ಯಯನ

ರಾಕ್ಷಸರನ್ನು ಕೊಲ್ಲುವುದಾಗಿ ಋಷಿಗಳ ಮುಂದೆ ರಾಮನು ಪ್ರತಿಜ್ಞೆ ಮಾಡಿ ದುದನ್ನು ಕೇಳಿ ಭಯದಿಂದ ಕೂಡಿದ ಸೀತೆಯು ವೈರಬುದ್ಧಿಯಿಲ್ಲದ ರಾಕ್ಷಸರನ್ನು ಕೊಲ್ಲದಿರುವಂತೆ ಪ್ರೇಮಪೂರ್ವಕವಾಗಿ ತನ್ನ ಪತಿಯನ್ನು ಪ್ರಾರ್ಥಿಸುತ್ತಾಳೆ– "ಹೃದ್ಯಯಾ ಸ್ನಿಗ್ಧಯಾವಾಚಾ". ಸ್ನಿಗ್ಧವಾಕ್ಕೆಂದರೆ ಸ್ನೇಹಪ್ರವೃತ್ತವಾದ ಮಾತೆಂದರ್ಥ. ಇದರಿಂದ ಸೀತೆಯು ಹೇಳುವುದೆಲ್ಲವೂ ರಾಮನಲ್ಲಿ ತನಗಿರುವ ಸ್ನೇಹ ದಿಂದಲೇ ಹೊರತು ಬೇರೆಯಲ್ಲವೆಂಬುದು ಸೂಚಿತವಾಗುವುದು. ರಾಮನು ಋಷಿಗಳ ಮುಂದೆ ಮಾಡಿದ ಪ್ರತಿಜ್ಞೆಯು ಸೀತೆಗೆ ತಿಳಿದಿದ್ದರೂ, ರಾಮನಿಗೆ ರಾಕ್ಷಸರೊಡನೆ ವಿರೋಧವುಂಟಾದರೆ ಆತನು ತನ್ನನ್ನಗಲಿ ಕ್ಲೇಶಕ್ಕೆ ಗುರಿಯಾಗಬಹುದೆಂದು ತಿಳಿದು ಸೀತೆಯು ತನ್ನ ಪ್ರೇಮಾತಿಶಯದಿಂದ ಈ ಮಾತನ್ನಾಡಿರುತ್ತಾಳೆ. ಆರ್ತ ರಕ್ಷಣೆಯೇ ಕ್ಷತ್ರಿಯಧರ್ಮವೆಂದೂ, ತನ್ನ ಆಶ್ರಿತರ ವಿರೋಧಿಗಳೇ ತನ್ನ ವಿರೋಧಿಗಳೆಂದು ನಿರೂಪಿಸಿ, ಜಾನಕಿಗೆ ಮನೋಜ್ಞವಾಗಿ ಉತ್ತರಿಸುತ್ತಾನೆ ಶ್ರೀರಾಮ. ಪ್ರಾಣಕ್ಕಿಂತಲೂ ಪ್ರಿಯಳಾದ ವೈದೇಹಿಯನ್ನಾಗಲೀ, ಪ್ರಿಯ ಸಹೋದರನಾದ ಲಕ್ಷ್ಮಣನನ್ನಾಗಲೀ ಅಗಲುವ ಸಂದರ್ಭ ಬಂದರೂ, ಆಡಿದ ಮಾತಿಗೆ ತಾನು ತಪ್ಪುವುದಿಲ್ಲವೆನ್ನುವ ಶ್ರೀರಾಮನ ದೃಢಸಂಕಲ್ಪ ಯಾರನ್ನಾದರೂ ಆಶ್ಚರ್ಯಗೊಳಿಸೀತು !

ಅನಂತರ ರಾಮನು ತನ್ನನ್ನು ಹಿಂಬಾಲಿಸಿ ಬಂದ ಧರ್ಮಭೃತನೆಂಬ ಮುನಿ ಯಿಂದ ಪಂಚಪ್ಸರವೆಂಬ ಸರಸ್ಸಿನ ಪ್ರಭಾವವನ್ನು ಕೇಳಿ, ಅಲ್ಲಿನ ಋಷ್ಯಾಶ್ರಮಗಳಲ್ಲಿ ಸ್ವಲ್ಪ ಕಾಲವಿದ್ದು, ಅಲ್ಲಿಂದ ಸುತೀಕ್ಷಾಶ್ರಮಕ್ಕೆ ಬರುತ್ತಾನೆ. ಸುತೀಕ್ಷ್ಣಋಷಿಯನ್ನು ಸಂದರ್ಶಿಸಿದ ನಂತರ, ಋಷಿಯಿಂದ ಅಗಸ್ತ್ಯಾಶ್ರಮದ ಮಾರ್ಗವನ್ನು ಕೇಳಿ ತಿಳಿದು ಕೊಂಡು ಸೌಮಿತ್ರಿಗೆ ಅಗಸ್ತ್ಯಮುನಿಯ ಮಹಿಮೆಯನ್ನು ವಿವರಿಸುತ್ತಾ, ಅಗಸ್ತ್ಯಭ್ರಾತನ ಆಶ್ರಮದಲ್ಲಿ ಒಂದು ರಾತ್ರಿ ತಂಗುತ್ತಾನೆ. ಅಲ್ಲಿಂದ ಮುಂದೆ ಅಗಸ್ತ್ಯಾಶ್ರಮದ ಕಡೆಗೆ ಹೊರಡಲು ರಾಮನು ಮುಂದೆ ಪ್ರಯಾಣಮಾಡುತ್ತಿರಲು, ಮಧ್ಯದಲ್ಲಿ ಸೀತೆಯೂ, ಹಿಂದೆ ಧನುರ್ಧಾರಿಯಾದ ಲಕ್ಷ್ಮಣನೂ ಹೋಗುತ್ತಿದ್ದನೆಂದು ವರ್ಣಿಸಲಾಗಿದೆ—

ಅಗ್ರತಃ ಪ್ರಯಯೌರಾಮಃ ಸೀತಾ ಮಧ್ಯೇ ಸುಮಧ್ಯಮಾ ।
ಪೃಷ್ಠತಸ್ತು ಧನುಷ್ಪಾಣಿಃ ಲಕ್ಷ್ಮಣೋಽನುಜಗಾಮ ಹ ॥

(ಈ ಶ್ಲೋಕದಲ್ಲಿ ಪ್ರಣವಾರ್ಥವು ಸೂಚಿತವಾಗುವುದೆಂದು ಕೆಲವರು ವ್ಯಾಖ್ಯಾನಿ ಸುತ್ತಾರೆ.)

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪಾರ ಮಹಿಮನಾದ ಅಗಸ್ತ್ಯಋಷಿಯು ತನ್ನ ಶಿಷ್ಯರ ಮೂಲಕ ರಾಮನಿಗೆ ಅಭೂತಪೂರ್ವವಾದ ಸ್ವಾಗತನ್ನು ನೀಡಿ, ರಘುವಂಶೋತ್ಪನ್ನನೂ ಹಾಗೂ ಧರ್ಮ ನಿರತನೂ ಆದ ಶ್ರೀರಾಮನು ತನ್ನಲ್ಲಿಗೆ ಪ್ರಿಯಾತಿಥಿಯಾಗಿ ಬಂದಿರುವುದು ತನ್ನ ಭಾಗ್ಯ ವಿಶೇಷವೆನ್ನುತ್ತಾನೆ.

ರಾಜಾ ಸರ್ವಸ್ಯ ಲೋಕಸ್ಯ ಧರ್ಮಚಾರೀ ಮಹಾರಥಃ ||
ಪೂಜನೀಯಶ್ಚ ಮಾನ್ಯಶ್ಚ ಭವಾನ್ ಪ್ರಾಪ್ತಃ ಪ್ರಿಯಾತಿಥಿಃ ||

[ಈ ಶ್ಲೋಕಕ್ಕೆ ಕೆಲವು ವ್ಯಾಖ್ಯಾನಕಾರರು ಈ ರೀತಿಯಾಗಿ ಭಾವಾರ್ಥವನ್ನು ಕೊಡುತ್ತಾರೆ—**ಸರ್ವಸ್ಯ ಲೋಕಸ್ಯರಾಜಾ**-ಎಂದರೆ, **"ಪತಿಂವಿಶ್ವಸ್ಯ"** ಇತ್ಯಾದಿ ಶ್ರುತಿ ಪ್ರಮಾಣವನ್ನನುಸರಿಸಿ ಸರ್ವಲೋಕೇಶ್ವರನೆಂದೂ,ಪೂಜನೀಯಂ-ಎಂಬುದರಿಂದ- **"ಇಷ್ಟಾಪೂರ್ತಬಹುಧಾಜಾಯಮಾನಂ ವಿಶ್ವಂಬಿಭರ್ತಿ ಭುವನಸ್ಯ ನಾಭಿಃ-"** ಎಂಬ ಶ್ರುತಿಯಂತೆ ಧರ್ಮಗಳಿಂದ ಲೋಕಾರಾಧ್ಯನೆಂದೂ, ಪ್ರಿಯಾತಿಥಿಃ ಎಂದರೆ ಲೌಕಿಕಾತಿಥಿಗಿಂತ ವಿಲಕ್ಷಣನೆಂದೂ ಭಾವ.]

ಸುವರ್ಣಮಯವಾಗಿ ರತ್ನಖಚಿತವಾದ ವಿಶ್ವಕರ್ಮನಿಂದ ನಿರ್ಮಿತವಾದ ದಿವ್ಯ ಧನುಸ್ಸನ್ನೂ, ಸೂರ್ಯನಂತೆ ಜಾಜ್ವಲ್ಯಮಾನವಾಗಿ ಹೊಳೆಯುತ್ತಿರುವ ಬಾಣ ಗಳನ್ನೂ, ಅಗ್ನಿಯಂತೆ ಜ್ವಲಿಸುವ ಬಾಣಗಳಿಂದ ತುಂಬಿದ ಎರಡು ಬತ್ತಳಿಕೆಗಳನ್ನೂ, ಚಿನ್ನದ ಒರೆಯಲ್ಲಿರುವ ಪ್ರಕಾಶಮಾನವಾದ ಶತಕ್ರತುವಿನಿಂದ ಕೊಡಲ್ಪಟ್ಟ ಖಡ್ಗ ವನ್ನೂ ಶತ್ರುನಿಗ್ರಹಾರ್ಥವಾಗಿ ಪರಿಗ್ರಹಿಸುವಂತೆ ಮಹಾತೇಜಸ್ವಿಯೂ ಪೂಜ್ಯನೂ ಆದ ಅಗಸ್ತ್ಯಮುನಿಯು ಶ್ರೀರಾಮನಿಗೆ ಆದಿವ್ಯಾಯುಧಗಳನ್ನು ಅರ್ಪಿಸುತ್ತಾನೆ. ತಾನು ಹಿಂದೆ ಪರಶುರಾಮನಿಂದ ತೆಗೆದುಕೊಂಡಿದ್ದ ವೈಷ್ಣವ ಧನಸ್ಸನ್ನು ಶ್ರೀರಾಮನು ವರುಣನ ವಶಕ್ಕೆ ಕೊಟ್ಟಿದ್ದನು. ಈಗ ಖರಾದಿ ರಾಕ್ಷಸರ ವಧೆಯು ಸಮಾಪಿಸಿದುದರಿಂದ ಆ ಧನುಸ್ಸನ್ನೇ ಅಗಸ್ತ್ಯಋಷಿಯು ರಾಮನಿಗೆ ಅರ್ಪಿಸಿದನೆಂದು ಭಾವವು.

ಖರಾದಿ ರಾಕ್ಷಸರ ಸಂಹಾರಕ್ಕಾಗಿ ಅಗಸ್ತ್ಯರ ಅನುಜ್ಞೆಯನ್ನು ಪಡೆದು ಸೀತಾ ಲಕ್ಷ್ಮಣ ಸಮೇತನಾಗಿ ಶ್ರೀ ರಾಮನು ಪಂಚವಟಿಯ ಕಡೆ ಹೋಗುತ್ತಿರಲಾಗಿ, ಮಾರ್ಗ ಮಧ್ಯದಲ್ಲಿ ಜಟಾಯುವನ್ನು ಕಂಡು, ಗೃಧ್ರರಾಜನ ವೃತ್ತಾಂತವನ್ನು ಕೇಳುತ್ತಾ ಎಲ್ಲರೂ ಪಂಚವಟಿಗೆ ಬರುತ್ತಾರೆ.

ಪಂಚವಟಿಯಲ್ಲಿ ವಾಸಯೋಗ್ಯವಾದ ಆಶ್ರಮ ನಿರ್ಮಾಣ ಮಾಡೆಂದು ಲಕ್ಷ್ಮಣ ನಿಗೆ ಹೇಳುವ ಸಂದರ್ಭದಲ್ಲಿ, ಆಶ್ರಮಕ್ಕಾಗಿ ನಿರ್ಣಯಿಸುವ ಸ್ಥಳವು ಸೀತೆಗೂ ತನಗೂ ಮತ್ತು ಲಕ್ಷ್ಮಣನಿಗೂ ಮನಸ್ಸಿಗೆ ಒಪ್ಪುವಂತಿರಬೇಕೆನ್ನುತ್ತಾನೆ ರಾಮ. ಈಗ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿರ್ಮಾಣವಾಗುವ ಆಶ್ರಮದ ಸಮೀಪದಲ್ಲಿ ರಮಣೀಯವಾದ ತೋಟಗಳಿರಬೇಕೆಂಬುದ ರಿಂದ ಸೀತೆಯ ಪುಷ್ಪಾಪಚಯಕ್ಕೆ ಅನುಕೂಲವಾಗಿರಬೇಕೆಂದೂ, ಹಳ್ಳತಿಟ್ಟುಗಳಿಲ್ಲ ದಿರಬೇಕೆಂಬುದರಿಂದ ತನ್ನ ಸುಖ ಶಯನಾದಿಗಳಿಗೆ ಅನುಕೂಲಿಸಬೇಕೆಂದೂ, ಸಮಿತ್ತು ಮುಂತಾದುವು ಹತ್ತಿರದಲ್ಲಿರಬೇಕೆಂಬುದರಿಂದ ಲಕ್ಷ್ಮಣನು ನಡೆಸುವ ಸೇವೆಗಳಿಗೆ ಅನುಕೂಲವಾಗಿರಬೇಕೆಂದೂ, ಹೀಗೆ ತನ್ನ ಮೂವರಿಗೂ ಅನುಕೂಲ ವಾದ ಪ್ರದೇಶವನ್ನೇ ನೋಡಬೇಕೆಂಬುದು ಭಾವ.

ಏವಮುಕ್ತಸ್ತುರಾಮೇಣ ಲಕ್ಷ್ಮಣಸ್ಸಂಯತಾಂಜಲಿಃ ।
ಸೀತಾ ಸಮಕ್ಷಂಕಾಕುಸ್ಥಮಿದಂ ವಚನಮಬ್ರವೀತ್ ॥
ಪರವಾನಸ್ಮಿ ಕಾಕುಸ್ಥ ತ್ವಯಿವರ್ಷ ಶತಂ ಸ್ಥಿತೇ ।
ಸ್ವಯಂ ತು ರುಚಿರೇ ದೇಶೇ ಕ್ರಿಯತಾಂ ಇತಿಮಾಂ ವದ ॥

ರಾಮನು ಲಕ್ಷ್ಮಣನಿಗೆ ನಿನ್ನ ಸೌಖ್ಯಕ್ಕೆ ಅನುಕೂಲವಾಗಿರುವಂತೆ ಒಂದಾಶ್ರಮ ವನ್ನು ನಿರ್ಮಾಣಮಾಡು ಎಂದು ಹೇಳಿದಾಗ ಲಕ್ಷ್ಮಣ ಹೇಳುವ ಮಾತು ಅರ್ಥ ಗರ್ಭಿತವಾದುದು. "**ವರ್ಷಶತಂ ಸ್ಥಿತೇ** – ನೂರಾರು ವರ್ಷಗಳಾದರೂ, ಅಥವಾ ಅನಂತಕಾಲದವರೆಗೂ ನಾನು ನಿನಗೆ ಸೇವೆ ಮಾಡುವವನೇ. ನಿನಗೆ ಪರತಂತ್ರ ನಾಗಿದ್ದೇನೆ. ಆದ್ದರಿಂದ ಪರತಂತ್ರನಾದವನಿಗೆ ಅನುರೂಪವಾದ ಆಜ್ಞೆಯನ್ನೇ ಕೊಡು – ಅಂದರೆ, ರಮಣೀಯವಾದ ಪ್ರದೇಶವೊಂದರಲ್ಲಿ ಆಶ್ರಮವನ್ನು ಕಟ್ಟ ಬೇಕೆಂದು ಹೇಳಬೇಕೇ ಹೊರತು, ನನ್ನ ಸೌಕರ್ಯಕ್ಕೆ ಅನುಕೂಲವಾಗುವಂತಲ್ಲ" –ಎಂದು ಹೇಳುತ್ತಾನೆ. ಈ ಮಾತುಗಳನ್ನು ಹೇಳುವಾಗ ಲಕ್ಷ್ಮಣನು ಅತ್ಯಂತ ವಿನಯದಿಂದ ಅಂಜಲಿಬದ್ಧನಾಗಿ ಹೇಳುತ್ತಾನೆ. ಅನಂತರ ವಾಸಕ್ಕಾಗಿ ಮನೋ. ಹರವೂ, ಅತ್ಯುತ್ತಮವೂ ಆದ ಲಕ್ಷ್ಮಣ ನಿರ್ಮಿತವಾದ ಪರ್ಣಶಾಲೆಯನ್ನು ಆನಂದಗೊಂಡ ಶ್ರೀರಾಮನು ಹೇಳುತ್ತಾನೆ–

ಭಾವಜ್ಞೇನಕೃತಜ್ಞೇನ ಧರ್ಮಜ್ಞೇನ ಚ ಲಕ್ಷ್ಮಣ ।
ತ್ವಯಾ ಪುತ್ರೇಣ ಧರ್ಮಾತ್ಮಾ ನ ಸಂವೃತ್ತಃ ಪಿತಾ ಮಮ ॥

ಅಂದರೆ, ರಾಮನ ಮನಸ್ಸಿನ ಭಾವವನ್ನು ತಿಳಿದು ಕುಟೀರವನ್ನು ನಿರ್ಮಿಸಿದನು. ರಾಮನ ಇಂಗಿತವನ್ನರಿತು ಅದಕ್ಕೆ ತಕ್ಕಂತೆ ಪರ್ಣಶಾಲೆಯನ್ನು ನಿರ್ಮಿಸಿದನು. ಹಾಗೇ ಲಕ್ಷ್ಮಣನು ತಾನು ಕೈಗೊಂಡ ಕಾರ್ಯದ ಸ್ವರೂಪವನ್ನು ಚೆನ್ನಾಗಿ ಬಲ್ಲವನು. ತಾನೂ ಸಹ ರಾಜಕುಮಾರನಾಗಿದ್ದರೂ, ರಾಮನ ಜೊತೆಯಲ್ಲಿ ಕಾಡಿಗೆ ಬಂದಿರುವುದು ರಾಮನ ಸೇವೆಗೆಂದು ಸ್ಪಷ್ಟವಾಗಿ ಅರಿತಿರುವುದರಿಂದ ಹಾಗೂ ಅದರಿಂದಲೇ ತನಗೆ ಶ್ರೇಯಸ್ಸೆಂದು ಅರಿತಿರುವುದರಿಂದ ಧರ್ಮಜ್ಞ. ಕಾಡಿನಲ್ಲಿ ರಾಮನ ಸಕಲ ಅನುಕೂಲತೆಯನ್ನೂ ಗಮನಿಸಿ, ಅವನಿಗೆ ಯಾವ ರೀತಿಯ ಕಷ್ಟವೂ ಬಾರದಂತೆ ಎಚ್ಚರಿಕೆ ವಹಿಸುತ್ತಿದ್ದ ಲಕ್ಷ್ಮಣನ ವಿಷಯದಲ್ಲಿ ರಾಮನಾಡುವ

Sri Vidyabharathi Book Centre, Sringeri

CC-O. In Public Domain. Digitized by eGangotri
ಮಾತನ್ನು ನೋಡಿದರೆ, ಲಕ್ಷ್ಮಣನ ಮೇಲೆ ರಾಮನಿಗೆ ಎಂತಹ ವಾತ್ಸಲ್ಯವಿತ್ತೆಂಬುದು ವೇದ್ಯವಾಗುತ್ತದೆ. ತಂದೆಯು ಮಗನ ಎಲ್ಲ ಸೌಖ್ಯಗಳ ಕಡೆಗೆ ಹೇಗೆ ಗಮನಿಸುತ್ತಾನೋ, ಅದೇ ರೀತಿಯಲ್ಲಿ ಲಕ್ಷ್ಮಣನು ನಡೆಯುತ್ತಿದ್ದ. ಆದ್ದರಿಂದಲೇ ರಾಮನು ಹೇಳುವ ಮಾತು "ನಿನ್ನಂತಹ ಮಗನನ್ನು ಪಡೆದ ಧರ್ಮಾತ್ಮನಾದ ನನ್ನ ತಂದೆಯು ನನ್ನ ಪಾಲಿಗೆ ಬದುಕಿರುವಂತಿದೆ." ಎಂತಹ ಅಭಿಮಾನದ ಮಾತು.

ಹೇಮಂತಋತುವು ಪ್ರಾರಂಭವಾದಾಗ ರಾಮನು ಒಮ್ಮೆ ಗೋದಾವರೀ ನದಿಗೆ ಸ್ನಾನಕ್ಕಾಗಿ ಹೊರಟಾಗ ಲಕ್ಷ್ಮಣನೂ ಹಿಂಬಾಲಿಸಿ, ಹೇಮಂತಋತುವನ್ನು ವರ್ಣನೆ ಮಾಡುತ್ತಾ, ಪ್ರಸಂಗವಶಾತ್ ಭರತನ ಕಲ್ಯಾಣಗುಣಗಳನ್ನು ವರ್ಣನೆ ಮಾಡುತ್ತಾನೆ. ಈ ಸಂದರ್ಭದಲ್ಲಿ ಲಕ್ಷ್ಮಣನು ಮಧ್ಯಮ ಮಾತೆಯಾದ ಕೈಕೇಯಿಯನ್ನು ನಿಂದಿಸುವನು. ಇದನ್ನು ಸಹಿಸಲಾರದ ರಾಮನು ಮಾತೃನಿಂದೆಯನ್ನು ಮಾಡಬಾರದೆಂದು ಬುದ್ಧಿವಾದ ಹೇಳುವನು. ಆಗ ಲಕ್ಷ್ಮಣನನ್ನು ಕುರಿತು ಹೇಳುವ ಮಾತು–

ಅತ್ಯಂತ ಸುಖಸಂವೃದ್ಧಃ ಸುಕುಮಾರಃ ಸುಖೋಚಿತಃ ।
ಕಥಂ ನ್ವಪರರಾತ್ರೇಷು ಸರಯೂಮವಗಾಹತೇ ॥

ಅತ್ಯಂತ ಸುಖವಾಗಿ ಬೆಳೆಸಲ್ಪಟ್ಟವನು ; ಸುಕುಮಾರವಾದ ಆಕೃತಿಯುಳ್ಳವನು ; ಅತ್ಯಂತ ಸುಖವಾಗಿ ಇರಬೇಕಾದ ಭರತ ಹೇಗೆ ತಾನೇ ಬೆಳಗಿನ ಜಾವದಲ್ಲಿ ಸರಯೂ ನದಿಯಲ್ಲಿ ಮುಳುಗಲು ಸಮರ್ಥನಾದಾನು. ಏಕೆಂದರೆ, ಭರತನೂ ಸಹ ನಿನ್ನನ್ನು ಅನುಸರಿಸಿ ತಾಪಸ ವೃತ್ತಿಯಲ್ಲಿ ಇರುತ್ತಾನೆ. ಇಂತಹ ಧರ್ಮಾತ್ಮನಾದ ಭರತನು ಕೇವಲ ತನ್ನ ನಡತೆಯಿಂದಲೇ ಸ್ವರ್ಗವನ್ನು ಜಯಿಸಿದ್ದಾನೆ. ಅವನಿಗೆ ಸ್ವರ್ಗಲೋಕವು ಲಭಿಸಿದಂತೆಯೇ ಸರಿ.

ಲಕ್ಷ್ಮಣನು ಭರತನ ವಿಷಯದಲ್ಲಿ ಹೇಳುತ್ತಿದ್ದ ಮಾತುಗಳನ್ನು ಕೇಳಿ ರಾಮನ ಮನಸ್ಸಿನಲ್ಲೂ ಭರತನನ್ನು ನೋಡುವ ಉತ್ಕಟಾಭಿಲಾಷೆಯಾಗುವುದೆಂದು ಸೂಚಿಸುವ ಶ್ಲೋಕ–

ಕದಾ ನ್ವಹಂ ಸಮೇಷ್ಯಾಮಿ ಭರತೇನ ಮಹಾತ್ಮನಾ ।
ಶತ್ರುಘ್ನೇನ ಚ ವೀರೇಣ ತ್ವಯಾ ಚ ರಘುನಂದನ ॥

ಯಾವಾಗ ನಾನು ಭರತನೊಡನೆ ಸೇರುತ್ತೇನೋ ಎಂಬ ಮಾತು, ರಾಮನಿಗೆ ಭರತನ ವಿಷಯದಲ್ಲಿದ್ದ ವಾತ್ಸಲ್ಯವನ್ನು ತೋರಿಸುತ್ತದೆ.

ಗೋದಾವರಿಯಲ್ಲಿ ಸ್ನಾನಮಾಡಿ ಆಶ್ರಮಕ್ಕೆ ಹಿಂದಿರುಗಿದ ನಂತರ ಪ್ರಾತ ರಾಹ್ನಿಕಗಳನ್ನು ಮುಗಿಸಿ, ಮಾತನಾಡುತ್ತಾ ಕುಳಿತಿರುವಾಗ ರಾಕ್ಷಸಿಯಾದ ಶೂರ್ಪಣಖಿಯು ಬರುತ್ತಾಳೆ.

ಶ್ರೀಮತಿ ಡಿ. ಶ್ರೀಮತೀ ಎಂ.ಎ., ಬಿ.ಇಡಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರಾಳ ಶಾಸನದ ವಿರುದ್ಧ ಧರ್ಮಪೀಠ-ದೇಗುಲಗಳ ಪ್ರತಿಭಟನೆ

ನಗರದ ಶ್ರೀ ಶೃಂಗೇರಿ ಶಂಕರ ಮಠದ ಭವ್ಯ "ವಿದ್ಯಾವಿಹಾರ" ಸಭಾಂಗಣ ದಿನಾಂಕ ೮-೧-೯೧ ಪೂರ್ವಾಹ್ನದಿಂದ ಸಂಜೆಯತನಕ ಅಲ್ಲಿ ನಡೆದ ಸಭೆ ಇತ್ತೀಚಿಗಿನ ದಿನಗಳಲ್ಲಿ ವಿನೂತನವಾದುದೆಂದೇ ಹೇಳಬೇಕು. ಸಭೆಯನ್ನು ವ್ಯವಸ್ಥೆಗೊಳಿಸಿದವರು ವಿಶ್ವ ಹಿಂದೂ ಪರಿಷತ್ತಿನ ಕರ್ನಾಟಕ ಶಾಖೆಯವರು. ಸಮಾವೇಶದ ಉದ್ದೇಶ-ರಾಜ್ಯ ಸರ್ಕಾರ ಜಾರಿಗೆ ತರಲಿದೆಯೆಂದು ಹೇಳಲಾದ ಹಿಂದೂ ಧಾರ್ಮಿಕ ದತ್ತಿ ಕಾಯಿದೆಯ ಕರಾಳ ಕಲಮುಗಳ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸುವುದು.

ಶುಭ್ರ-ಸರಳ ವೇದಿಕೆಯ ಮೇಲೆ ನಾಡಿನ ವಿವಿಧ ಭಾಗಗಳಿಂದ ಬಂದಿದ್ದ ಬೇರೆ ಬೇರೆ ಸಂಪ್ರದಾಯಗಳ 46 ಮಂದಿ ಮಠಾಧಿಪತಿಗಳು ಯಾವ ಪ್ರತಿಭೇದವೂ ಇಲ್ಲದೆ ಪರಸ್ಪರ ಹಾರ್ದಿಕತೆ ವ್ಯಕ್ತಪಡಿಸುತ್ತ ಆಸೀನರಾಗಿದ್ದುದು-ಭಾರತದ ಪರಂಪರಾಗತವಾದ - ವೈವಿಧ್ಯತೆಯಲ್ಲಿ ಸಮಾನತೆ.- ವಿಶ್ವಭಾವನೆ - ಏಕತೆಗಳನ್ನು ಪ್ರತಿಬಿಂಬಿಸುವಂತಿತ್ತು. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗಡೆ, ಶ್ರೀ ಶೃಂಗೇರಿ ಜಗದ್ಗುರು ಸಂಸ್ಥಾನದ ಆಡಳಿತಾಧಿಕಾರಿ ಶ್ರೀ ವಿ. ಆರ್. ಗೌರೀಶಂಕರ್, ಮುಂತಾಗಿ ಹಲವು ಧರ್ಮಪೀಠ-ದೇವಾಲಯಗಳ ಪ್ರತಿನಿಧಿಗಳು (ಸುಮಾರು 300ಕ್ಕೂ ಹೆಚ್ಚು ಮಂದಿ) ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಪೂರ್ವಾಹ್ನ ೧೧ ಘಂಟೆಗೆ ಶ್ರವಣಬೆಳಗೊಳದ ಪೀಠಾಧೀಶ ಶ್ರೀ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಮಠಾಧಿಪತಿಗಳ ಅಧಿವೇಶನ ಪ್ರಾರಂಭವಾಯಿತು. ಸಭೆಯ ವೈಶಿಷ್ಟ್ಯಕ್ಕೆ ತಕ್ಕಂತೆ "ಯಂ ಶೈವಾಃ ಸಮುಪಾಸತೇ" ಎಂಬ ಔಚಿತ್ಯಪೂರ್ಣವಾದ ಶ್ಲೋಕದ ಪ್ರಾರ್ಥನೆಯೊಂದಿಗೆ ನಡೆಯಿತು.

ವಿಶ್ವ ಹಿಂದೂ ಪರಿಷತ್ತಿನ ಕರ್ನಾಟಕ ಶಾಖೆಯ ಉಪಾಧ್ಯಕ್ಷ ಶ್ರೀ ಏರ್ಯ ಲಕ್ಷ್ಮೀ ನಾರಾಯಣ ಆಳ್ವರು ಸ್ವಾಗತಿಸಿ, ಸಭೆಯ ಉದ್ದೇಶವನ್ನು ವಿವರಿಸಿದರು. ಕಾನೂನಿನ ಕರಡು ಪ್ರತಿಯ ಸಮಗ್ರ ಅಧ್ಯಯನ ಮಾಡಿರುವ ತಜ್ಞನ್ಯಾಯವಾದಿಗಳು ಹಿಂದೂ ಧಾರ್ಮಿಕ ಭಾವನೆ-ಸಂಸ್ಕೃತಿ-ಸ್ವಾತಂತ್ರ್ಯಗಳಿಗೆ ಈ ಕಾಯಿದೆಯ ಕಲಮುಗಳು ಹೇಗೆ ಕುಠಾರಪ್ರಾಯವಾಗಿದೆ ಎಂಬುದನ್ನು ವಿವರಿಸಿದರು. ವಿವಿಧ ಪೀಠಾಧೀಶರು

Sri Vidyabharathi Book Centre, Sringeri

CC-O. In Public Domain. Digitized by eGangotri

ವಿವೇಚನಾಪೂರ್ಣ-ನಿರ್ದುಷ್ಟ ಅಭಿಪ್ರಾಯಗಳನ್ನು ಸರಳ - ಸುಂದರ - ಮನೋಹರ ಶೈಲಿಯಲ್ಲಿ ಮಂಡಿಸಿ, ಈಗಿನ ಸ್ವರೂಪದಲ್ಲಿ ಈ ಕಾನೂನು ಜಾರಿಗೆ ಬರುವುದನ್ನು ತಡೆಗಟ್ಟಲು ಅಗತ್ಯ ಬಿದ್ದರೆ, ಸತ್ವಪೂರ್ಣ ಹೋರಾಟ ಅಗತ್ಯವೆಂದು ಅಭಿಪ್ರಾಯ ಪಟ್ಟರು.

ಪ್ರಕೃತ ಏಕೀಕೃತ ಕರ್ನಾಟಕದಲ್ಲಿ ಇನ್ನೂ ಜಾರಿಯಲ್ಲಿರುವ ೫ ಬಗೆಯ ಧಾರ್ಮಿಕ ದತ್ತಿ ಕಾಯಿದೆಗೆ ಏಕರೂಪ ಕೊಡುವುದು, ಪೀಠಾಧಿಪತಿಗಳು-ದೇಗುಲ-ಧಾರ್ಮಿಕ ಸಂಸ್ಥೆಗಳ ಸ್ವಾಯತ್ತ ಮಂಡಲಿಯ ರಚನೆ, ಅಂತಹ ಮಂಡಲಿಗೆ ಎಲ್ಲ ಧರ್ಮಸಂಸ್ಥೆಗಳ ಆಗು-ಹೋಗುಗಳನ್ನು ನಿರ್ವಹಿಸುವ ಅಧಿಕಾರ, ಇವಕ್ಕಾಗಿ ಶಾಸನದಲ್ಲಿ ಸೂಕ್ತ ಅವಕಾಶ ಕಲ್ಪಿಸುವುದು - ಇವುಗಳ ಬಗ್ಗೆ ಸರ್ಕಾರವನ್ನು ಒತ್ತಾಯಿಸಬೇಕೆಂಬ ನಿರ್ಣಯ ಶ್ರೀ ಶ್ರೀ ಪೇಜಾವರ ಮಠಾಧೀಶರಿಂದ ಮಂಡಿಸಲ್ಪಟ್ಟು, ಬೇಲಿ ಮಠದ ಶ್ರೀ ಶ್ರೀ ಚರಮೂರ್ತಿ ಶಿವರುದ್ರಸ್ವಾಮಿಗಳಿಂದ ಅನುಮೋದಿತವಾಗಿ ಸಭೆಯಿಂದ ಅಂಗೀಕರಿಸಲ್ಪಟ್ಟಿತು. "ಸ್ವಾಯತ್ತ ಮಂಡಲಿಯ. ರಚನೆ ಸಂಪೂರ್ಣವಾಗಿ ಎಲ್ಲ ಮಠ-ಮಂದಿರಗಳ ಅನುಮತಿಯಂತೆಯೇ ಆಗಬೇಕೆಂಬ "ಶೃಂಗೇರಿ ಶ್ರೀ ಜಗದ್ಗುರು ಸಂಸ್ಥಾನದ ಆಡಳಿತಾಧಿಕಾರಿ ಶ್ರೀ ಗೌರೀಶಂಕರ್ ಅವರ ಸೂಚನೆಯನ್ನು ನಿರ್ಣಯದಲ್ಲಿ ಅಳವಡಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಶ್ವ ಹಿಂದೂ ಪರಿಷತ್ ವ್ಯವಸ್ಥೆಗೊಳಿಸಿದ್ದ ಊಟದ ನಂತರ ೩ ಘಂಟೆಗೆ ದೇವಾಲಯ-ಮಂದಿರಗಳ ಧರ್ಮದರ್ಶಿಗಳ ಅಧಿವೇಶನ ಪ್ರಾರಂಭವಾಯಿತು.

ಹರಿಹರಪುರದ ಶ್ರೀಮಠದ ಪ್ರತಿನಿಧಿ- ಶ್ರೀ ಮಲ್ಲೇಶಯ್ಯನವರ ಧರ್ಮಛತ್ರದ ಪ್ರತಿನಿಧಿ ಶ್ರೀ ಬಿ. ಸುಬ್ರಹ್ಮಣ್ಯಂರವರು ಮಾತನಾಡಿ- "ರಾಷ್ಟ್ರೀಕರಣದ ಸಾಂಕ್ರಾಮಿಕ ಜಾಡ್ಯಕ್ಕೆ ಧರ್ಮಪೀಠ-ಸಂಸ್ಥೆಗಳನ್ನೂ ಎಳೆದು ತಂದು ಗುರಿ ಮಾಡಿದರೆ ಪರಿಣಾಮ ಹೇಗಾಗುತ್ತದೆ" ಎಂಬುದನ್ನು ಉದಾಹರಣೆ ಸಹಿತ ತಿಳಿಸಿದರು.

ಮಾಜಿ ಶಾಸಕ ಶ್ರೀಮುಳ್ಳೂರು ಆನಂದರಾಯರು "ಹಿಂದೆಯೇ ಸಿದ್ಧವಾಗಿ ಮೂಲೆಗೆ ಕೂತಿದ್ದ ಈ ಶಾಸನ ಜಾರಿಗೆ ಬಂದರೆ ಎಲ್ಲ ಧರ್ಮ ಪೀಠಾಧೀಶರು ಧರ್ಮದರ್ಶಿಗಳು - ಅರ್ಚಕರ ಸ್ಥಾನ ಎಷ್ಟು ಕೆಳಮಟ್ಟಕ್ಕೆ ಇಳಿಯುತ್ತದೆ ಮತ್ತು ಸರ್ಕಾರಿ ಅಧಿಕಾರಿಗಳ ಹಿಡಿತ ಹಾಗೂ ರಾಜಕಾರಣಿಗಳ ಚಂಚುಪ್ರವೇಶ ಯಾವ ಪ್ರಮಾಣಕ್ಕೆ ಏರುತ್ತದೆ" ಎಂಬ ಬಗ್ಗೆ ತಮ್ಮ ಅನುಭವ ಪೂರ್ಣ-ಅಧ್ಯಯನಾತ್ಮಕ-ವಿವರಣೆ ನೀಡಿದಾಗ ಕಾಯಿದೆಯ ಕರಾಳ ಸ್ವರೂಪವು ಎಲ್ಲರಿಗೂ ಕಣ್ಣಿಗೆ ಕಟ್ಟಿದಂತಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗೇರಿ ಶ್ರೀ ಶ್ರೀ ಜಗದ್ಗುರು ಸಂಸ್ಥಾನ ಆಡಳಿತಾಧಿಕಾರಿ ಶ್ರೀಗೌರೀಶಂಕರ್ ಅವರು ಮಾತನಾಡಿ– "ಏಕರೂಪ ಶಾಸನ ಜಾರಿ ತರುವ ಭರದಲ್ಲಿ 1200 ವರ್ಷಗಳಿಂದ ರಾಷ್ಟ್ರದ ಆಸ್ತಿಕ ಸಮುದಾಯದಲ್ಲಿ ಆಧ್ಯಾತ್ಮಿಕ ಆಸಕ್ತಿ–ನೈತಿಕ ಬೆಳವಣಿಗೆ ಸಮಗ್ರತೆಗಳ ಭಾವನೆಯನ್ನು ಉಳಿಸಿ – ಪೋಷಿಸಿಕೊಂಡು ಬರುತ್ತಿರುವ ಧರ್ಮಪೀಠ ದೇಗುಲಗಳ ಮಹತ್ತರ ಪಾತ್ರವನ್ನು ಅಳಿಸಿ ಹಾಕುವ ಪ್ರಯತ್ನ ಸಲ್ಲದೆಂದೂ, ರಾಜ್ಯದ ಎಲ್ಲ ಹಿಂದೂ ಧರ್ಮಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಪರಮಾಧಿಕಾರವಿರುವ ಸ್ವಾಯತ್ತ ಮಂಡಲಿಯ ರಚನೆ– ಎಂಬುದು ಎಲ್ಲ ಸಂಬಂಧಪಟ್ಟವರ ಅಭಿಮತಕ್ಕೆ ಒಳಪಟ್ಟು ಆಗಿ, ಅದು ಶಾಸನಬದ್ಧವಾಗಿ ಕಾರ್ಯನಿರ್ವಹಿಸುವಂತಿರಬೇಕೇ ಹೊರತು ಸರ್ಕಾರ ಮತ್ತು ರಾಜಕೀಯ ಹಸ್ತಕ್ಷೇಪ ಅದರಲ್ಲಿ ಬರಬಾರದೆಂದೂ" ಸಲಹೆ ಮಾಡಿದರು. ಈ ಸಲಹೆಗೆ ಇಡೀ ಸಭೆಯಲ್ಲಿ ಪ್ರೋತ್ಸಾಹದ ಪ್ರತಿಕ್ರಿಯೆ ವ್ಯಕ್ತವಾಯಿತು.

ಬೆಂಗಳೂರು ದೊಡ್ಡ ಬಸವಣ್ಣನ ಗುಡಿಯ ಸಂಚಾಲಕ ಶ್ರೀ ಕೇಶವಮೂರ್ತಿಯವರು ಮತ್ತು ಧರ್ಮಸ್ಥಳದ ವೀರೇಂದ್ರ ಹೆಗಡೆಯವರು ವಿಚಾರಪೂರ್ಣ ಅನಿಸಿಕೆ ವ್ಯಕ್ತಪಡಿಸಿದರು.

ಶೃಂಗೇರಿ ಶ್ರೀ ಶ್ರೀ ಜಗದ್ಗುರು ಸಂಸ್ಥಾನದ ಆಡಳಿತಾಧಿಕಾರಿ ಶ್ರೀಗೌರೀಶಂಕರ್ ಅವರು ವ್ಯಕ್ತಪಡಿಸಿದ ಸಲಹೆಯನ್ನು, ಅವರ ಅಂಗೀಕಾರದೊಡನೆ, ಒಂದು ಠರಾವಿನ ರೂಪದಲ್ಲಿ ಸಭೆಯು ಅನುಮೋದಿಸಿತು.

ಈ ಸಂಬಂಧವಾಗಿ ಮುಂದಿನ ಕಾರ್ಯಕ್ರಮ ಕೈಗೊಳ್ಳಲು ಶ್ರೀ ಎರ್ಯ ಲಕ್ಷ್ಮಿನಾರಾಯಣ ಆಳ್ವರ ಸಂಚಾಲಕತ್ವದಲ್ಲಿ ಸಮಿತಿ ರಚಿಸಬೇಕೆಂದು ತೀರ್ಮಾನಿಸಲಾಯಿತು.

ಶಿವಮೊಗ್ಗದ ಶ್ರೀ ನರಸಿಂಹಮೂರ್ತಿಯವರು ಈ ಸಮಾವೇಶದ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಿರ್ದೇಶಿಸಿದರು.

ಸಂಭವನೀಯ ಮಹತ್ತರ ಅಪಾಯವೊಂದರ ಬಗ್ಗೆ ಸಂಬಂಧಪಟ್ಟವರು ಮುಂದಾಗಿಯೇ ಜಾಗ್ರತರಾಗುವಂತೆ ಸಕಾಲದಲ್ಲಿ ಶ್ರಮಿಸಿದ ವಿಶ್ವ ಹಿಂದೂ ಪರಿಷತ್ತಿನ ಸಾಧನೆ ಅಭಿನಂದನೀಯವೇ ಸರಿ.

ವರದಿ : **ಹರಿಹರಪುರ ಬಿ. ಸುಬ್ರಹ್ಮಣ್ಯಂ**

ಬೆಂಗಳೂರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬಿ. ಸುಬ್ರಹ್ಮಣ್ಯ ಶಾಸ್ತ್ರಿ ಅಂಡ್ ಸನ್ಸ್,

(ಕಾಶೀತೀರ್ಥ ಪುರೋಹಿತ್)

ಲೇಟ್ ಬೋಧಾಯನ ರಾಮಶಾಸ್ತ್ರಿಗಳ ಮಕ್ಕಳು
ಶ್ರೀ ಕೃಷ್ಣ ನಿವಾಸ
ಬಿ–4/9, ಹನುಮಾನ್ ಘಾಟ್,
ವಾರಣಾಸಿ– 222 001

ಕಾಶೀ ಯಾತ್ರೆ ಮಾಡುವವರಿಗೆ ಸಕಲ ಸೌಕರ್ಯ ಸೌಲಭ್ಯಗಳನ್ನು ವಾರಣಾಸಿ (ಕಾಶಿ), ಗಯಾ ಮತ್ತು ಅಲಹಾಬಾದ್ (ಪ್ರಯಾಗ) ಗಳಲ್ಲಿ ಒದಗಿಸಲಾಗುತ್ತದೆ. ಮುಂಗಡವಾಗಿಯೇ ಮೇಲ್ಕಂಡ ವಿಳಾಸಕ್ಕೆ ಪತ್ರ ಬರೆಯಿರಿ. ರೈಲ್ವೇ ಸ್ಟೇಷನ್‌ಗೆ ಬಂದು ಕೆಲವು ಏಜೆಂಟರುಗಳು ಮತ್ತು ಪಂಡಾಗಳು ನಿಮ್ಮನ್ನು ಬೇರೆ ಕಡೆ ಒಯ್ಯಲು ಪ್ರಯತ್ನಿಸಬಹುದು. ಅದಕ್ಕೆ ಅವಕಾಶ ಕೊಡಬೇಡಿ

ಶ್ರೀ ಶಂಕರ ಕೃಪಾ :

ಧಾರ್ಮಿಕ ವಿಚಾರಗಳಿಗೆ ಮೀಸಲಾಗಿರುವ ಮಾಸಪತ್ರಿಕೆ

ಚಂದಾ : ಮಹಾಪೋಷಕರು ರೂ. 1000 ಪೋಷಕರು ರೂ. 500

ಆಜೀವ ಸದಸ್ಯರು ರೂ. 250 ವಾರ್ಷಿಕಚಂದಾ ರೂ. 24

ಬಿಡಿ ಪತ್ರಿಕಾ ರೂ. 2–00 ವಿಶೇಷ ಸಂಚಿಕೆ ರೂ. 3

ಕರ್ನಾಟಕ ರಾಜ್ಯದ ಎಲ್ಲಾ ಹೈಸ್ಕೂಲುಗಳಿಗೂ, ಟ್ರೈನಿಂಗ್ ಸಂಸ್ಥೆಗಳಿಗೆಲ್ಲ ಈ ಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು (No. T4, 248, LIB 1/69-70 ತಾ|| 28-12-70) ಸರ್ಕಾರದವರು ಶಿಫಾರಸ್ ಮಾಡಿರುತ್ತಾರೆ.

ಎಲ್ಲಾ ಪ್ರಕಟಣೆಗಳು ದೊರೆಯುವ ಸ್ಥಳ :

ಶ್ರೀ ಸಿ. ಆರ್. ಹರಿಹರನ್
4581, ಗೋಮತಿ, ನರಸಿಂಹರಾಜಮೊಹಲ್ಲಾ, ಮೈಸೂರು–570 007
ಶ್ರೀ ಶಾರದಾ ಟ್ರಸ್ಟ್ ಕಾರ್ಯಾಲಯ
ಶ್ರೀ ಶಂಕರಮಠ, ಶಂಕರಪುರಂ, ಬೆಂಗಳೂರು–560 004.

Sri Vidyabharathi Book Centre, Sringeri

CC-O. In Public Domain. Digitized by eGangotri

ENGLISH

		Rs. P.
1.	Adya Shankaracharya-His Math and Memorials by M. S. Dave	5 00
2.	Sense Perception in Science and Shastras	40 00
3.	The Truth about Kumbakonam Math ; Pt. I and II	5 00
4.	Spot Light on Dharma	2 00
5.	Sringeri Revisited—by T. Ramalingeswara Rao	4 00
6.	His Holiness Sri Sri Abhinava Vidya Teertha Mahaswamigal—Some Anecdotes	6 00
7.	Srimadabhinava Vidya Teertha Vijayam—Part—I	20 00
8.	Devi Kamakshi in Kanchi—by K. R. Venkataraman	5 00
9.	The Jagadguru Replies	15 00
10.	The Self in Advaita—by S. Y. Krishnaswamy	6 00
11.	The date of Shankara—by K. V. Subbaratnam	10 00
12.	Sringeri	25 00
13.	Sri Shankara Bhagavatpada Leelanudhyanam	10 00
14.	Science of Mind Control—Eng. Translation of Sri Sadasivendra's Comm: Yoga Sudhakara on Yoga Sutras by R. M. Umesh	30 00
15.	Sri Dakshina Murthy Stotram—Exhaustive Analysis in English based on Manasallosa of Sri Suresvara and Tattva Sudha of Svāyam Prakāsha Yati—by D. S. Subbaramaiah, in two Vols.	300 00

ಈ ಎಲ್ಲಾ ಪುಸ್ತಕಗಳು ದೊರೆಯುವ ಸ್ಥಳ :

ಶ್ರೀ ಶಾರದಾ ಟ್ರಸ್ಟ್

ಶೃಂಗೇರಿ ಶ್ರೀ ಶಂಕರಮಠ, ಶಂಕರಪುರಂ, ಬೆಂಗಳೂರು-560 004

ಶ್ರೀ ಸುರಸರಸ್ವತೀ ಸಭೆಯ ಸರಳ ಸಂಸ್ಕೃತ ಪರೀಕ್ಷೆಗಳ ಪುಸ್ತಕಗಳಿಗೆ ಸಂಪರ್ಕಿಸಿ :

ಶ್ರೀ ಸುರಸರಸ್ವತೀ ಸಭಾ (ರಿ.), ಶೃಂಗೇರಿ

ಶ್ರೀ ಶಂಕರಮಠ, ಶಂಕರಮಠ ರಸ್ತೆ, ಶಂಕರಪುರಂ, ಬೆಂಗಳೂರು-560 004

ಸಂಪಾದಕರು :

ಪ್ರೊ|| ಎಸ್. ರಾಮಚಂದ್ರ ಶಾಸ್ತ್ರೀ, ಎಂ.ಎ.,

ಶೃಂಗೇರಿ ಶ್ರೀ ಶಂಕರಮಠದ ಆವರಣ, ಶಂಕರಪುರಂ, ಬೆಂಗಳೂರು-560 004

ಪ್ರಕಾಶಕರು :

ಶ್ರೀ ಪಿ. ಆರ್. ಹರಿಹರನ್

Sri Vidyabharathi Book Centre, Sringeri

CC-O. In Public Domain. Digitized by eGangotri

		ರೂ.	ಪೈ.
15.	ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಮಹಾಸ್ವಾಮಿಗಳ ದಿವ್ಯಚರಿತ್ರೆ—ನಂಜನಗೂಡು ಶ್ರೀಕಂಠಶಾಸ್ತ್ರೀ	30	00
16.	ಶಾಂಕರ ಸ್ತೋತ್ರ ಮುಕ್ತಾವಳೀ— ಅನುವಾದ ವಿದ್ವಾನ್ ಟಿ. ನಾ. ವಿಶ್ವನಾಥಶಾಸ್ತ್ರೀ	12	00
17.	ಸತ್ಯಾನ್ವೇಷಣೆ—ಶ್ರೀ ರಾಜಗೋಪಾಲಶರ್ಮಾ	1	25
18.	ಗುಮಾನಿ ಕವಿಯ ಉಪದೇಶ ಶತಕಂ— ಅನುವಾದ ಪ್ರೊ|| ಟಿ. ಎಸ್. ವೆಂಕಣ್ಣಯ್ಯ	12	00
19.	ಶ್ರೀಮಚ್ಛಾರೀರಕ (ಬ್ರಹ್ಮಸೂತ್ರ) ಭಾಷ್ಯಂ— (ಆನಂದಮಯಾಧಿಕರಣದವರೆಗೆ) ಅನುವಾದ ಶೃಂಗಗಿರಿ ಕವಿ ನರಸಿಂಹಶರ್ಮಾ	20	00
20.	ಶೃಂಗಗಿರಿಯ ಸಂತ ಶ್ರೇಷ್ಠ— ಶ್ರೀ ಆರ್. ಕೃಷ್ಣಸ್ವಾಮಿ ಐಯ್ಯರ್ ಅವರ ಆಂಗ್ಲ ಗ್ರಂಥದ ಕನ್ನಡ ಅನುವಾದ: ಶ್ರೀ ಬಿ. ವಿಜಯಕುಮಾರ್	10	50
21.	ಮೂಲಾ ವಿದ್ಯಾ ವಿಮರ್ಶೆ	1	50
22.	ಸಂಖ್ಯೆಗಳಿಂದ ಸ್ಫೂರ್ತಿ—ಎಸ್. ಜಿ. ನರಸಿಂಹಯ್ಯ	20	00
23.	ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳ ಸ್ತೋತ್ರಗಳ ಕನ್ನಡ ಅನು: ಎಸ್. ರಾಮಚಂದ್ರಶಾಸ್ತ್ರೀ ಭಾಗ-೧	6	00
24.	ಶ್ರೀ ಜಗದ್ಗುರು—ಶ್ರೀ ವಿದ್ಯಾತೀರ್ಥ ಪ್ರಕಾಶನ, ಮೈಸೂರು	30	00
25.	ಶೃಂಗಗಿರಿ ಧರ್ಮ ಸಂಸ್ಥಾನ—ಡಾ|| ಎ. ಕೆ. ಶಾಸ್ತ್ರಿ	15	00
26.	ಕನ್ನಡ ಭಗವದ್ಗೀತಾ ಕುಸುಮ ಮಂಜರೀ— ಶ್ರೀಮತ್ಪರಮಹಂಸ ಭೋದಾನಂದ ಭಾರತೀ ಸ್ವಾಮಿಗಳು	2	50
27.	ಧರ್ಮಶಾಸ್ತ್ರ ಕರದೀಪಿಕಾ— ವಿದ್ವಾನ್ ಕೆ. ಕೃಷ್ಣಜೋಯಿಸ್ (೨ನೇ ಆವೃತ್ತಿ)	22	00
28.	ಶ್ರೀ ಸುರೇಶ್ವರಾಚಾರ್ಯರ ಬೃಹದಾರಣ್ಯ ಭಾಷ್ಯವಾರ್ತಿಕ— ಕನ್ನಡ ಅನುವಾದ: ಭಾಗ-೧	40	00
	ಭಾಗ-೨	50	00
	ಭಾಗ-೩	75	00

ಅನುವಾದಕರು : ಪಂಡಿತ ಪ್ರವರ ವಿದ್ವಾನ್ ಕೆ. ಕೃಷ್ಣ ಜೋಯಿಸ್
ಈ ಮೂರು ಭಾಗಗಳನ್ನು ಒಟ್ಟಿಗೆ ಖರೀದಿಸಿದರೆ
ಶೇಕಡಾ 50 ರಿಯಾಯ್ತಿ ಕೊಡಲಾಗುವುದು.

ಶ್ರೀ ಶಾರದಾ ಮುದ್ರಣ ಪ್ರಕಾಶನಾಲಯ, ಮೈಸೂರು-4
Sri Vidyabharathi Book Centre, Sringeri

CC-O. In Public Domain. Digitized by eGangotri

Reg. No. KRNN-8



11C
SRI A. SUBRAMANYA SASTRY
BOOK SELLER
SRI SRINGERI MUTT
SRINGERI
577 139

If undelivered please return to :

Sri P. R. HARIHARAN
PUBLISHER
Temple Road, Narasimharaja Mohalla,
MYSORE-570 007.

Sri Vidyabharathi Book Centre, Sringeri